ಸೋಮವಾರ, ಡಿಸೆಂಬರ್ 30, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 361 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಇ-ತ್ಯಾಜ್ಯ ಬೇಕಿದೆ ಪರಿಹಾರ

5 ವರ್ಷಗಳಲ್ಲಿ 47.89 ಲಕ್ಷ ಮಂದಿಗೆ 'ಮನೋವ್ಯಾಧಿ' ಚಿಕಿತ್ಸೆ 5

'ಮತದಾರರ ಪಟ್ಟಿ ತಿರುಚಲು ಬಿಜೆಪಿ ಯತ್ನ' 9

ಕಾಂಗ್ರೆಸ್ ಆರೋಪ, ಲೋಪಗಳ ಬಗ್ಗೆ ಚರ್ಚೆಗೆ ಆಗ್ರಹ
'ಕೇಂದ್ರ ಸರ್ಕಾರದ ರಹಸ್ಯ ಕಾರ್ಯಸೂಚಿ' 9

ಬಿಡುಗಡೆಯಾಗದ ಪ್ರೋತ್ಸಾಹ ಧನ • ಸಂಕಷ್ಟದಲ್ಲಿ ಹೈನುಗಾರರು

ಹಾಲಿನ ಬಾಕಿ ₹622 ಕೋಟಿ

• ಖಲೀಲಅಹ್ಮದ ಶೇಖ

ಬೆಂಗಳೂರು: ರಾಜ್ಯ ಸರ್ಕಾರ ಹಾಲು ಉತ್ಪಾದಕರಿಗೆ ಪಾವತಿಸಬೇಕಾಗಿರುವ ಹಾಲಿನ ಪ್ರೋತ್ಸಾಹಧನದ ಬಾಕಿ ಮೊತ್ತ ಸುಮಾರು ₹622.54 ಕೋಟಿಗೆ ಏರಿದೆ. ಕಳೆದ ಜೂನ್‌ನಿಂದ ಪ್ರೋತ್ಸಾಹ ಧನ ಬಿಡುಗಡೆ ಆಗಿಲ್ಲ.

ರಾಜ್ಯದಲ್ಲಿ ದೊಡ್ಡ ಸಂಖ್ಯೆಯ ರೈತರು ಹಾಲು ಉತ್ಪಾದನೆಯನ್ನು ಉಪಕಸುಬನ್ನಾಗಿಸಿಕೊಂಡಿದ್ದಾರೆ. ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಸಂಕಷ್ಟಕ್ಕೊಳಗಾಗಿರುವ ರೈತರು ಪ್ರೋತ್ಸಾಹಧನ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ಇದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ ಮಂಡಿಸಿದ ಪೂರಕ ಅಂದಾಜು ಎರಡನೇ ಕಂತಿನಲ್ಲಿ 2024ರ ಆಗಸ್ಟ್‌ನಿಂದ 2025ರ ಫೆಬ್ರುವರಿವರೆಗೆ ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಪಾವತಿಸಲು ₹200 ಕೋಟಿ ವಿನಿಯೋಗಿಸುವುದಾಗಿ ಸರ್ಕಾರ ಹೇಳಿದೆ.

ಹಾಲು ಉತ್ಪಾದಕರು ಸರಬರಾಜು ಮಾಡುವ ಪ್ರತಿ ಲೀಟರ್ ಹಾಲಿಗೆ ಸರ್ಕಾರ ₹5 ಪ್ರೋತ್ಸಾಹಧನ ನೀಡುತ್ತದೆ. ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ₹606.69 ಕೋಟಿ (ಜೂನ್– ಅಕ್ಟೋಬರ್) ಬಾಕಿ ಉಳಿಸಿಕೊಂಡಿದೆ. ಪರಿಶಿಷ್ಟ ಜಾತಿಯ ಹಾಲು ಉತ್ಪಾದಕರಿಗೆ ಅಕ್ಟೋಬರ್ ತಿಂಗಳ ₹6.85 ಕೋಟಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ₹9 ಕೋಟಿ ಹಾಲಿನ ಪ್ರೋತ್ಸಾಹಧನವನ್ನು ಬಾಕಿ ಉಳಿಸಿದೆ.



ಹಾಲು ಉತ್ಪಾದಕರಿಗೆ ಪಾವತಿಸಬೇಕಿದ್ದ ಬಾಕಿ ಪ್ರೋತ್ಸಾಹಧನವನ್ನು ಬಿಡುಗಡೆಗೊಳಿಸುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ
ಕೆ. ವೆಂಕಟೇಶ್, ಪಶುಸಂಗೋಪನೆ ಸಚಿವ

ರಾಜ್ಯದಲ್ಲಿ 8 ಲಕ್ಷಕ್ಕಿಂತ ಹೆಚ್ಚು ಜನ ಸಾಮಾನ್ಯ ವರ್ಗದ ಹೈನುಗಾರರಿದ್ದಾರೆ. 51 ಸಾವಿರಕ್ಕೂ ಹೆಚ್ಚು ಪರಿಶಿಷ್ಟ ಜಾತಿಯ ಹಾಲು ಉತ್ಪಾದಕರು ಹಾಗೂ ಪರಿಶಿಷ್ಟ ಪಂಗಡದ 31 ಸಾವಿರಕ್ಕೂ ಹೆಚ್ಚು ಮಂದಿ ಹಾಲು ಉತ್ಪಾದಕರು ಇದ್ದಾರೆ.

ಸರ್ಕಾರ ನೀಡುವ ಹಾಲಿನ ಪ್ರೋತ್ಸಾಹಧನಕ್ಕಾಗಿ ಹಾಲು ಉತ್ಪಾದಕರ ಸಂಘಗಳಿಗೆ ಅಲೆದಾಡುವ ಪರಿಸ್ಥಿತಿಯನ್ನು ಸೃಷ್ಟಿಸಲಾಗಿದೆ ಎಂದು ರೈತರು ದೂರಿದ್ದಾರೆ.

'ಪ್ರತಿ ತಿಂಗಳು ನಿಯಮಿತವಾಗಿ ಪ್ರೋತ್ಸಾಹಧನ ಬಿಡುಗಡೆ ಆಗುತ್ತಿಲ್ಲ. ಸಾಮಾನ್ಯವಾಗಿ ಮೂರ್ನಾಲ್ಕು ತಿಂಗಳಿಗೊಮ್ಮೆ ಪ್ರೋತ್ಸಾಹ ಧನವನ್ನು ಬಿಡುಗಡೆ ಮಾಡಲಾಗುತ್ತಿದೆ. ಬರ, ಅತಿವೃಷ್ಟಿ ಸಂದರ್ಭದಲ್ಲೂ ಸರ್ಕಾರ ರೈತರೊಂದಿಗೆ ಚೆಲ್ಲಾಟವಾಡುವುದು ಸರಿಯಲ್ಲ. ಬಾಕಿ ಉಳಿಸಿಕೊಂಡಿರುವ ಪ್ರೋತ್ಸಾಹಧನವನ್ನು ರೈತರಿಗೆ ಕೂಡಲೇ ಪಾವತಿಸಬೇಕು' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹಿಸಿದರು.

8 ಟನ್ ದನ, ಗೋ ಮಾಂಸ ವಶ

ಪ್ರಜಾವಾಣಿ ವಾರ್ತೆ

ಗೌರಿಬಿದನೂರು (ಚಿಕ್ಕಬಳ್ಳಾಪುರ): ಹಿಂದೂಪುರದಿಂದ ಬೆಂಗಳೂರಿಗೆ ಲಾರಿಯಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಎಂಟು ಟನ್ ದನದ ಮಾಂಸ ಮತ್ತು ಗೋ ಮಾಂಸವನ್ನು ಮಂಚೇನಹಳ್ಳಿಯ ಮಿಣಕನಗುರ್ಕಿ ಬಳಿ ವಶಪಡಿಸಿಕೊಂಡಿರುವುದಾಗಿ ಚಿಕ್ಕಬಳ್ಳಾಪುರ ಸೆನ್ ಪೊಲೀಸರು ಭಾನುವಾರ ಹೇಳಿದ್ದಾರೆ.

ಮಾಂಸದ ಗುಡ್ಡೆಗೆ ಅಡ್ಡಲಾಗಿ ಮೂಟೆ ಮತ್ತು ಟೊಮೆಟೊ ಡಬ್ಬ ಇಟ್ಟು ಲಾರಿಯಲ್ಲಿ ಬೆಂಗಳೂರಿನ ಶಿವಾಜಿ ನಗರಕ್ಕೆ ಸಾಗಿಸಲಾಗುತ್ತಿತ್ತು. ಈ ಬಗ್ಗೆ ಪೊಲೀಸರಿಗೆ ಸುಳಿವು ದೊರೆತಿತ್ತು.

ವಾಹನ ಚಾಲಕ, ಹಿಂದೂಪುರದ ಆರೀಫ್, ಅಜೀಂ ಬಾಷಾ, ಬೆಂಗಳೂರು ಶಿವಾಜಿನಗರದ ನೂರ್ ಮತ್ತು ನೂರುಲ್ಲಾ ಶರೀಫ್ ಎಂಬುವರನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಎಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

'ವಶಪಡಿಸಿಕೊಳ್ಳಲಾದ ಮಾಂಸದ ಮಾದರಿಯನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಲಾಗಿದೆ. ವರದಿ ಬಂದ ನಂತರ ಖಚಿತಗೊಳ್ಳಲಿದೆ' ಎಂದು ಸಿಪಿಐ ಕೆ.ಪಿ. ಸತ್ಯನಾರಾಯಣ ತಿಳಿಸಿದ್ದಾರೆ.

ಅಗೆದ ರಸ್ತೆ ಬೆಂಗಳೂರಿನ ಎನ್.ಆರ್. ಕಾಲೊನಿಯಲ್ಲಿ ನೆಟ್ಟಕಲ್ಲಪ್ಪ ವೃತ್ತದಿಂದ ಎನ್.ಆರ್. ಕಾಲೊನಿ–ಕಟ್ಟೆ ಭವನ ರಸ್ತೆಯನ್ನು ವಿವಿಧ ಕಾಮಗಾರಿಗಾಗಿ ಅಗೆದು ಹಾಕಲಾಗಿದೆ

ಸುದ್ದಿ 3

ವೇಗಿ ಬೂಮ್ರಾ ಶರವೇಗದ 'ದ್ವಿಶತಕ'

75 ಬೂಮ್ರಾ ಅವರು ಆಸ್ಟ್ರೇಲಿಯಾ ಎದುರು 32 ಇನಿಂಗ್ಸ್‌ಗಳಲ್ಲಿ ಗಳಿಸಿದ ವಿಕೆಟ್‌ಗಳು. ಕಪಿಲ್ ದೇವ್ (41 ಇನಿಂಗ್ಸ್, 72 ವಿಕೆಟ್) ದಾಖಲೆ ಮುರಿದರು.

ಮೆಲ್ಬರ್ನ್ (ಪಿಟಿಐ): ಭಾರತದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಟೆಸ್ಟ್ ಕ್ರಿಕೆಟ್‌ನಲ್ಲಿ 200 ವಿಕೆಟ್ ಗಳಿಸಿದ ಬೌಲರ್‌ಗಳ ಕ್ಲಬ್ ಸೇರಿದರು. ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಎದುರಿನ ಸರಣಿಯ ನಾಲ್ಕನೇ ಟೆಸ್ಟ್ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ 4 ವಿಕೆಟ್ ಗಳಿಸಿದರು. ಅದರೊಂದಿಗೆ ದ್ವಿಶತಕ ದಾಟಿದರು. ಅವರು ಈ ಹಾದಿಯಲ್ಲಿ ಕಡಿಮೆ ರನ್‌ಗಳನ್ನು ನೀಡಿ ಸಾಧನೆ ಮಾಡಿದವರ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರಿದರು.

ಬಾರ್ಡರ್ ಗಾವಸ್ಕರ್ ಟ್ರೋಫಿ

ಬೌಲರ್	ದೇಶ	ಕೊಟ್ಟ ರನ್	ಸರಾಸರಿ
ಜಸ್‌ಪ್ರೀತ್ ಬೂಮ್ರಾ	ಭಾರತ	3912	19.56
ಜೋಲ್ ಗಾರ್ನರ್	ವೆಸ್ಟ್ ಇಂಡೀಸ್	4067	20.34
ಶಾನ್ ಪೊಲಾಕ್	ದ.ಆಫ್ರಿಕಾ	4077	20.39



ಬೂಮ್ರಾ ಟೆಸ್ಟ್ ಸಾಧನೆ
ಪಂದ್ಯ 44
ಇನಿಂಗ್ಸ್ 85
ವಿಕೆಟ್ 202
ಇನಿಂಗ್ಸ್ ಶ್ರೇಷ್ಠ 27ಕ್ಕೆ6
ಸರಾಸರಿ: 19.5

ಕೋನೇರು ಹಂಪಿಗೆ ವಿಶ್ವ ರ್‍ಯಾಪಿಡ್ ಕಿರೀಟ

ಕೋನೇರು ಹಂಪಿ | ವಯಸ್ಸು 37
ಸಾಧನೆಗಳು
2019 ವಿಶ್ವ ರ್‍ಯಾಪಿಡ್ ಚಾಂಪಿಯನ್
2023 ವಿಶ್ವ ರ್‍ಯಾಪಿಡ್ ರನ್ನರ್ ಅಪ್
2024 ವಿಶ್ವ ರ್‍ಯಾಪಿಡ್ ಚಾಂಪಿಯನ್
ಫಿಡೆ ರೇಟಿಂಗ್ 2423

ನ್ಯೂಯಾರ್ಕ್ (ಪಿಟಿಐ): ವರ್ಷಾಂತ್ಯದಲ್ಲಿ ಭಾರತದ ಕ್ರೀಡಾಪ್ರೇಮಿಗಳಿಗೆ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರು ಸಿಹಿಸುದ್ದಿ ನೀಡಿದರು. ಭಾನುವಾರ ಇಲ್ಲಿ ನಡೆದ ಫಿಡೆ ಮಹಿಳೆಯರ ವಿಶ್ವ ರ್‍ಯಾಪಿಡ್ ಚೆಸ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಅವರು ಕೊನೆಯ ಸುತ್ತಿನಲ್ಲಿ ಇಂಡೊನೇಷ್ಯಾದ ಐರಿನ್ ಸುಕಂದರ್ ಅವರನ್ನು ಸೋಲಿಸಿ ಕಿರೀಟ ಗೆದ್ದರು.

ವಿಮಾನ ದುರಂತ: 179 ಮಂದಿ ಸಾವು

ದಕ್ಷಿಣ ಕೊರಿಯಾದಲ್ಲಿ ನಡೆದ ದೊಡ್ಡ ಅವಘಡ, ಬದುಕುಳಿದ ಇಬ್ಬರು ಸಿಬ್ಬಂದಿ

ಸೋಲ್ (ದಕ್ಷಿಣ ಕೊರಿಯಾ) (ಎಪಿ/ರಾಯಿಟರ್ಸ್): ದಕ್ಷಿಣ ಕೊರಿಯಾದ ಮುವಾನ್ ವಿಮಾನ ನಿಲ್ದಾಣದಲ್ಲಿ ರನ್‌ವೇನಿಂದ ಪಕ್ಕಕ್ಕೆ ಜಾರಿದ ವಿಮಾನವು ಕಾಂಕ್ರೀಟ್ ಗೋಡೆಗೆ ಡಿಕ್ಕಿ ಹೊಡೆದು ಸ್ಫೋಟಿಸಿದೆ. ವಿಮಾನದಲ್ಲಿದ್ದ 181 ಮಂದಿಯ ಪೈಕಿ 179 ಮಂದಿ ಜೀವ ಕಳೆದುಕೊಂಡಿದ್ದಾರೆ. ಜೆಜು ಏರ್ ವಿಮಾನಯಾನ ಕಂಪನಿಗೆ ಸೇರಿದ್ದ ವಿಮಾನ ಇದಾಗಿತ್ತು.

ವಿಮಾನವು ರನ್‌ವೇ ಮೇಲೆ ಇಳಿಯುವ ಸಂದರ್ಭದಲ್ಲಿ ಅದರ ಮುಂದಿನ ಚಕ್ರವು ಸರಿಯಾಗಿ ತೆರೆದುಕೊಂಡಿರಲಿಲ್ಲ ಎನ್ನಲಾಗಿದೆ. ಈ ದುರಂತವು ದಕ್ಷಿಣ ಕೊರಿಯಾದಲ್ಲಿ ನಡೆದ ಅತಿದೊಡ್ಡ ವಿಮಾನ ದುರಂತಗಳಲ್ಲಿ ಒಂದು.

ರಕ್ಷಣಾ ಸಿಬ್ಬಂದಿಯು ಇಬ್ಬರನ್ನು ವಿಮಾನದಿಂದ ಸುರಕ್ಷಿತವಾಗಿ ಹೊರಗೆ ಕರೆತಂದಿದ್ದಾರೆ. ಇವರಿಬ್ಬರೂ ವಿಮಾನದ ಸಿಬ್ಬಂದಿ ವರ್ಗಕ್ಕೆ ಸೇರಿದವರು. ಬೋಯಿಂಗ್ 737–800 ಮಾದರಿಯ ಈ ವಿಮಾನವು ಬ್ಯಾಂಕಾಕ್‌ನಿಂದ ಮರಳುತ್ತಿತ್ತು.

ವಿಮಾನವನ್ನು ಆವರಿಸಿದ್ದ ಬೆಂಕಿಯನ್ನು ಆರಿಸಲು ಅಗ್ನಿಶಾಮಕ ಸಿಬ್ಬಂದಿ ಒಟ್ಟು 32 ಅಗ್ನಿಶಾಮಕ ಟ್ರಕ್‌ಗಳನ್ನು ಹಾಗೂ ಹಲವು ಹೆಲಿಕಾಪ್ಟರ್‌ಗಳನ್ನು ನಿಯೋಜಿಸಿದ್ದರು.

ವಿಮಾನವು, ರನ್‌ವೇ ದಾಟಿ ಕಾಂಕ್ರೀಟ್ ಗೋಡೆಯೊಂದಕ್ಕೆ ಗುದ್ದಿದ ದೃಶ್ಯಗಳನ್ನು ಹಲವು ಸುದ್ದಿ ವಾಹಿನಿಗಳು ಪ್ರಸಾರ ಮಾಡಿವೆ. ವಿಮಾನದ ಬಹುಭಾಗ ನಾಶವಾಗಿದೆ. ದುರಂತಕ್ಕೆ ಕಾರಣ ಏನು ಎಂಬ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ವಿಮಾನ ನಿಲ್ದಾಣ ನಿಯಂತ್ರಣ ಕೇಂದ್ರವು, ವಿಮಾನಕ್ಕೆ ಹಕ್ಕಿ ಬಡಿದಿರಬಹುದು ಎಂಬ ಎಚ್ಚರಿಕೆಯನ್ನು ಪೈಲಟ್‌ಗೆ ರವಾನಿಸಿತ್ತು ಎಂಬುದು ಪರಿಶೀಲನೆಯಿಂದ ಗೊತ್ತಾಗಿದೆ.

ಈ ವಿಮಾನವು ಬ್ಯಾಂಕಾಕ್‌ನ ಸುವರ್ಣ ಭೂಮಿ ವಿಮಾನ ನಿಲ್ದಾಣದಿಂದ ಹೊರಟಾಗ ಯಾವುದೇ ಸಮಸ್ಯೆಗಳು ಎದುರಾಗಿರಲಿಲ್ಲ ಎಂದು ಥಾಯ್ಲೆಂಡ್ ವಿಮಾನ ನಿಲ್ದಾಣಗಳ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅಪಘಾತಗೊಂಡ ಜೆಜು ಏರ್ ವಿಮಾನವು ಹೊತ್ತಿ ಉರಿದ ಸಂದರ್ಭ —ಎಎಫ್‌ಪಿ ಚಿತ್ರ

ಕೆನಡಾ: ರನ್‌ವೇನಲ್ಲಿ ಜಾರಿದ ವಿಮಾನ

ಒಟ್ಟಾವಾ (ಪಿಟಿಐ): ಕೆನಡಾ ದೇಶದ ಹ್ಯಾಲಿಫ್ಯಾಕ್ಸ್ ವಿಮಾನ ನಿಲ್ದಾಣದಲ್ಲಿ ಇಳಿಯುವ ಸಂದರ್ಭದಲ್ಲಿ 'ಏರ್ ಕೆನಡಾ' ವಿಮಾನವೊಂದು ರನ್‌ವೇನಲ್ಲಿ ಜಾರಿದೆ. ಇದರ ಪರಿಣಾಮವಾಗಿ ವಿಮಾನದ ಒಂದು ಭಾಗಕ್ಕೆ ಬೆಂಕಿ ಹತ್ತಿಕೊಂಡಿತ್ತು.

ವಿಮಾನದಲ್ಲಿ ಇದ್ದವರನ್ನು ರಕ್ಷಿಸಿ ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಯಿತು. ವಿಮಾನದಲ್ಲಿ ಎಷ್ಟು ಜನ ಇದ್ದರು ಎಂಬ ಮಾಹಿತಿ ಲಭ್ಯವಾಗಿಲ್ಲ. ಈ ಘಟನೆಯ ನಂತರ ಹ್ಯಾಲಿಫ್ಯಾಕ್ಸ್ ವಿಮಾನ ನಿಲ್ದಾಣವನ್ನು ಶನಿವಾರ ರಾತ್ರಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.

ವಿಮಾನವು ರನ್‌ವೇ ಮೇಲೆ ಇಳಿದ ಸಂದರ್ಭದಲ್ಲಿ ಒಂದು ಟೈರ್ ಸರಿಯಾಗಿ ತೆರೆದುಕೊಳ್ಳಲಿಲ್ಲ ಎಂದು ಪ್ರಯಾಣಿಕರೊಬ್ಬರು 'ಸಿಬಿಸಿ ನ್ಯೂಸ್' ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕೊನೆ ಮಾತುಗಳು?

ಜೆಜು ಏರ್ ವಿಮಾನದಲ್ಲಿ ಇದ್ದ ಪ್ರಯಾಣಿಕರೊಬ್ಬರು ಅಪಘಾತಕ್ಕೂ ತುಸು ಮೊದಲು ತಮ್ಮ ಕುಟುಂಬದ ಸದಸ್ಯರೊಬ್ಬರಿಗೆ ಸಂದೇಶ ಕಳುಹಿಸಿದ್ದು, 'ವಿಮಾನದ ರೆಕ್ಕೆಗೆ ಹಕ್ಕಿ ಬಡಿದಿದೆ' ಎಂದು ತಿಳಿಸಿದ್ದರು ಎಂಬುದಾಗಿ ಎನ್‌ಡಿಟಿವಿ ವರದಿ ಮಾಡಿದೆ.

'ನನ್ನ ಕೊನೆಯ ಮಾತುಗಳನ್ನು ಹೇಳಬೇಕೆ' ಎಂದು ಕೂಡ ಆ ಪ್ರಯಾಣಿಕ ಸಂದೇಶ ಕಳುಹಿಸಿದ್ದರು ಎಂದು ವರದಿಯು ಉಲ್ಲೇಖಿಸಿದೆ.

ಗುತ್ತಿಗೆದಾರನ ಮನೆಗೆ ವಿಜಯೇಂದ್ರ, ಖಂಡ್ರೆ

ಕಟ್ಟಿತೂಗಾಂವ್ (ಬೀದರ್ ಜಿಲ್ಲೆ): ಮೃತ ಯುವ ಗುತ್ತಿಗೆದಾರ ಸಚಿನ್ ಮಾನಪ್ಪ ಪಾಂಚಾಳ್ ಅವರ ಮನೆಗೆ ಸಚಿವ ಈಶ್ವರ ಬಿ. ಖಂಡ್ರೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಭಾನುವಾರ ಪ್ರತ್ಯೇಕವಾಗಿ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿ, ಧೈರ್ಯ ತುಂಬಿದರು.

5

ರೂಪಾಯಿ ಮೌಲ್ಯ ಶೇ 3ರಷ್ಟು ಕುಸಿತ

ಮುಂಬೈ (ಪಿಟಿಐ): ಪ್ರಸಕ್ತ ವರ್ಷದಲ್ಲಿ ಅಮೆರಿಕದ ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯವು ಶೇ 3ರಷ್ಟು ಕುಸಿದಿದೆ. ದೇಶದ ಆರ್ಥಿಕ ಬೆಳವಣಿಗೆ ಮಂದಗತಿಯಲ್ಲಿ ಇರುವುದು ಹಾಗೂ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಬಲಗೊಂಡಿರುವುದೇ ಇದಕ್ಕೆ ಕಾರಣ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

8

ವಿಶ್ವ ಹವ್ಯಕ ಸಮ್ಮೇಳನ: ಗಂಗಾಧರೇಂದ್ರ ಸರಸ್ವತೀ ಕರೆ

'21ರೊಳಗೆ ಮದುವೆಯಾಗಿ, 3ಕ್ಕೂ ಹೆಚ್ಚು ಮಕ್ಕಳ ಹೊಂದಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹವ್ಯಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾದರೆ ಸಮುದಾಯದ ಯುವಕ–ಯುವತಿಯರಿಗೆ 18–21 ವರ್ಷಕ್ಕೆ ವಿವಾಹ ಮಾಡಿಸಬೇಕು. ಹವ್ಯಕ ಸಂತತಿ ವೃದ್ಧಿಗೆ ಕನಿಷ್ಠ ಮೂರು ಮಕ್ಕಳನ್ನಾದರೂ ಪಡೆಯಬೇಕು. ಮೂರಕ್ಕಿಂತ ಹೆಚ್ಚು ಮಕ್ಕಳಿದ್ದರೆ ನಮ್ಮ ಮಠಕ್ಕೆ ನೀಡಬಹುದು' ಎಂದು ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ಅಖಿಲ ಹವ್ಯಕ ಮಹಾಸಭಾ ಇಲ್ಲಿನ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಕೊನೆಯ ದಿನವಾದ ಭಾನುವಾರ ನಡೆದ ಸಹಸ್ರಚಂದ್ರ ಸಭೆಯಲ್ಲಿ ಸಾನ್ನಿಧ್ಯ ವಹಿಸಿ, ಮಾತನಾಡಿದರು.

ಯೋಗ್ಯತೆ, ಸಾಮರ್ಥ್ಯದಿಂದ ಹವ್ಯಕರು ಸಮಾಜದಲ್ಲಿ ಉನ್ನತ ಸ್ಥಾನ ಪಡೆದಿದ್ದಾರೆ. ಈ ಸಮುದಾಯದವರಲ್ಲಿ ಜಾತಿಯ ಮತಾಂಧತೆಯಿಲ್ಲ
ಎಚ್‌.ಕೆ. ಪಾಟೀಲ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ವೈಜ್ಞಾನಿಕ ಯುಗದಲ್ಲಿ ಹವ್ಯಕರನ್ನು ಮುಂದೆ ಕೊಂಡೊಯ್ಯುವ ಜವಾಬ್ದಾರಿ ಸಮುದಾಯದ ಯುವ ಜನರ ಮೇಲಿದೆ. ಬದುಕು ರೂಪಿಸಿದ ತಂದೆ–ತಾಯಿಯನ್ನು ಮರೆಯಬಾರದು
ಭೀಮೇಶ್ವರ ಜೋಷಿ, ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮದರ್ಶಿ

'ಜನಸಂಖ್ಯೆ ಕುಸಿತ ಹಾಗೂ ಸಂಸ್ಕೃತಿಯ ತೀವ್ರ ಹಿನ್ನಡೆ, ನೈತಿಕತೆ ಪತನದಂತಹ ಸಮಸ್ಯೆಗಳನ್ನು ಹವ್ಯಕ ಸಮುದಾಯವೂ ಎದುರಿಸುತ್ತಿದೆ. ಹವ್ಯಕ ಸಮುದಾಯವು ಸುಟ್ಟ ಮನೆಯಂತೆ ಜ್ವಲಿಸುತ್ತಿದೆ. ಈ ಬೆಂಕಿ ಆರಿಸಲು ನೀರು ಸಾಲುತ್ತಿಲ್ಲ. ಯುವಕ–ಯುವತಿಯರು ಧರ್ಮ ಸಮ್ಮತವಲ್ಲದ ವಿಧಾನದಿಂದ ಶರೀರ ಮತ್ತು ಮನಸ್ಸಿನ ಅಪೇಕ್ಷೆ ಪೂರೈಸಿಕೊಳ್ಳುತ್ತಿದ್ದಾರೆ. ಅದಕ್ಕೆ ಆಧುನಿಕ ವಿಜ್ಞಾನ ಸಮ್ಮತಿ ಸೂಚಿಸುತ್ತಿದೆ. ಈ ವಿಜ್ಞಾನವು ಅಧರ್ಮದ ಮಾರ್ಗದಲ್ಲಿ ಸಾಗುವ ದಾರಿ ತೋರಿಸುತ್ತಿದೆ. ಈ ಮಾರ್ಗದಿಂದ ರೋಗಿಯಾದರೆ ಅದಕ್ಕೆ ಔಷಧವಿದೆ ಎನ್ನುತ್ತದೆ. ಇಂತಹ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ 18 ವರ್ಷಕ್ಕೆ ಹಾಗೂ ಗಂಡು ಮಕ್ಕಳಿಗೆ 21 ವರ್ಷಕ್ಕೆ ವಿವಾಹ ಮಾಡಿಸುವುದೇ ಪರಿಹಾರೋಪಾಯ' ಎಂದರು.

9ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಸ್ಥಳೀಯ ಸಸ್ಯ ಪ್ರಭೇದಗಳ ಕತ್ತು ಹಿಸುಕುತ್ತಿರುವ ಲಂಟಾನಾ, ಅಕೇಶಿಯಾ

ಕಳೆ ಕಾಟ: ರಾಜ್ಯದ ಅರಣ್ಯ ಸ್ವರೂಪ ಬದಲು

• ಜಯಸಿಂಹ ಆರ್.

ಬೆಂಗಳೂರು: ರಾಜ್ಯದಲ್ಲಿ ಅರಣ್ಯ ಪ್ರದೇಶದ ಒಟ್ಟು ವಿಸ್ತೀರ್ಣ ಹೆಚ್ಚಾಗಿದೆಯಾದರೂ, ಎರಡು ವರ್ಷಗಳಲ್ಲಿ ಕಾಡನ್ನು ಆಪೋಶನ ತೆಗೆದುಕೊಂಡ ಆಕ್ರಮಣಕಾರಿ ಕಳೆಸಸ್ಯಗಳ ವಿಸ್ತೀರ್ಣ ದುಪ್ಪಟ್ಟಾಗಿದೆ. ಸ್ಥಳೀಯ ಸಸ್ಯ ಪ್ರಭೇಧಗಳು ಮತ್ತು ಅವುಗಳನ್ನು ಅವಲಂಬಿಸಿರುವ ವನ್ಯಜೀವಿಗಳಿಗೆ ಕಂಟಕವಾಗಿ ಮಾರ್ಪಟ್ಟಿದೆ.

ಕೇಂದ್ರ ಸರ್ಕಾರವು ಈಚೆಗೆ ಬಿಡುಗಡೆ ಮಾಡಿದ 'ಭಾರತೀಯ ಅರಣ್ಯ ಸ್ಥಿತಿಗತಿ ವರದಿ–2023'ರಲ್ಲಿ ಈ ಮಾಹಿತಿ ಇದೆ.

2021ರ ವರದಿಯ ಪ್ರಕಾರ, ರಾಜ್ಯದ ಅರಣ್ಯ ಪ್ರದೇಶದಲ್ಲಿ ಲಂಟಾನಾ, ತೀವ್ರಗಂಧಿ (Chromolaena Odorata), ಅಕೇಶಿಯಾ, ತಗಚೆ ಮತ್ತು ಉತ್ತರಾಣಿ ಎಂಬ ಐದು ಪ್ರಮುಖ ಆಕ್ರಮಣಕಾರಿ ಕಳೆ ಸಸ್ಯಗಳು ಒಟ್ಟು 2,860 ಚದರ ಕಿ.ಮೀ.ನಷ್ಟು ಹರಡಿದ್ದವು. 2023ರ ವೇಳೆಗೆ ಈ ಕಳೆ ಸಸ್ಯಗಳ ವ್ಯಾಪ್ತಿ 6,219 ಚದರ ಕಿ.ಮೀ. ಅರಣ್ಯ ಪ್ರದೇಶಕ್ಕೆ ವಿಸ್ತರಿಸಿದೆ. ಎರಡೇ ವರ್ಷದಲ್ಲಿ ಅವುಗಳ ವಿಸ್ತೀರ್ಣವು ಶೇ 118ರಷ್ಟು ಏರಿಕೆಯಾಗಿದೆ.

ಈ ಐದೂ ಕಳೆ ಸಸ್ಯಗಳು ವಿದೇಶಿ ಮೂಲದವಾಗಿದ್ದು, ಆಲಂಕಾರಿಕ ಮತ್ತು ಮರಮಟ್ಟಿಗೆಂದು ಭಾರತಕ್ಕೆ ಪರಿಚಯಿಸಿದ ಪ್ರಭೇದಗಳಾಗಿವೆ. ಸುತ್ತಲಿನ ಇತರ ಸಸ್ಯಗಳನ್ನು ಆಪೋಶನ ತೆಗೆದುಕೊಂಡು ಕ್ಷಿಪ್ರವಾಗಿ ಬೆಳೆಯುವ ಗುಣದ ಕಾರಣದಿಂದ ಇವುಗಳನ್ನು 'ಅತಿಕ್ರಮಣಕಾರಿ ಪ್ರಭೇಧ'ಗಳು ಎಂದು ವರ್ಗೀಕರಿಸಲಾಗಿದೆ.

9ನೇ ಪುಟ ನೋಡಿ





ಶೋಲಾ ಅರಣ್ಯಕ್ಕೆ ಕುತ್ತು

ಪಶ್ಚಿಮ ಘಟ್ಟದ ಮುಕುಟಗರಿಯಂತಿರುವ ಶೋಲಾ ಅರಣ್ಯ ಪ್ರದೇಶಕ್ಕೆ ಅತಿಕ್ರಮಣಕಾರಿ ಕಳೆ ಪ್ರಭೇದ ಅಕೇಶಿಯಾ ಅಪಾಯವಾಗಿ ಪರಿಣಮಿಸಿದೆ. ಇದರಿಂದ ಶೋಲಾ ಹುಲ್ಲುಗಾವಲು ನಾಶವಾಗುತ್ತಿದ್ದು, ಅಲ್ಲಿಗೇ ಸೀಮಿತವಾದ ಕೆಲ ಹಕ್ಕಿ ಪ್ರಭೇದಗಳಿಗೆ ತೊಡಕಾಗಿದೆ ಎಂದು ಕೆಲ ತಿಂಗಳ ಹಿಂದಷ್ಟೇ ಬಿಡುಗಡೆ ಮಾಡಲಾಗಿದ್ದ ಭಾರತದ ಹಕ್ಕಿಗಳ ಸ್ಥಿತಿಗತಿ ವರದಿ ಹೇಳಿತ್ತು.

'ಪಶ್ಚಿಮ ಘಟ್ಟದ ಅಂಚಿನ ಅಕೇಶಿಯಾ ನೆಡುತೋಪುಗಳು, ಶೋಲಾ ಅರಣ್ಯಗಳಿಗೆ ಮಾರಕವಾಗಿ ಪರಿಗಣಿಸಿವೆ. ಅಕೇಶಿಯಾ ಕಾಡು ಈಗ ನೈಸರ್ಗಿಕವಾಗಿಯೇ ಶೋಲಾ ಹುಲ್ಲುಗಾವಲಿಗೆ ವಿಸ್ತರಿಸುತ್ತಿದೆ. ಇದರಿಂದ ಸ್ಥಳೀಯ ಹಕ್ಕಿ ಪ್ರಭೇದಗಳ ಆವಾಸಸ್ಥಾನದ ವಿಸ್ತೀರ್ಣ ಕ್ಷೀಣಿಸುತ್ತಿದೆ. ಕೆಲವು ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದಿಕೊಂಡಿವೆ. ಕೆಲವು ಹಕ್ಕಿಗಳು ಹೊಂದಿಕೊಳ್ಳಲಾಗದೇ, ಕ್ಷೀಣಿಸುತ್ತಿವೆ' ಎಂದು ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ಗೆಜೆಟೆಡ್ ಪ್ರೊಬೇಷನರ್: ತೊಡಕಿನ ಮಧ್ಯೆ ಮರುಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) 384 ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ನೇಮಕಾತಿಗಾಗಿ ಭಾನುವಾರ ಆಯೋಜಿಸಿದ್ದ ಪೂರ್ವಭಾವಿ ಪರೀಕ್ಷೆಯು ಬಹುತೇಕ ಸುಗಮವಾಗಿ ನಡೆದಿದೆ. ಆದರೆ ಪ್ರಶ್ನೆಪತ್ರಿಕೆಗಳಲ್ಲಿ ಕೆಲವು ದೋಷಗಳು ಉಳಿದ ಬಗ್ಗೆ ಮತ್ತು ತಾಂತ್ರಿಕ ಸಮಸ್ಯೆಗಳ ಬಗ್ಗೆ ಅಭ್ಯರ್ಥಿಗಳಿಂದ ಮತ್ತೆ ಆಕ್ಷೇಪ ವ್ಯಕ್ತವಾಗಿದೆ.

ಈ ಹುದ್ದೆಗಳ ನೇಮಕಾತಿಗಾಗಿ ಇದೇ ಆಗಸ್ಟ್ 27ರಂದು ಪೂರ್ವಭಾವಿ ಪರೀಕ್ಷೆ ನಡೆಸಲಾಗಿತ್ತು. ಕನ್ನಡ ಪ್ರಶ್ನೆ ಪತ್ರಿಕೆಯ 33 ಪ್ರಶ್ನೆಗಳ ಭಾಷಾಂತರದಲ್ಲಿ ದೋಷಗಳು ಉಳಿದಿದ್ದವು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾದ ಕಾರಣ ಆಯೋಗವು ಪರೀಕ್ಷೆಯನ್ನು ರದ್ದುಪಡಿಸಿತ್ತು. ಎರಡನೇ ಬಾರಿಗೆ ಪೂರ್ವಭಾವಿ ಪರೀಕ್ಷೆಯನ್ನು ಭಾನುವಾರ ನಡೆಸಿತು.

'ಪರೀಕ್ಷೆ ಆಯೋಜನೆ ಮತ್ತು ಪ್ರಶ್ನೆಪತ್ರಿಕೆಗಳು ಉತ್ತಮವಾಗಿದ್ದವು. ಒಂದೆರಡು ದೋಷಗಳು ಹೊರತುಪಡಿಸಿದರೆ, ಮೊದಲ ಪತ್ರಿಕೆ ಸರಳವಾಗಿತ್ತು'

9ನೇ ಪುಟ ನೋಡಿ

ಭಾಷಾಂತರ ಸಮಸ್ಯೆ

'ಕನ್ನಡ ಪ್ರಶ್ನೆಪತ್ರಿಕೆಯಲ್ಲಿ 4–5 ಭಾಷಾಂತರದ ಸಮಸ್ಯೆಗಳು ಇದ್ದವು. ಭಾಷಾಂತರಕ್ಕೆ 'ಗೂಗಲ್ ಟ್ರಾನ್ಸ್‌ಲೇಟರ್' ಬಳಸಿರಬಹುದು' ಎಂದು ಅಭ್ಯರ್ಥಿಯೊಬ್ಬರು ಶಂಕಿಸಿದರು. ತಪ್ಪಾದ ಕನ್ನಡ ಭಾಷಾಂತರದ ಉದಾಹರಣೆ...

- 'ಲೋಕಸಭೆಯು ಎರಡನೇ ಬಾರಿ ವಿಧೇಯಕವನ್ನು ಮತ್ತು ಅದಕ್ಕೆ ವಿರುದ್ಧವಾಗಿ ಜಾರಿ ಮಾಡುವ ಮೂಲಕ ರಾಜ್ಯಸಭೆಯನ್ನು ಆಧ್ಯಾರೋಹಿಸಲಾಗದು ಮತ್ತು ಆದೇಶ ರಾಜ್ಯಸಭೇವೆಂದ ವಿಷಯ'.
- 'ವಿಧಾನಸಭೆಯು ಎರಡನೇ ಬಾರಿ ಮತ್ತು ಅದಕ್ಕೆ ವಿರುದ್ಧವಾಗಿ ವಿಧೇಯಕವನ್ನು ಜಾರಿ ಮಾಡುವ ಮೂಲಕ ವಿಧಾನ ಪರಿಷತ್ತನ್ನು ಆಧ್ಯಾರೋಹಿಸಬಹುದು ಮತ್ತು ವೀಪರ್ಯ ಉಂಟಾಗುತ್ತಿಲ್ಲ'.

ಮತ್ತೊಂದು ಪ್ರಶ್ನೆಯಲ್ಲಿ ಇಂಗ್ಲಿಷ್‌ನ 'ಇನ್‌ಕರೆಕ್ಟ್' ಎಂಬುದನ್ನು ಕನ್ನಡಕ್ಕೆ 'ತಪ್ಪದ' ಎಂದು ಭಾಷಾಂತರ ಮಾಡಲಾಗಿದೆ.

ಫುಟ್‌ಬಾಲ್: ಸೌತ್ ಯುನೈಟೆಡ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌತ್ ಯುನೈಟೆಡ್ ಎಫ್‌ಸಿ ತಂಡವು ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 1–0 ಗೋಲಿನಿಂದ ಎಂಇಜಿ ಮತ್ತು ಸೆಂಟರ್ ಎಫ್‌ಸಿ ತಂಡವನ್ನು ಸೋಲಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಸೌತ್ ಯುನೈಟೆಡ್ ಎಫ್‌ಸಿ ಪರ ಇಸಾನ್ ಸಾಹಿ (20ನೇ ನಿಮಿಷ) ಏಕೈಕ ಗೋಲು ಹೊಡೆದರು.

ಸೋಮವಾರದ ಪಂದ್ಯದಲ್ಲಿ ಪರಿಕ್ರಮ ಎಫ್‌ಸಿ ಮತ್ತು ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ಸೆಣಸಲಿವೆ. ಮತ್ತೊಂದು ಪಂದ್ಯದಲ್ಲಿ ಎಎಸ್‌ಸಿ ಮತ್ತು ಸೆಂಟರ್ ಎಫ್‌ಸಿ ತಂಡವು ರಿಯಲ್ ಚಿಕ್ಕಮಗಳೂರು ಎಫ್‌ಸಿ ವಿರುದ್ಧ ಪೈಪೋಟಿ ನಡೆಸಲಿವೆ.

ಸಾಯ್ ಕ್ರೀಡಾಂಗಣದಲ್ಲಿ ಸೋಮವಾರ ನಡೆಯಲಿರುವ ಬಿ ಡಿವಿಷನ್ ಲೀಗ್‌ನ ಪಂದ್ಯದಲ್ಲಿ ರಿವಿವ್ ಎಫ್‌ಸಿ ತಂಡವು ಮೊಹಮ್ಮಡನ್ ಸ್ಪೋರ್ಟಿಂಗ್ ಎಫ್‌ಸಿ ವಿರುದ್ಧ ಸೆಣಸಲಿದೆ. ಅಂಚೆ ಇಲಾಖೆ ಎಫ್‌ಸಿ ತಂಡವು ಅಲ್ ಫತೇಹ ಎಫ್‌ಸಿ ತಂಡವನ್ನು ಎದುರಿಸಲಿದೆ. ಮೂರನೇ ಪಂದ್ಯದಲ್ಲಿ ವೆಹಿಕಲ್ಸ್ ಎಫ್‌ಸಿ ತಂಡ ಮತ್ತು ಸ್ಟ್ರೈಡ್ ಎಫ್‌ಸಿ ಮುಖಾಮುಖಿಯಾಗಲಿವೆ.

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

‘ಮಲ್ಲತ್ತಹಳ್ಳಿ: ರಸ್ತೆ ಗುಂಡಿ ಮುಚ್ಚಿ’

ರಾಜರಾಜೇಶ್ವರಿ ವಿಧಾನಸಭೆ ಕ್ಷೇತ್ರದ ಮಲ್ಲತ್ತಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಸಂಪೂರ್ಣವಾಗಿ ಹದಗೆಟ್ಟು ಹೋಗಿದೆ. ಈ ರಸ್ತೆಯಲ್ಲಿ ಅಲ್ಲಲ್ಲಿ ಗುಂಡಿಗಳಾಗಿರುವ ಪರಿಣಾಮ ವಾಹನ ಸಂಚಾರಕ್ಕೆ ಸಂಚಕಾರ ಬಂದಿದೆ. ರಸ್ತೆ ಅಭಿವೃದ್ಧಿಪಡಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಕೂಡಲೇ ಇಲ್ಲಿನ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಎಂ.ಲಿಂಗರಾಜು ಗೌಡ, ಮಲ್ಲತ್ತಹಳ್ಳಿ

‘ರಸ್ತೆ ದುರಸ್ತಿಗೆ ಆಗ್ರಹ’

ಆರ್.ಟಿ. ನಗರದ ವಾರ್ಡ್ ಸಂಖ್ಯೆ 31ರ ಕಾವಲ್ ಬೈರಸಂದ್ರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹಾಳಾಗಿದ್ದು, ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಪ್ರತಿನಿತ್ಯ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಹಾಳಾಗಿರುವುದರಿಂದ ಸಂಚಾರ ದಟ್ಟಣೆ ಆಗುತ್ತದೆ. ಕೆಲವೊಮ್ಮೆ ಅಪಘಾತಗಳು ಸಂಭವಿಸುತ್ತವೆ. ಕಾವಲ್ ಬೈರಸಂದ್ರಕ್ಕೆ ಆಟೊ ಮತ್ತು ಕ್ಯಾಬ್ ಚಾಲಕರು ಬರಲು ನಿರಾಕರಿಸುತ್ತಾರೆ. ಸ್ಥಳೀಯ ನಿವಾಸಿಗಳಿಗೆ ಪ್ರತಿನಿತ್ಯ ದೂಳಿನ ಮಜ್ಜನವಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಇಲ್ಲಿನ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಅನಂತ್, ಕಾವಲ್ ಬೈರಸಂದ್ರ

‘ಗಬ್ಬೆದ್ದು ನಾರುತ್ತಿದೆ ಆನಂದರಾವ್ ವೃತ್ತ’

ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಿರುವ ಆನಂದರಾವ್ ವೃತ್ತದಲ್ಲಿ ಕಸ ತಂದು ರಾಶಿ ಹಾಕಲಾಗಿದೆ. ಇದರಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ.ಈ ವೃತ್ತದ ಅಕ್ಕಪಕ್ಕದಲ್ಲಿ ಹಲವಾರು ಸರ್ಕಾರಿ ಕಚೇರಿಗಳಿವೆ. ಬಿಬಿಎಂಪಿ ಸಿಬ್ಬಂದಿ ಪ್ರತಿನಿತ್ಯ ಕಸ ವಿಲೇವಾರಿ ಮಾಡುವಂತೆ ಈಗಾಗಲೇ ಮನವಿ ಸಲ್ಲಿಸಲಾಗಿದೆ. ಕೂಡಲೇ ಇಲ್ಲಿನ ಕಸ ವಿಲೇವಾರಿ ಮಾಡಿ ನಗರದ ಸ್ವಚ್ಛತೆ ಕಾಪಾಡಬೇಕು.

ಶಿವಪ್ರಸಾದ್, ಗಾಂಧಿನಗರ

‘ನಾಗವಾರ: ರಸ್ತೆ ಸರಿಪಡಿಸಿ’

ನಾಗವಾರ ಮಾನ್ಯತಾ ಟೆಕ್‌ಪಾರ್ಕ್ ಮುಂಭಾಗದ ಬಿಇಎಲ್ ಕಾರ್ಪೊರೇಟ್ ಕಚೇರಿ ಸಮೀಪದ ರಸ್ತೆಯ ಕಲ್ವರ್ಟ್ (ಅಡ್ಡ ಸೇತುವೆ) ಹಾಳಾಗಿದ್ದು, ರಸ್ತೆಯಲ್ಲಿ ಗುಂಡಿಗಳು ನಿರ್ಮಾಣವಾಗಿವೆ. ಈ ಪ್ರದೇಶದಲ್ಲಿ ಹಲವಾರು ಶಾಲಾ–ಕಾಲೇಜುಗಳು ಹಾಗೂ ಕಚೇರಿಗಳಿದ್ದು ವಿದ್ಯಾರ್ಥಿಗಳು ಮತ್ತು ನೌಕರರು ಸರಿಯಾದ ಸಮಯಕ್ಕೆ ತರಗತಿಗೆ, ಕೆಲಸಕ್ಕೆ ಹೋಗಲು ಆಗುತ್ತಿಲ್ಲ. ಈ ರಸ್ತೆಯನ್ನು ದುರಸ್ತಿಗೊಳಿಸುವಂತೆ ಬಿಬಿಎಂಪಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ರಾಜಗೋಪಾಲ್, ನಾಗವಾರ

ಸುದ್ದಿ 2 ನಿಮಿಷ

ಶೂಟಿಂಗ್: ಅಭಿಷೇಕ್‌ಗೆ 6 ಪದಕ

ಬೆಂಗಳೂರು: ಕರ್ನಾಟಕದ ಅಭಿಷೇಕ್ ಶೇಖರ್ ಅವರು ಭೋಪಾಲ್‌ನಲ್ಲಿ ನಡೆಯುತ್ತಿರುವ 67ನೇ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನ (ಎನ್‌ಎಸ್‌ಸಿಸಿ) 10 ಮೀಟರ್ ಏರ್ ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ ಆರು ಪದಕಗಳನ್ನು ಗೆದ್ದ ಕರ್ನಾಟಕದ ಮೊದಲ ಶೂಟರ್ ಎನಿಸಿಕೊಂಡರು.

ಬೆಂಗಳೂರಿನ ಅಭಿಷೇಕ್ ಅವರು ಮೂರು ಚಿನ್ನದ ಪದಕಗಳನ್ನು ತಂಡ ವಿಭಾಗದಲ್ಲಿ ಗೆದ್ದರು. ಜೂನಿಯರ್ ಪುರುಷರ ಫೈನಲ್‌ನ 10 ಮೀಟರ್ ಏರ್ ರೈಫಲ್ ವಿಭಾಗದಲ್ಲಿ 251.4 ಸ್ಕೋರ್‌ನೊಂದಿಗೆ ಬೆಳ್ಳಿ ಗೆದ್ದರು. ರುದ್ರಾಂಕ್ಷ್ ಪಾಟೀಲ್ ಚಿನ್ನ ಜಯಿಸಿದರು. ತಿಲೋತ್ತಮಾ ಸೇನ್ ಅವರೊಂದಿಗೆ ಜೂನಿಯರ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಬೆಳ್ಳಿ ಮತ್ತು ಸಿವಿಲಿಯನ್ ವಿಭಾಗದಲ್ಲಿ ಕಂಚು ಗೆದ್ದರು.

ಅಭಿಷೇಕ್ ಶೇಖರ್ ಅವರು ಆರ್ಟ್ ಆಫ್ ಶೂಟಿಂಗ್ ಅಕಾಡೆಮಿಯಲ್ಲಿ ರಾಮಚಂದ್ರನ್ ಪುರುಷೋತ್ತಮನ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.

‘ಈ ವರ್ಷ ಆತ್ಮವಿಶ್ವಾಸದಿಂದ ರಾಷ್ಟ್ರೀಯ ಚಾಂಪಿಯನ್‌ಷಿಪ್ ಹೋಗಿದ್ದೆ. ಮುಂದಿನ ಒಲಿಂಪಿಕ್ಸ್‌ನಲ್ಲಿ ದೇಶಕ್ಕೆ ಪದಕ ಗೆಲ್ಲುವುದು ನನ್ನ ಗುರಿ’ ಎಂದು ಅಭಿಷೇಕ್ ಹೇಳಿದ್ದಾರೆ.

ಕುಸ್ತಿ: ಕರ್ನಾಟಕಕ್ಕೆ ಸಮಗ್ರ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಕುಸ್ತಿ ಪಟುಗಳು ತಮಿಳುನಾಡಿನ ಮೆಟ್ಟೂರಿನಲ್ಲಿ ಶನಿವಾರ ಮುಕ್ತಾಯಗೊಂಡ ದಕ್ಷಿಣ ಭಾರತ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ದಾಖಲೆಯ 60 ಪದಕಗಳನ್ನು ಗೆದ್ದು, ಅಮೋಘ ಸಾಧನೆ ಮೆರೆದಿದ್ದಾರೆ.

ಎರಡು ದಿನ ನಡೆದ ಸ್ಪರ್ಧೆಯಲ್ಲಿ ರಾಜ್ಯದ ಕುಸ್ತಿಪಟುಗಳು 15 ವರ್ಷದೊಳಗಿನ ವಿಭಾಗದಲ್ಲಿ 27 ಚಿನ್ನ, 2 ಬೆಳ್ಳಿ ಸೇರಿದಂತೆ 30 ಪದಕ ಹಾಗೂ ಸೀನಿಯರ್ ವಿಭಾಗದಲ್ಲಿ 22 ಚಿನ್ನ ಸೇರಿ 30 ಪದಕದೊಂದಿಗೆ ಎರಡೂ ವಿಭಾಗಗಳಲ್ಲೂ ಸಮಗ್ರ ಪ್ರಶಸ್ತಿ ತಮ್ಮದಾಗಿಸಿಕೊಂಡರು.

15 ವರ್ಷದೊಳಗಿನ ವಿಭಾಗದ ಬಾಲಕರ ಫ್ರೀಸ್ಟೈಲ್‌ನಲ್ಲಿ 10 ಚಿನ್ನ; ಗ್ರೀಕೊ ರೋಮನ್ ವಿಭಾಗದಲ್ಲಿ 9 ಚಿನ್ನ ಮತ್ತು 1 ಬೆಳ್ಳಿ ಹಾಗೂ ಮಹಿಳಾ ಕುಸ್ತಿಯಲ್ಲಿ 8 ಚಿನ್ನ, ಬೆಳ್ಳಿ 1 ಮತ್ತು ಕಂಚು 1 ಜಯಿಸಿದ್ದಾರೆ.

ಸೀನಿಯರ್ ವಿಭಾಗದ ಪುರುಷರ ಫ್ರೀಸ್ಟೈಲ್‌ನಲ್ಲಿ 8 ಚಿನ್ನ, 2 ಬೆಳ್ಳಿ; ಗ್ರೀಕೊ ರೋಮನ್ ವಿಭಾಗದಲ್ಲಿ 9 ಚಿನ್ನ, 1 ಬೆಳ್ಳಿ ಹಾಗೂ ಮಹಿಳಾ ಕುಸ್ತಿಯಲ್ಲಿ 5 ಚಿನ್ನ, 5 ಬೆಳ್ಳಿ ಗೆದ್ದಿದ್ದಾರೆ.

ದಕ್ಷಿಣ ಭಾರತದ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯದ ಕುಸ್ತಿಪಟುಗಳ ಸಾಧನೆಯು ಅವರ ಶ್ರದ್ಧೆ ಮತ್ತು ಶ್ರೇಷ್ಠತೆಯ ಸಂಕೇತವಾಗಿದೆ. ಮಾತ್ರವಲ್ಲ, ಹೊಸ ಪ್ರತಿಭೆಗಳಿಗೆ ಪ್ರೇರಣೆಯಾಗಿದೆ ಎಂದು ಕರ್ನಾಟಕ ಕುಸ್ತಿ ಸಂಸ್ಥೆ ಅಧ್ಯಕ್ಷ ಬೆಳ್ಳಿಪ್ಪಾಡಿ ಗುಣರಂಜನ್ ಶೆಟ್ಟಿ ಹೇಳಿದ್ದಾರೆ.

ರೇಸ್: ಹೇಮಂತ್‌ಗೆ 15ನೇ ಪ್ರಶಸ್ತಿ

ಹೇಮಂತ್ ಮುದ್ದಪ್ಪ

ಚೆನ್ನೈ (ಪಿಟಿಐ): ಬೆಂಗಳೂರಿನ ರೈಡರ್ ಹೇಮಂತ್ ಮುದ್ದಪ್ಪ ಅವರು ಭಾನುವಾರ ಇಲ್ಲಿ ನಡೆದ ಎಂಎಂಎಸ್‌ಸಿ ಎಫ್‌ಎಂಎಸ್‌ಸಿಐ ಇಂಡಿಯನ್ ನ್ಯಾಷನಲ್ ಮೋಟಾರ್ ಸೈಕಲ್ ಡ್ರ್ಯಾಗ್ ರೇಸಿಂಗ್ ಚಾಂಪಿಯನ್‌ಷಿಪ್‌ನ ನಾಲ್ಕನೇ ಮತ್ತು ಅಂತಿಮ ಸುತ್ತಿನಲ್ಲಿ ತಮ್ಮ 15ನೇ ರಾಷ್ಟ್ರೀಯ ಪ್ರಶಸ್ತಿಯನ್ನು ಗೆದ್ದರು.

ಮಂತ್ರ ರೇಸಿಂಗ್‌ನ ಹೇಮಂತ್ ಈ ಮೊದಲು 13 ಕಿರೀಟ ಮುಡಿಗೇರಿಸಿಕೊಂಡಿದ್ದರು. ಭಾನುವಾರ ನಡೆದ ಎರಡು ವಿಭಾಗಗಳ ಸ್ಪರ್ಧೆಯಲ್ಲಿ ಅವರು ವಿಜೇತರಾದರು.

ಭೂಮಿಕಾ ಓದಿರಿ

ಆರೋಗ್ಯ ಉಚಿತ ತಪಾಸಣಾ ಶಿಬಿರ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಾಮಮೂರ್ತಿನಗರ ವಾರ್ಡ್‌ನ ಕಲ್ಕೆರೆ ಗ್ರಾಮದ ಕಲ್ಯಾಣಿ ವೃತದಲ್ಲಿ ಶಾಂತಕೃಷ್ಣಮೂರ್ತಿ ಫೌಂಡೇಷನ್ ವತಿಯಿಂದ ಆರೋಗ್ಯ ಉಚಿತ ಶಿಬಿರ ಆಯೋಜಿಸಲಾಗಿತ್ತು. ಸ್ಪರ್ಶ್ ಆಸ್ಪತ್ರೆ, ಅಲ್ಟೀಸ್ ಆಸ್ಪತ್ರೆ, ಬ್ಲೂಕ್ರಾಸ್ ಆಸ್ಪತ್ರೆ, ವೈದೇಹಿ ಆಸ್ಪತ್ರೆ, ಪೀಪಲ್ ಟ್ರೀ ಆಸ್ಪತ್ರೆ, ಶ್ರದ್ಧಾ ಆಸ್ಪತ್ರೆ, ಮಹಾವೀರ ಜೈನ್ ಆಸ್ಪತ್ರೆ ಸಹಭಾಗಿತ್ವದಲ್ಲಿ ಆರೋಗ್ಯ ಶಿಬಿರ ನಡೆಯಿತು.

ರಕ್ತದೊತ್ತಡ, ಸಕ್ಕರೆ ಕಾಯಿಲೆ, ಕೊಲೆಸ್ಟ್ರಾಲ್, ಹೆಪಟೈಟಿಸ್ ಬಿ, ಹಿಮೊಗ್ಲೋಬಿನ್, ಹೃದ್ರೋಗ, ಮಿದುಳಿನ ಸಮಸ್ಯೆ, ಕ್ಯಾನ್ಸರ್ ಪರೀಕ್ಷೆ, ಇಸಿಜಿ, ಫಿಜಿಯೋಥೆರಪಿ, ಚರ್ಮರೋಗ, ಮೂಳೆ ಪರೀಕ್ಷೆ, ಇಎನ್‌ಟಿ ಮತ್ತಿತರ ತಪಾಸಣೆ ಮಾಡಲಾಯಿತು. ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಎಸ್.ಕೆ. ಫೌಂಡೇಷನ್ ಅಧ್ಯಕ್ಷೆ ಶಾಂತಕೃಷ್ಣಮೂರ್ತಿ ಮಾತನಾಡಿ, ‘ಕಳೆದ ಐದಾರು ವರ್ಷಗಳಿಂದ ರಾಮಮೂರ್ತಿನಗರ ವಾರ್ಡ್ ಎನ್.ಆರ್.ಐ ಬಡಾವಣೆ, ಕೆ.ಚನ್ನಸಂದ್ರ, ಕಲ್ಕೆರೆ ಹಾಗೂ ವಿವಿಧ ಭಾಗಗಳಲ್ಲಿ ಉಚಿತ ಅರೋಗ್ಯ ಶಿಬಿರ ಆಯೋಜಿಸುತ್ತಿದ್ದೇವೆ. ಈ ಶಿಬಿರದಲ್ಲಿ ಮೂರು ಸಾವಿರಕ್ಕೂ ಅಧಿಕ ಮಂದಿ ಅರೋಗ್ಯ ತಪಾಸಣೆ ಮಾಡಿಸಿಕೊಂಡಿದ್ದಾರೆ’ ಎಂದರು.

ಅರೋಗ್ಯ ಶಿಬಿರದಲ್ಲಿ ಶಾಸಕ ಬೈರತಿ ಬಸವರಾಜ, ಬಿಬಿಎಂಪಿ ಮಾಜಿ ಸದಸ್ಯ ಕಲ್ಕೆರೆ ಎಂ.ರೇವಣ್ಣ, ಫೌಂಡೇಷನ್ ಸಂಸ್ಥಾಪಕ ಕಲ್ಕೆರೆ ಕೃಷ್ಣಮೂರ್ತಿ ಮುಖಂಡರಾದ ಮಾದೇಶಣ್ಣ, ವಿಜಯ್, ಗಿರೀಶ್, ಕಲ್ಕೆರೆ ಗಂಗಾಧರ್, ಸುಬ್ಬು ಹಾಜರಿದ್ದರು.

ಆರೋಗ್ಯ ಉಚಿತ ಶಿಬಿರದಲ್ಲಿ ಪಾಲ್ಗೊಂಡು ರಕ್ತದಾನ ಮಾಡಿದವರಿಗೆ ಶಾಂತಕೃಷ್ಣಮೂರ್ತಿ ಪ್ರಮಾಣ ಪತ್ರ ವಿತರಿಸಿದರು. ಸಂಸ್ಥಾಪಕ ಅಧ್ಯಕ್ಷ ಕಲ್ಕೆರೆ ಕೃಷ್ಣಮೂರ್ತಿ ಇದ್ದರು

ಬೆಂಗಳೂರು ವಿಭಾಗ ಮಟ್ಟದ ಥ್ರೋ ಬಾಲ್ ಪಂದ್ಯಾವಳಿ • 11 ಜಿಲ್ಲೆಗಳ 44 ತಂಡದ 700 ಕ್ರೀಡಾಪಟುಗಳು ಭಾಗಿ

ಬೆಂಗಳೂರು ದಕ್ಷಿಣ, ರಾಮನಗರ, ಶಿವಮೊಗ್ಗಕ್ಕೆ ಜಯ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿ ನಡೆದ ಬೆಂಗಳೂರು ವಿಭಾಗ ಮಟ್ಟದ 4 ಹಾಗೂ 17 ವರ್ಷ ವಯೋಮಾನದ ಬಾಲಕ ಮತ್ತು ಬಾಲಕಿಯರ ಥ್ರೋ ಬಾಲ್ ಪಂದ್ಯಾವಳಿಯಲ್ಲಿ ಬೆಂಗಳೂರು ದಕ್ಷಿಣ, ರಾಮನಗರ, ಶಿವಮೊಗ್ಗ ತಂಡಗಳು ಜಯ ಸಾಧಿಸಿದವು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆಗಳ ಸಹಯೋಗದಲ್ಲಿ ಶನಿವಾರ ಆರಂಭವಾದ ಪಂದ್ಯಾವಳಿಯಲ್ಲಿ 11 ಜಿಲ್ಲೆಗಳ 44 ತಂಡದ 700 ಜನ ಕ್ರೀಡಾಪಟುಗಳು ಭಾಗವಹಿಸಿದ್ದಾರೆ.

ಹಿರಿಯ ಪ್ರಾಥಮಿಕ ಶಾಲೆಯ ಬಾಲಕರ ವಿಭಾಗದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆ ಪ್ರಥಮ ಸ್ಥಾನ ಮತ್ತು ರಾಮನಗರ ಜಿಲ್ಲೆಯ ಬಾಲಕರು ದ್ವಿತೀಯ ಸ್ಥಾನ ಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ರಾಮನಗರ ಜಿಲ್ಲೆಯ ತಂಡ ಪ್ರಥಮ ಹಾಗೂ ಬೆಂಗಳೂರು ದಕ್ಷಿಣ ತಂಡ ದ್ವಿತೀಯ ಸ್ಥಾನ ಪಡೆಯಿತು.

ಕಿರಿಯ ಪ್ರಾಥಮಿಕ ಶಾಲೆ ಬಾಲಕರ ವಿಭಾಗದಲ್ಲಿ ಬೆಂಗಳೂರು ದಕ್ಷಿಣ ಮತ್ತು ಶಿವಮೊಗ್ಗ ತಂಡಗಳು ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದವು. ಬಾಲಕಿಯರ ವಿಭಾಗದಲ್ಲಿ ಶಿವಮೊಗ್ಗ ತಂಡ ಮೊದಲ ಹಾಗೂ ತುಮಕೂರು ತಂಡ ಎರಡನೇ ಸ್ಥಾನ ಪಡೆದಿವೆ.

ಕ್ರೀಡಾಕೂಟಕ್ಕೆ ಚಾಲನೆ: ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಎಸ್.ಆರ್.ರವಿ ಕುಮಾರ್ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬೈಲಾಂಜಿನಪ್ಪ, ಜಿ.ಪಂ ಮಾಜಿ ಸದಸ್ಯ ಕೆ.ಸಿ.ಮಂಜುನಾಥ್, ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಕೆ.ಶ್ರೀನಿವಾಸ್ ಗೌಡ, ಜಿಲ್ಲಾ ಶಿಕ್ಷಣಾಧಿಕಾರಿ ಹನುಮ ನಾಯಕ್, ಜಿಲ್ಲಾ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ರಮೇಶ್, ಮುಖಂಡರಾದ ಮಂಜುನಾಥ್, ತಾಲ್ಲೂಕು ದೈಹಿಕ ಶಿಕ್ಷಣ ಪರಿ ವೀಕ್ಷಕ ವೆಂಕಟೇಶ್, ತಾಲ್ಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಪುಟ್ಟಸ್ವಾಮಿ, ಜಿಲ್ಲಾ ಕೆಡಿಪಿ ಸದಸ್ಯ ಎಸ್. ಕೆ. ಕೋದಂಡರಾಮಯ್ಯ ಇದ್ದರು.

ದೇವನಹಳ್ಳಿ ಜೂನಿಯರ್ ಕಾಲೇಜು ಮೈದಾನದಲ್ಲಿ ಆರಂಭವಾದ ಬಾಲಕ ಮತ್ತು ಬಾಲಕಿಯರ ಬೆಂಗಳೂರು ವಿಭಾಗ ಮಟ್ಟದ ಥ್ರೋ ಬಾಲ್ ಪಂದ್ಯಾವಳಿಗೆ ಚಾಲನೆ ನೀಡಿದ ಕ್ಷಣ

ಕ್ರೀಡಾಕೂಟಕ್ಕೆ ಚಾಲನೆ

ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಎಸ್.ಆರ್.ರವಿ ಕುಮಾರ್, ಕ್ರೀಡೆಯಲ್ಲಿ ಸೋಲು–ಗೆಲುವನ್ನು ಸಮಾನವಾಗಿ ಸ್ವೀಕಾರ ಮಾಡಬೇಕು ಎಂದರು.

ವಿಶ್ವದಲ್ಲಿಯೇ ಭಾರತ ಹೆಚ್ಚು ಯುವ ಸಮುದಾಯವನ್ನು ಹೊಂದಿದೆ. ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ವಿವಿಧ ಕ್ರೀಡೆಯಲ್ಲಿ ಕಠಿಣ ಪರಿಶ್ರಮದ ಮೂಲಕ ಪ್ರದರ್ಶನ ನೀಡಿದರೆ, ಮುಂದೊಂದು ದಿನ ಒಲಿಂಪಿಕ್ಸ್‌ನಲ್ಲಿ ಸಾಧಕರಾಗಿ ಗುರುತಿಸಿಕೊಳ್ಳಬಹುದು ಎಂದು ಹೇಳಿದರು.

ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬೈಲಾಂಜಿನಪ್ಪ, ಜಿ.ಪಂ ಮಾಜಿ ಸದಸ್ಯ ಕೆ.ಸಿ.ಮಂಜುನಾಥ್, ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಕೆ.ಶ್ರೀನಿವಾಸ್ ಗೌಡ, ಜಿಲ್ಲಾ ಶಿಕ್ಷಣಾಧಿಕಾರಿ ಹನುಮ ನಾಯಕ್, ಜಿಲ್ಲಾ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ರಮೇಶ್, ಮುಖಂಡರಾದ ಮಂಜುನಾಥ್, ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ವೆಂಕಟೇಶ್, ತಾಲ್ಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಪುಟ್ಟಸ್ವಾಮಿ, ಜಿಲ್ಲಾ ಕೆಡಿಪಿ ಸದಸ್ಯ ಎಸ್.ಕೆ.ಕೋದಂಡರಾಮಯ್ಯ ಇದ್ದರು.

ಕಾಂತೂರು ಫ್ರೆಂಡ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರ್ನಾಡಿನ ಕಾಂತೂರು ಫ್ರೆಂಡ್ಸ್ ತಂಡವು ಕೊಯಮತ್ತೂರಿನ ಈಶಾ ಯೋಗ ಕೇಂದ್ರದಲ್ಲಿ ನಡೆದ 16ನೇ ಈಶ ಗ್ರಾಮೋತ್ಸವದ ಮಹಿಳೆಯರ ಥ್ರೋ ಬಾಲ್ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಮೂರ್ನಾಡಿನ (ಮಾರಗೋಡು) ತಂಡವು ಫೈನಲ್ ಹಣಾಹಣಿಯಲ್ಲಿ ಕೊಯಮತ್ತೂರಿನ ಪಿ.ಜಿ ಪುದೂರ್ ತಂಡವನ್ನು ನೇರ ಸೆಟ್‌ಗಳಲ್ಲಿ ಸೋಲಿಸಿ ಪ್ರಶಸ್ತಿ ಜಯಿಸಿತು.

ಪುರುಷರ ವಾಲಿಬಾಲ್ ಪ್ರಶಸ್ತಿಯೂ ಕರ್ನಾಟಕದ ಪಾಲಾಯಿತು. ಫೈನಲ್‌ನ ರೋಚಕ ಹಣಾಹಣಿಯಲ್ಲಿ ಚಿಕ್ಕಮಗಳೂರು ಅಲೀಫ್ ಸ್ಟಾರ್ ತಂಡವು ಉಡುಪಿಯ ಪಲ್ಲಿ ಫ್ರೆಂಡ್ಸ್ ತಂಡವನ್ನು ಮಣಿಸಿ ಪ್ರಶಸ್ತಿ ಮುಡಿಗೇರಿಸಿ ಕೊಂಡಿತು. ವಿಜೇತ ತಂಡಗಳು ತಲಾ ₹5 ಲಕ್ಷ ನಗದು ಬಹುಮಾನವನ್ನು ಪಡೆಯಿತು. ರನ್ನರ್ ಅಪ್ ತಂಡವು ₹3 ಲಕ್ಷ ನಗದು ಬಹುಮಾನ ಪಡೆಯಿತು.

ಕ್ರಿಕೆಟ್ ದಿಗ್ಗಜರಾದ ವೀರೇಂದ್ರ ಸೆಹ್ವಾಗ್ ಮತ್ತು ವೆಂಕಟೇಶ್ ಪ್ರಸಾದ್ ಅವರು ಈಶಾ ಗ್ರಾಮೋತ್ಸವದಲ್ಲಿ ಪಾಲ್ಗೊಂಡು ಮೆರುಗು ಹೆಚ್ಚಿಸಿದರು.

16ನೇ ಈಶಾ ಗ್ರಾಮೋತ್ಸವದ ಮಹಿಳೆಯರ ಥ್ರೋಬಾಲ್ ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದ ಕರ್ನಾಟಕದ ಮೂರ್ನಾಡಿನ ಕಾಂತೂರು ಫ್ರೆಂಡ್ಸ್ ತಂಡ

ಮಹಾಮೇಧಾನಂದ ಸ್ವಾಮೀಜಿ ಅಭಿಪ್ರಾಯ

‘ಪ್ರಗತಿ ಸಾಧಿಸಲು ಸಂಕಲ್ಪ ಮುಖ್ಯ’

ಪ್ರಜಾವಾಣಿ ವಾರ್ತೆ

ಯಲಹಂಕ: ಯಾವುದೇ ಸಂಸ್ಥೆಗಳು, ಮನೆ ಅಥವಾ ವ್ಯಕ್ತಿ ಬೆಳವಣಿಗೆಯಾಗಲು ಸಂಕಲ್ಪ ಮಾಡುವುದು ಬಹಳಮುಖ್ಯ ಎಂದು ಮೈಸೂರಿನ ರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಸ್ವಾಮಿ ಮಹಾಮೇಧಾನಂದಜಿ ಮಹಾರಾಜ್ ಅಭಿಪ್ರಾಯಪಟ್ಟರು.

ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ‘ಸ್ನೇಹ-ಸಮ್ಮಿಲನ’ – ಶೇಷಾದ್ರಿಪುರ ಸಮೂಹ ವಿದ್ಯಾಸಂಸ್ಥೆಯ ಅಂಗ-ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಹಿರಿಯರಿಗೆ ನೀಡಿದ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಇಬ್ಬರು ತಾಯಂದಿರಿಂದ ಆರಂಭವಾದ ಈ ಸಂಸ್ಥೆ ಇಂದು ಸಹಸ್ರಾರು ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಧಾರೆಯೆರೆದಿದೆ. ಜೊತೆಗೆ ನೂರಾರು ಸಿಬ್ಬಂದಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿದೆ. ಇವೆಲ್ಲದರ ಫಲವನ್ನೂ ಇವತ್ತು ನೋಡುತ್ತಿದ್ದೇವೆ’ ಎಂದು ಹೇಳಿದರು. ಶಿಕ್ಷಣ ತಜ್ಞ ವೂಡೇ. ಪಿ.ಕೃಷ್ಣ ಮಾತನಾಡಿ, ‘ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯು ಹಿಂದಿನಿಂದಲೂ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದೆ. ಜೊತೆಗೆ ಭಾರತೀಯ ಕಲೆ, ಸಂಸ್ಕೃತಿ ಹಾಗೂ ಪರಂಪರೆಯ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುತ್ತಿದೆ’ ಎಂದರು. ಕಾರ್ಯಕ್ರಮದಲ್ಲಿ ಶೇಷಾದ್ರಿಪುರ ಸಮೂಹ ವಿದ್ಯಾಸಂಸ್ಥೆಯ ಅಂಗ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ 20 ಮಂದಿಗೆ ಸೇವಾಪ್ರಶಸ್ತಿ ಪ್ರದಾನ ಮಾಡಲಾಯಿತು.

ಶೇಷಾದ್ರಿಪುರ ಸಮೂಹ ವಿದ್ಯಾಸಂಸ್ಥೆಯ ಅಂಗ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಹಿರಿಯರಿಗೆ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸ್ವಾಮಿ ಮಹಾಮೇಧಾನಂದಜಿ ಮಹಾರಾಜ್, ವೂಡೇ.ಪಿ.ಕೃಷ್ಣ, ಎನ್‌ಆರ್‌ಪಂಡಿತಾರಾಧ್ಯ, ಟಿ.ಎಸ್ ಹೆಂಜಾರಪ್ಪ, ಡಬ್ಲ್ಯು.ಎಚ್ ಅನಿಲ್‌ಕುಮಾರ್, ಬಿ.ಎಂ. ಪಾರ್ಥಸಾರಥಿ, ಎಸ್ ಶೇಷನಾಯರಾಯಣ, ಎಂ.ಎಸ್ ನಟರಾಜ್, ಡಾ.ಎಸ್‌ಎನ್ ವೆಂಕಟೇಶ್ ಇದ್ದರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Teachers / Professors

MEI POLYTECHNIC
Rajajinagar, Bangalore – 560010
(Karnataka State Govt. Aided Institution)
E-Mail: meipolytechnic@gmail.com Phone: 08023351919

Invites applications from qualified and committed facilitators

Guest Lecturers and Lab Instructors for:
1. Electronics & Communication Engineering
2. Electrical & Electronics Engineering
3. Electronic Instrumentation & Control Engineering
4. Computer Science and Engineering
5. Civil Engineering
6. Mathematics

ELIGIBILITY
- **Guest Lecturers (Technical):** BE/BTech in relevant fields and knowledge of Kannada
- **Guest Lecturer (Mathematics):** M.Sc. in Mathematics and knowledge of Kannada
- **Lab Instructors:** ITI/Diploma in relevant fields

Send your CV and documents by 31-12-2024 to: meipolytechnic@gmail.com

For inquiries, contact:
Principal - Sri. R. Nagendra Prasad, Mobile:9880712506
Administrative Officer - Sri. S. Nagaraj, Mobile: 9110466431

CONNECT

Karnataka Skaters Strike 5 Gold Medals at National Championship.

Bengaluru : Karnataka Skaters dazzled at the 62nd National Roller Skating Championship conducted by Roller Skating Federation of India and hosted by Karnataka Roller Skating Association bringing immense pride for the state. Held in Bengaluru from December 5 to 8, 2024, the event saw stellar performances in the in-line freestyle discipline.

Our Proud Skaters **Siri Vinay Bandakka, Riyanshi S, Aadithya Vikram, and Rachael Mathews Secured five gold medals and Showcased Karnataka's rising talent on the national stage.**

BUSINESS

Business Offers

Finance

NRI'S INVESTMENT
And Finance Available On Low Interest Against Properties,Land& Building,Sites,Flats,Converted& Agriculture Lands
Call:7204995189

DH Classifieds More value, more impact ಪ್ರಜಾವಾಣಿ
PUBLIC NOTICE
www.dhclassifieds.com BOOK NOW
BOOK YOUR PUBLIC NOTICE ADS IN DH ALL + PRAJAVANI BENGALURU CITY, ON ALL DAYS
@ 550/-* PER SQCM
*Conditions apply
For more details contact: 9886213331 9901641752

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ರಸ್ತೆಯ ಎರಡೂ ಕಡೆ ಏಕಕಾಲಕ್ಕೆ ಕಾಮಗಾರಿ, ಬಸ್ ಸಂಚಾರ ಸ್ಥಗಿತ, ನಿಲ್ದಾಣ ಬಂದ್

ಎನ್.ಆರ್. ಕಾಲೊನಿ ದೂಳುಕೂಪ

ಎನ್.ಆರ್. ಕಾಲೊನಿಯ ಬಿಎಂಟಿಸಿ ಬಸ್ ನಿಲ್ದಾಣವನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ ಚಿತ್ರಗಳು: ರಂಜು ಪಿ.

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನರಸಿಂಹರಾಜ ಕಾಲೊನಿ (ಎನ್.ಆರ್.ಕಾಲೊನಿ) ವೃತ್ತದಿಂದ ನೆಟ್ಟಕಲ್ಲಪ್ಪ ವೃತ್ತದವರೆಗಿನ ರಸ್ತೆಯನ್ನು ವೈಟ್ ಟಾಪಿಂಗ್ ಕಾಮಗಾರಿಗಾಗಿ ಅಗೆದು ಹಾಕಿರುವುದರಿಂದ ಎನ್.ಆರ್. ಕಾಲೊನಿ ದೂಳುಮಯವಾಗಿದೆ. ಜನರಿಗೆ ಓಡಾಡುವುದಕ್ಕೆ ಸಮಸ್ಯೆಯಾಗಿದೆ. ಸುತ್ತಮುತ್ತಲಿನ ನಿವಾಸಿಗಳು ದೂಳು ಮಧ್ಯೆ ಬದುಕು ಕಳೆಯುವಂತಾಗಿದೆ.

ಬಿಬಿಎಂಪಿಯಿಂದ ವೈಟ್ ಟಾಪಿಂಗ್ ಕಾಮಗಾರಿ, ಜಲಮಂಡಳಿಯಿಂದ ಒಳಚರಂಡಿ ಕೊಳವೆ ಮಾರ್ಗ ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ಜೊತೆಗೆ ಮಳೆನೀರು ಚರಂಡಿಯನ್ನೂ ನಿರ್ಮಿಸಲಾಗುತ್ತಿದೆ. ಕೆಲವೆಡೆ ರಸ್ತೆ ಬದಿಯಲ್ಲಿ ಅಗೆದು ಪೈಪ್ ಹಾಕಿ ಮುಚ್ಚಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ ನೆಲ ಅಗೆದು ಹಾಗೆ ಬಿಡಲಾಗಿದೆ. ರಸ್ತೆಯ ಎರಡೂ ಕಡೆ ಒಟ್ಟೊಟ್ಟಿಗೆ ಕಾಮಗಾರಿ ನಡೆಸುತ್ತಿರುವುದರಿಂದ ವಾಹನ ಪಾರ್ಕಿಂಗ್‌ಗೂ ಸಮಸ್ಯೆಯಾಗಿದೆ. ಈ ರಸ್ತೆಯಲ್ಲಿ ಬಸ್ ಸಂಚಾರವೇ ಸ್ಥಗಿತಗೊಂಡಿದೆ. ಕಟ್ಟೆ ಭವನ ರಸ್ತೆಯಲ್ಲಿರುವ ಬಿಎಂಟಿಸಿ ಬಸ್ ನಿಲ್ದಾಣವನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ.

ಒಳ ರಸ್ತೆಗಳು ಈ ರಸ್ತೆಯನ್ನು ಸಂಪರ್ಕಿಸುವ ಜಾಗದಲ್ಲಿ ಅಗೆದಿರುವುದರಿಂದ ವಾಹನಗಳೆಲ್ಲ ಸುತ್ತಿಬಳಸಿ ಹೋಗಬೇಕಿದೆ. ತ್ಯಾಗರಾಜನಗರ, ಉತ್ತರಹಳ್ಳಿ ಕಡೆ ಹೋಗುವವರಿಗೆ ಇಲ್ಲಿ ಬಸ್ ಸಂಪರ್ಕ ಇಲ್ಲದೇ ಆಟೊ ಮಾಡಿಕೊಂಡು ತೆರಳಬೇಕಾದ ಅನಿವಾರ್ಯ ಸ್ಥಿತಿ ಉಂಟಾಗಿದೆ. ಒಳರಸ್ತೆಗಳಲ್ಲಿ ವಾಹನದಟ್ಟಣೆ ಹೆಚ್ಚಾಗಿದೆ.

‘ಇಲ್ಲಿನ ರಸ್ತೆ ಹಾಳಾಗಿರಲಿಲ್ಲ. ಆದರೂ, ಅಭಿವೃದ್ಧಿ ಹೆಸರಲ್ಲಿ ಅಗೆದು ಹಾಕಿದ್ದಾರೆ. ಅಂಗಡಿ, ಹೋಟೆಲ್, ಬೇಕರಿಗಳಿಗೆ ಹೋಗುವಂತಿಲ್ಲ. ಎಲ್ಲ ಕಡೆ ದೂಳು ತುಂಬಿದೆ. ಜೊತೆಗೆ ವಾಹನಗಳನ್ನು ಪಾರ್ಕಿಂಗ್ ಮಾಡಲು ಸಾಧ್ಯವಾಗದ ಕಾರಣ, ಜನಸಂಚಾರವೇ ಕಡಿಮೆಯಾಗಿದೆ’ ಎಂದು ಎನ್.ಆರ್. ಕಾಲೊನಿ 3ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ ನಿವಾಸಿ ಅನೂಜ್ ತಿಳಿಸಿದರು.

‘ಮೂರೂವರೆ ತಿಂಗಳಿನಿಂದ ಕಷ್ಟ ಅನುಭವಿಸುತ್ತಿದ್ದೇವೆ. ಜನರು ಮಾಸ್ಕ್ ಹಾಕಿಕೊಂಡು ಓಡಾಡುತ್ತಿದ್ದಾರೆ. ನಾವು ಇಲ್ಲೇ ವ್ಯಾಪಾರ ಮಾಡುತ್ತಿರುವುದರಿಂದ ದೂಳು ಹೊಟ್ಟೆ ಸೇರುತ್ತಿದೆ’ ಎಂದು ಬೇಕರಿ ವ್ಯಾಪಾರಸ್ಥ ಹೇಮಂತ್ ಅಳಲು ತೋಡಿಕೊಂಡರು.

ಜನ ಏನಂತಾರೆ?

ವೇಗವಾಗಿ ನಡೆಯಲಿ



ಸುಮಾರು ನಾಲ್ಕು ತಿಂಗಳಿನಿಂದ ಕಾಮಗಾರಿ ನಡೆಯುತ್ತಿದೆ. ಫೆಬ್ರುವರಿ–ಮಾರ್ಚ್ ಒಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆದರೆ, ಇಲ್ಲಿ ಕಾಮಗಾರಿ ನಡೆಯುತ್ತಿರುವ ವೇಗ ನೋಡಿದರೆ ಇನ್ನು ಆರು ತಿಂಗಳು ಬೇಕಾಗಬಹುದು.

ನಾರಾಯಣ ಸ್ವಾಮಿ, ಬಾಲಾಜಿ ಎಂಟರ್‌ಪ್ರೈಸಸ್

ಗಾಜು ಒರೆಸಿ ಸಾಕಾಗಿದೆ

ನಮ್ಮ ಸ್ಟುಡಿಯೊದ ಗಾಜು ಒರೆಸಿ ಒರೆಸಿ ಸಾಕಾಗಿದೆ. ಈ ರಸ್ತೆ ಅಗೆದು ಹಾಕಿದ ಮೇಲೆ ಹೊಸ ಗ್ರಾಹಕರಲ್ಲ, ಕಾಯಂ ಗ್ರಾಹಕರೂ ಬರುತ್ತಿಲ್ಲ. ವ್ಯಾಪಾರ ಸಂಪೂರ್ಣ ಬಿದ್ದು ಹೋಗಿದೆ. ಅದಕ್ಕೆ ಸುಮ್ಮನೆ ಗಾಜು ಒರೆಸಿಕೊಂಡು ಕೂರುವುದೇ ಕೆಲಸವಾಗಿದೆ. ದೂಳು ತಿಂದು ನಮ್ಮ ಆರೋಗ್ಯವೂ ಕೆಟ್ಟು ಹೋಗಿದೆ.

ಪಳನಿ, ಎಸ್.ಎ. ಫೋಟೊ ಪಾಯಿಂಟ್

ಬೇಗ ಪೂರ್ಣಗೊಳಿಸಿ...

ಗ್ರಾಹಕರೇ ಬರುತ್ತಿಲ್ಲ. ದೂಳು ಏಳದಂತೆ ದಿನಕ್ಕೆ ಎರಡು ಬಾರಿ ನೀರು ಚಿಮುಕಿಸಬೇಕು. ಆದರೆ, ಬಿಬಿಎಂಪಿಯಾಗಲಿ, ಒಳಚರಂಡಿ ಮಂಡಳಿಯಾಗಲಿ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಅಂಗಡಿಯವರೇ ತಮ್ಮ ತಮ್ಮ ಅಂಗಡಿಗಳ ಮುಂದೆ ನೀರು ಹಾಕುತ್ತಿದ್ದಾರೆ. ಬೇಗ ಕಾಮಗಾರಿ ಪೂರ್ಣಗೊಳಿಸಬೇಕು.

ಸ್ವಾಮಿ, ಟೇಲರ್



ಕಾಮಗಾರಿಗೆ ಬೇಕಾದ ವಸ್ತುಗಳನ್ನು ರಸ್ತೆ ಬದಿ ಹಾಕಿರುವುದು

‘ಕಾಮಗಾರಿ ಪೂರ್ಣ: ಸಮಯ ಬೇಕು’

ನಗರದ ವಿವಿಧ ಭಾಗಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಒಳಚರಂಡಿ ಕೊಳವೆ ಅಳವಡಿಕೆ, ಮಳೆನೀರಿನ ಚರಂಡಿ ನಿರ್ಮಾಣ ಸಹಿತ ಮೂಲ ಅವಶ್ಯಕತೆಗಳೊಂದಿಗೆ ಕಾಮಗಾರಿ ನಡೆಸಬೇಕಿರುವುದರಿಂದ ಹೆಚ್ಚು ಸಮಯ ಬೇಕಾಗುತ್ತದೆ. ಆದಷ್ಟು ಬೇಗ ಕೆಲಸವನ್ನು ಪೂರ್ಣಗೊಳಿಸಲೆಂದೇ ಎರಡೂ ಕಡೆ ಏಕಕಾಲದಲ್ಲಿ ಕಾಮಗಾರಿ ನಡೆಸಲಾಗುತ್ತಿದೆ. ಒಳಚರಂಡಿ, ಚರಂಡಿ, ಯುಟಿಲಿಟಿ ಪೈಪ್ ಅಳವಡಿಸುವ ಕೆಲಸ ಮುಗಿದ ಬಳಿಕ ಪಾದಚಾರಿ ಮಾರ್ಗ ನಿರ್ಮಾಣ ಕಾರ್ಯ ನಡೆಯಲಿದೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ ಪ್ರತಿಕ್ರಿಯೆ ನೀಡಲು ಕರೆ ಸ್ವೀಕರಿಸಲಿಲ್ಲ.

ಕಟ್ಟೆ ಭವನ ರಸ್ತೆಯನ್ನು ಅಗೆದು ಹಾಕಿರುವುದು

ಸಿ.ಎಂ ಭರವಸೆ: ಸಾರಿಗೆ ಮುಷ್ಕರ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾರಿಗೆ ನಿಗಮಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ನೌಕರರ ಸಮಸ್ಯೆಗಳ ಬಗ್ಗೆ ಸಂಘಟನೆಗಳೊಂದಿಗೆ ಸಂಕ್ರಾಂತಿ ಬಳಿಕ ಸಭೆ ನಡೆಸುವುದಾಗಿ ಭರವಸೆ ನೀಡಿದ ಕಾರಣ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಡಿ.31ರಂದು ನಡೆಸಲು ಉದ್ದೇಶಿಸಿದ ಮುಷ್ಕರವನ್ನು ಹಿಂದಕ್ಕೆ ಪಡೆದಿದೆ.

2020ರ ಜನವರಿ 1ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆ ಮಾಡಲಾಗಿತ್ತು. 2023ರ ಫೆಬ್ರುವರಿ 28ರವರೆಗೆ ಪರಿಷ್ಕರಣೆಯ ಹಿಂಬಾಕಿಯನ್ನು ಆಗಿನ ಸರ್ಕಾರ ನೀಡಿಲ್ಲ. ನೌಕರರ ಮತ್ತು ಈ ಸಮಯದಲ್ಲಿ ನಿವೃತ್ತರಾದವರಿಗೆ ನೀಡಬೇಕಾದ ಹಿಂಬಾಕಿ ₹ 1,785 ಕೋಟಿಯಾಗಿದ್ದು, ಅದನ್ನು ಕೂಡಲೇ ಪಾವತಿಸಬೇಕು 2024ರ ಜನವರಿ 1ರಿಂದ ಅನ್ವಯವಾಗುವಂತೆ ಮತ್ತೆ ವೇತನ ಪರಿಷ್ಕರಣೆ ಮಾಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಜಂಟಿ ಕ್ರಿಯಾ ಸಮಿತಿ ಮುಷ್ಕರಕ್ಕೆ ಕರೆ ನೀಡಿತ್ತು.

ಈ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿಯವರ ನಿವಾಸ ‘ಕಾವೇರಿ’ಯಲ್ಲಿ ಭಾನುವಾರ ರಾತ್ರಿ ಸಭೆ ಕರೆದಿದ್ದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಆರ್‌ಟಿಸಿ, ಕೆಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರು, ಉನ್ನತ ಅಧಿಕಾರಿಗಳು ಭಾಗವಹಿಸಿದ್ದರು.

‘ಮುಷ್ಕರದಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಸಾರಿಗೆ ನಿಗಮಗಳ ನಿವೃತ್ತ ನೌಕರರಿಗೆ ನೀಡಬೇಕಿದ್ದ ಬಾಕಿ ಉಪಧನ, ಗಳಿಕೆ ನಗದೀಕರಣ ಮೊತ್ತ ₹ 224 ಕೋಟಿಯನ್ನು ಬಿಡುಗಡೆ ಮಾಡಲಾಗಿದೆ. ಬಿಜೆಪಿ ಸರ್ಕಾರದ ಆಡಳಿತದ ಅವಧಿಯಲ್ಲಿ ₹ 5,900 ಕೋಟಿ ನಷ್ಟ ಉಂಟಾಗಿತ್ತು. ಅದನ್ನು ತುಂಬಿಸುವ ಕೆಲಸ ಮಾಡುತ್ತಿದ್ದೇವೆ. ಸಂಘಟನೆಗಳೊಂದಿಗೆ ಅನೇಕ ಸಲ ನಾನು ಚರ್ಚೆ ಮಾಡಿದ್ದೆ. ಇಂದು ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಸಭೆ ನಡೆಸಲಾಯಿತು. ₹ 2000 ಕೋಟಿ ಬಿಡುಗಡೆ ಮಾಡಲು ಮುಖ್ಯಮಂತ್ರಿ ತಯಾರಿದ್ದಾರೆ. ಫೆಬ್ರುವರಿಯಲ್ಲಿ ಮಂಡಿಸುವ ಬಜೆಟ್‌ನಲ್ಲಿ ಬೇಡಿಕೆಗಳನ್ನು ಸೇರಿಸಲಾಗುವುದು. ಸಂಪುಟ ಸಭೆಯಲ್ಲಿ ಚರ್ಚೆಯಾದ ಬಳಿಕ ಹಣ ಬಿಡುಗಡೆಯಾಗಲಿದೆ’ ಎಂದು ರಾಮಲಿಂಗಾರೆಡ್ಡಿ ಸಭೆಯ ಬಳಿಕ ಪ್ರತಿಕ್ರಿಯಿಸಿದ್ದಾರೆ.

‘ಸಾರಿಗೆ ನಿಗಮಗಳ ನೌಕರರ ಸಮಸ್ಯೆ ಆಲಿಸಲು ಸಂಕ್ರಾಂತಿ ಬಳಿಕ ಮುಖ್ಯಮಂತ್ರಿ ಸಭೆ ನಡೆಸುವುದಾಗಿ ಲಿಖಿತವಾಗಿ ತಿಳಿಸಿರುವುದರಿಂದ ಮುಷ್ಕರವನ್ನು ಮುಂದೂಡಲಾಗಿದೆ’ ಎಂದು ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್ ತಿಳಿಸಿದ್ದಾರೆ.

ಮತ್ತೊಂದು ಮಕ್ನಾ ಕಾಡಾನೆ ಸೆರೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಚಿಕ್ಕಮಣ್ಣುಗುಡ್ಡೆ ಅರಣ್ಯ ಪ್ರದೇಶದಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆ ತಂಡ ಶನಿವಾರ ಮತ್ತೊಂದು ಮಕ್ನಾ(ದಂತವಿಲ್ಲದ ಗಂಡು ಅಲ್ಲದ, ಹೆಣ್ಣೂ ಅಲ್ಲದ ಆನೆ)) ಕಾಡಾನೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದೆ.

ಚಿಕ್ಕಮಣ್ಣುಗುಡ್ಡೆ ಕಾಡಿನಲ್ಲಿ ಬೀಡುಬಿಟ್ಟಿರುವ ನಲವತ್ತು ವರ್ಷದ ಮಕ್ನಾ ಆನೆಯನ್ನು ಶನಿವಾರ ಬೆಳಗ್ಗೆ ಪತ್ತೆಹಚ್ಚಿದ ಕಾರ್ಯಾಚರಣೆ ತಂಡವು ಸಾಕಾನೆಗಳೊಂದಿಗೆ ಬಂದಿತು.

ತಂಡದ ಸದಸ್ಯರು ಅರವಳಿಕೆ ಚುಚ್ಚುಮದ್ದು ನೀಡಿ ಆನೆಯನ್ನು ಪ್ರಜ್ಞೆ ತಪ್ಪಿಸಿದ ನಂತರ ಕುತ್ತಿಗೆ, ಕಾಲಿಗೆ ದಪ್ಪ ಹಗ್ಗ ಬಿಗಿದರು. ಸ್ವಲ್ಪ ಸಮಯದ ನಂತರ ಎಚ್ಚರಗೊಂಡ ಆನೆಯನ್ನು ಸಾಕಾನೆಗಳ ಸಹಾಯದಿಂದ ಕರೆತಂದು ಕ್ರೇನ್ ಬಳಸಿಕೊಂಡು ಲಾರಿಗೆ ಸಾಗಿಸಲಾಯಿತು.

ಇದೇ ಆನೆಯನ್ನು ಕಳೆದ ವರ್ಷ ಇದೇ ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿಯಲಾಗಿತ್ತು.

ಚಿತ್ರಾವಳಿ

ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಕಾಮಾಕ್ಷಿಪಾಳ್ಯ ವಾರ್ಡ್‌ನಲ್ಲಿ ಭಾನುವಾರ ರಘುವೀರ್ ಎಸ್. ಗೌಡ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಓಂ ಶಕ್ತಿ ದೇವಿ (ಮೇಲ್ ಮರವತ್ತೂರ್) ಒಂಬತ್ತನೇ ವರ್ಷದ ಯಾತ್ರೆಗೆ ಉಚಿತ ಬಸ್ ಸೇವೆಯನ್ನು ಕಲ್ಪಿಸಲಾಗಿತ್ತು. ಇದೆ ವೇಳೆ ಯುವ ಕಾಂಗ್ರೆಸ್ ಮುಖಂಡ ರಘುವೀರ್ ಎಸ್. ಗೌಡ ಅವರ ಯಾತ್ರಾತ್ರಿಗಳಿಗೆ ಶುಭಹಾರೈಸಿದರು.

ಮಲ್ಲೇಶ್ವರದ ಶ್ರೀಕೃಷ್ಣದೇವರಾಯ ಕಲಾಮಂದಿರದಲ್ಲಿ ‘ಕ್ಲಾಸಿಕಲ್ ರಿದಮ್ಸ್’ ಆಯೋಜಿಸಿದ್ದ ಅನಾವರಣ್– ವಾರ್ಷಿಕ ನೃತ್ಯ ಕಾರ್ಯಕ್ರಮದಲ್ಲಿ ವಿಜಯ ರಂಗನಾಥ್, ಬಿ.ಎಸ್.ವಿಜಯಲಕ್ಷ್ಮಿ, ಪ್ರಭಾ ಮುಕುಂದ, ಸಂಧ್ಯಾ, ಮಂಜುಳಾ ಶ್ರೀಧರ್, ಶ್ರೀದೇವಿ ಗರುಡ, ರೇವತಿ ವೆಂಕಟೇಶ್, ಶ್ರೀರಂಗಮಣಿ ಬಿ.ಎಸ್. ಮತ್ತು ಇಂದ್ರಾಣಿ ಬಿ.ಎಸ್. ಅವರು ನೃತ್ಯ ಪ್ರದರ್ಶಿಸಿದರು.

ಪೀಣ್ಯ ದಾಸರಹಳ್ಳಿ ಸಮೀಪದ ಹಾವನೂರು ಬಡಾವಣೆಯ ಭೂಮಿಕಾ ಸೇವಾ ಫೌಂಡೇಷನ್ ಸಭಾಂಗಣದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನದ ಅಂಗವಾಗಿ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಉಚಿತವಾಗಿ ಕನ್ನಡ ಪುಸ್ತಕ ವಿತರಿಸಲಾಯಿತು. ಫೌಂಡೇಷನ್ ಅಧ್ಯಕ್ಷೆ ಲತಾ ಕುಂದರಗಿ, ಗೌರವ ಅಧ್ಯಕ್ಷ ಗುರುನಾಥ್ ಮತ್ತಿತತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮೂರು ದಿನಗಳ ‘ವಿಶ್ವ ಹವ್ಯಕ ಸಮ್ಮೇಳನ’ ಸಂಪನ್ನ

‘ಹವ್ಯಕ ಅಧ್ಯಯನ ಪೀಠ ಸ್ಥಾಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವ್ಯಕ ಕನ್ನಡವನ್ನು ಸಂರಕ್ಷಿಸಲು ‘ಹವ್ಯಕ ಅಧ್ಯಯನ ಪೀಠ’ವನ್ನು ಸರ್ಕಾರ ಸ್ಥಾಪಿಸಬೇಕು ಎಂಬುದು ಸೇರಿದಂತೆ ಎಂಟು ನಿರ್ಣಯಗಳನ್ನು ತೃತೀಯ ವಿಶ್ವ ಹವ್ಯಕ ಸಮ್ಮೇಳನದಲ್ಲಿ ಕೈಗೊಳ್ಳಲಾಯಿತು.

ಅಖಿಲ ಹವ್ಯಕ ಮಹಾಸಭಾವು ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ ಸಮ್ಮೇಳನವು ಭಾನುವಾರ ಸಂಪನ್ನವಾಯಿತು.

ಗ್ರಾಮೀಣ ಭಾಗಗಳಲ್ಲಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕು. ಅದಕ್ಕೆ ಅಗತ್ಯ ಸೌಕರ್ಯಗಳನ್ನು ಒದಗಿಸಬೇಕು. ಅಪರ ಕಾರ್ಯಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲು ಬೆಂಗಳೂರಿನ ಪ್ರಮುಖ ಸ್ಥಳದಲ್ಲಿ ‘ತರ್ಪಣ ಭವನ’ ನಿರ್ಮಿಸಬೇಕು. ಅಡಿಕೆ ಹಾಗೂ ಇತರ ಕೃಷಿಗಳಲ್ಲಿನ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಲು ಸರ್ಕಾರವನ್ನು ಆಗ್ರಹಿಸಬೇಕು ಎಂಬ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಪಂಚಮಸಾಲಿ ಮಠದ ವಚನಾನಂದ ಸ್ವಾಮೀಜಿ, ಶೃಂಗೇರಿಯ ಅಭಿನವ ಶಂಕರ ಭಾರತೀ ಸ್ವಾಮೀಜಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಮ್ಮೇಳನದ ಗೌರವಾಧ್ಯಕ್ಷರೂ ಆಗಿರುವ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನ ಪರಿಷತ್ತಿನ ಸದಸ್ಯ ಸಿ.ಟಿ. ರವಿ, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಮಂಜುನಾಥ ಗೌಡ, ಹವ್ಯಕ ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ ಉಪಸ್ಥಿತರಿದ್ದರು.

‘ಅಡಿಕೆ ಬಗ್ಗೆ ಸಂಶೋಧನೆ’



‘ಅಡಿಕೆ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ಅಡಿಕೆಯ ವಾಸ್ತವದ ಬಗ್ಗೆ ತಿಳಿಸಲು ಕೇಂದ್ರವು ಸಂಶೋಧನೆಗೆ ₹10 ಕೋಟಿ ಹಣ ನೀಡಿದೆ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

‘ಹವ್ಯಕ ಭಾಷೆ ಅಭಿವೃದ್ಧಿಗೆ ಪ್ರತ್ಯೇಕ ಅಕಾಡೆಮಿ, ವಿಶ್ವವಿದ್ಯಾಲಯ ಹಾಗೂ ಅಧ್ಯಯನ ಕೇಂದ್ರ ಸ್ಥಾಪನೆಯಾಗಬೇಕು. ಅಂತಹ ಎಲ್ಲ ಪ್ರಯತ್ನಗಳಿಗೆ ನನ್ನ ಬೆಂಬಲ ಇದೆ’ ಎಂದು ಅವರು ಭರವಸೆ ನೀಡಿದರು.

> **ತಾಯ್ತನಕ್ಕಿಂತ ದೊಡ್ಡ ಪದವಿ ಸಮಾಜದಲ್ಲಿ ಯಾವುದೂ ಇಲ್ಲ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಪಡೆಯಿರಿ**
>
> **ರಾಘವೇಶ್ವರ ಭಾರತೀ ಸ್ವಾಮೀಜಿ**
> ರಾಮಚಂದ್ರಾಪುರ ಮಠ

ನಗರದಲ್ಲಿ ಇಂದು



ಕುವೆಂಪು ಜನ್ಮ ದಿನೋತ್ಸವ, ಕನ್ನಡ ರಾಜ್ಯೋತ್ಸವ, ಕಲಾ ಸಂಘದ 29ನೇ ವಾರ್ಷಿಕೋತ್ಸವ, ಸನ್ಮಾನ ಸಮಾರಂಭದ ಉದ್ಘಾಟನೆ: ನಂಜಾವಧೂತ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ: ಬಿ. ಕೆಂಚಪ್ಪಗೌಡ, ಧ್ವಜಾರೋಹಣ: ಡಿ. ಹನುಮಂತಯ್ಯ, ಎಲ್. ಶ್ರೀನಿವಾಸ್, ಕೆ.ವಿ. ರೇಣುಕಾ ಪ್ರಸಾದ್, ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ: ಟಿ. ಕೋನಪ್ಪರೆಡ್ಡಿ, ಆರ್. ಹನುಮಂತರಾಯಪ್ಪ, ಎನ್. ಬಾಲಕೃಷ್ಣ, ಅಶೋಕ ಎಚ್.ಎನ್., ಕುವೆಂಪು ಪ್ರತಿಮೆಗೆ ಮಾಲಾರ್ಪಣೆ: ಬಿ.ಪಿ. ಮಂಜೇಗೌಡ, ಎಲುವಳ್ಳಿ ರಮೇಶ್, ಬಿ.ವಿ. ರಾಜಶೇಖರಗೌಡ, ಸನ್ಮಾನಿತರು: ಡಾ. ನವೀನ್ ಕುಮಾರ್, ಆರ್.ಕೆ. ನಲ್ಲೂರು ಪ್ರಸಾದ್, ಬಿ.ಆರ್. ಸುರಭಿ, ಆಯೋಜನೆ: ಕುವೆಂಪು ಲಲಿತ ಕಲಾ ಸಂಘ, ಸ್ಥಳ: ಕುವೆಂಪು ಕಲಾಕ್ಷೇತ್ರ, ರಾಜ್ಯ ಒಕ್ಕಲಿಗರ ಸಂಘ, ಕೃಷ್ಣರಾಜೇಂದ್ರ ರಸ್ತೆ, ವಿಶ್ವೇಶ್ವರಪುರ, ಬೆಳಿಗ್ಗೆ 9ರಿಂದ

ಕುವೆಂಪು ಜನ್ಮದಿನದ ಅಂಗವಾಗಿ ಕವಿತೆ ವಾಚನ, ಗಾಯನ: ಉದ್ಘಾಟನೆ: ಲಿಂಗರಾಜಯ್ಯ ಬೆಳಕೆರೆ, ಅಧ್ಯಕ್ಷತೆ: ಕೆ.ಜಿ. ಕುಮಾರ್, ಉಪಸ್ಥಿತಿ: ಸೋಮಶೇಖರ್, ಪ್ರಾಸ್ತಾವಿಕ ನುಡಿ: ಗೋವಿಂದರಾಜು ಪಟೇಲ್, ಆಯೋಜನೆ: ಕನ್ನಡ ಕ್ರಿಯಾ ಸಮಿತಿ ಮತ್ತು ಸಮನ್ವಯ ಪ್ರತಿಷ್ಠಾನ, ಸ್ಥಳ: ಮೌಂಟ್ ಕಾರ್ಮೆಲ್ ಶಾಲೆ, ಲಗ್ಗೆರೆ, ಬೆಳಿಗ್ಗೆ 9.30

ಕುವೆಂಪು ಜನ್ಮದಿನದ ಅಂಗವಾಗಿ ‘ಮತ್ತೆ ಮತ್ತೆ ಕುವೆಂಪು’ ಉಪನ್ಯಾಸ: ರಹಮತ್ ತರೀಕೆರೆ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಆವರಣ, ಮಲ್ಲತ್ತಹಳ್ಳಿ, ಸಂಜೆ 5

ಅಂಚೆಚೀಟಿ ಸಂಗ್ರಹಣೆ ಮೂಲಕ ನಿಮ್ಹಾನ್ಸ್ ಪರಂಪರೆಯ ಪ್ರದರ್ಶನ: ಅತಿಥಿ: ಎಸ್. ರಾಜೇಂದ್ರ ಕುಮಾರ್, ಅಧ್ಯಕ್ಷತೆ: ಡಾ. ಪ್ರತಿಮಾ ಮೂರ್ತಿ, ಆಯೋಜನೆ: ನಿಮ್ಹಾನ್ಸ್, ಅಂಚೆ ಇಲಾಖೆ, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 11

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಬಿಹಾರ: ಪ್ರತಿಭಟನಕಾರರ ಮೇಲೆ ಲಾಠಿ

ಪಟ್ನಾ (ಪಿಟಿಐ): ಡಿಸೆಂಬರ್ 13ರಂದು ನಡೆದ ಬಿಹಾರ ಲೋಕಸೇವಾ ಆಯೋಗದ (ಬಿಪಿಎಸ್‌ಸಿ) ಪರೀಕ್ಷೆಯನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಭಾನುವಾರ ಇಲ್ಲಿ ಪ್ರತಿಭಟನೆ ನಡೆಸಿದವರನ್ನು ಪೊಲೀಸರು ಜಲಫಿರಂಗಿ ಮತ್ತು ಲಾಠಿ ಪ್ರಹಾರದ ಮೂಲಕ ಚದುರಿಸಿದರು.

‘ಜನ್ ಸುರಾಜ್ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್ ಅವರೊಂದಿಗೆ ಇಲ್ಲಿನ ಗಾಂಧಿ ಮೈದಾನದಲ್ಲಿ ಬೆಳಿಗ್ಗೆ ಸೇರಿದ ಪ್ರತಿಭಟನಕಾರರು ಸಂಜೆಯ ವೇಳೆ, ಮುಖ್ಯಮಂತ್ರಿ ಅವರ ನಿವಾಸದ ಕಡೆಗೆ ಮೆರವಣಿಗೆ ನಡೆಸಲು ಪ್ರಯತ್ನಿಸಿದರು. ಇದರಿಂದ ಅವರನ್ನು ಚದುರಿಸಲು ಪೊಲೀಸರು ಬಲ ಪ್ರಯೋಗಿಸಬೇಕಾಯಿತು’ ಎಂದು ಜಿಲ್ಲಾಧಿಕಾರಿ ಚಂದ್ರಶೇಖರ್ ಸಿಂಗ್ ತಿಳಿಸಿದರು.

ಪ್ರತಿಭಟನಕಾರರು ಗಾಂಧಿ ಮೈದಾನದಿಂದ ಮುಖ್ಯಮಂತ್ರಿ ನಿವಾಸದ ಕಡೆಗೆ ಮೆರವಣಿಗೆ ಮಾಡುವಾಗ ಬ್ಯಾರಿಕೇಡ್‌ಗಳನ್ನು ದಾಟಲು ಪ್ರಯತ್ನಿಸಿದರು ಎಂದು ಅವರು ಹೇಳಿದರು.

ಪ್ರತಿಭಟನನಿರತರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು – ಪಿಟಿಐ ಚಿತ್ರ

ಮುತ್ತತ್ತಿ: ಹೊಸ ವರ್ಷಾಚರಣೆಗೆ ನಿಷೇಧ

ಪ್ರಜಾವಾಣಿ ವಾರ್ತೆ

ಹಲಗೂರು: ಮಂಗಳವಾರ ಡಿ.31 ಮತ್ತು ಜ.1ರ ಬುಧವಾರ ಎರಡು ದಿನ ಪ್ರವಾಸಿಗರಿಗೆ ಮುತ್ತತ್ತಿಗೆ ಪ್ರವೇಶ ನಿಷೇಧಿಸಿ ಮಳವಳ್ಳಿ ತಹಶೀಲ್ದಾರ್ ಎಸ್.ವಿ.ಲೋಕೇಶ್ ನಿಷೇಧಾಜ್ಞೆ ಜಾರಿ ಮಾಡಿದ್ದಾರೆ.

ಇಲ್ಲಿನ ಮುತ್ತತ್ತಿ ಕಾವೇರಿ ನದಿ ದಂಡೆಯಲ್ಲಿ ಹೊಸ ವರ್ಷ ಆಚರಿಸುವ ಸಲುವಾಗಿ ಬೆಂಗಳೂರು, ಮೈಸೂರು, ರಾಮನಗರ, ಕನಕಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಂದ ಬರುವ ಪ್ರವಾಸಿಗರು ಮದ್ಯ ಸೇವನೆ ಮತ್ತು ಮೋಜು ಮಸ್ತಿ ಮಾಡುವ ಸಾಧ್ಯತೆ ಹೆಚ್ಚಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಸಿಆರ್‌ಪಿಸಿ ಕಲಂ 163ರ ಅನ್ವಯ ಡಿ.31ರ ಸಂಜೆ 6ರಿಂದ ಜ. 2 ಗುರುವಾರ ಬೆಳಿಗ್ಗೆ ಆರು ಗಂಟೆವರೆಗೆ ಮುತ್ತತ್ತಿ, ಭೀಮೇಶ್ವರಿ ಅರಣ್ಯ ಪ್ರದೇಶ ಪ್ರವೇಶಕ್ಕೆ ನಿಷೇಧಾಜ್ಞೆ ಹೊರಡಿಸಲಾಗಿದೆ.

ತಿಗಳರಪಾಳ್ಯಕ್ಕೆ ಮಂಜೂರಾಗಿದ್ದ ಘಟಕ; ಗ್ರಾಮಸ್ಥರ ಆಕ್ರೋಶ

ನೀರಿನ ಘಟಕ ಸ್ಥಳಾಂತರ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ತಿಗಳರಪಾಳ್ಯ ಗ್ರಾಮಕ್ಕೆ ಮಂಜೂರಾಗಿದ್ದ ಶುದ್ಧ ಕುಡಿಯುವ ನೀರಿನ ಘಟಕವನ್ನು ಕೆಲ ರಾಜಕೀಯ ವ್ಯಕ್ತಿಗಳ ಒತ್ತಡಕ್ಕೆ ಮಣಿದು ಅಧಿಕಾರಿಗಳು ಬೇರೆಡೆಗೆ ಸ್ಥಳಾಂತರ ಮಾಡಿದ್ದಾರೆ ಎಂದು ಆರೋಪಿಸಿ ಗ್ರಾಮದ ನಿವಾಸಿಗಳು ಶುದ್ಧ ಕುಡಿಯುವ ನೀರಿನ ಘಟಕದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

’ಮಹದೇವಪುರ ಕ್ಷೇತ್ರದ ಹೂಡಿ ವಾರ್ಡ್‌ನ ತಿಗಳರಪಾಳ್ಯ ಗ್ರಾಮಕ್ಕೆ ಸರ್ಕಾರ ಹಾಗೂ ಖಾಸಗಿ ಸಂಸ್ಥೆಯ ಸಹಯೋಗದಲ್ಲಿ (ಸಾಮಾಜಿಕ ಹೊಣೆಗಾರಿಕೆ ನಿಧಿ ಅಡಿ) ಶುದ್ಧ ನೀರಿನ ಘಟಕ ಮಂಜೂರಾಗಿತ್ತು. ಘಟಕದ ಅನುಷ್ಠಾನಕ್ಕಾಗಿ ಕಟ್ಟಡ ನಿರ್ಮಿಸಿ ಕೊಳವೆ ಬಾವಿಗೆ ಪೈಪ್ ಸಹ ಅಳವಡಿಸಲಾಗಿತ್ತು. ಆದರೆ ಅಧಿಕಾರಿಗಳು ಗ್ರಾಮದ ನಿವಾಸಿಗಳಿಗೆ ಮಾಹಿತಿ ನೀಡದೆ ರಾತ್ರೋರಾತ್ರಿ ಘಟಕವನ್ನು ಹೂಡಿಗೆ ಸ್ಥಳಾಂತರಿಸಿದ್ದಾರೆ. ಆ ಘಟಕಕ್ಕೆ ತಿಗಳರಪಾಳ್ಯ ಶುದ್ಧ ಕುಡಿಯುವ ನೀರಿನ ಘಟಕ ಎಂದು ಹೆಸರಿಟ್ಟಿದ್ದಾರೆ. ನಮ್ಮ ಊರಿನ ಹೆಸರಿನಲ್ಲಿಯೇ ಶುದ್ಧ ನೀರಿನ ಘಟಕವನ್ನು ಪ್ರಾರಂಭಿಸಿದ್ದಾರೆ’ ಎಂದು ಪ್ರತಿಭಟನಕಾರರು ಆರೋಪಿಸಿದರು.

ತಿಗಳರಪಾಳ್ಯ ಗ್ರಾಮದ ನಿವಾಸಿಗಳು ಶುದ್ಧ ಕುಡಿಯುವ ನೀರಿನ ಘಟಕದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು

‘ತಿಗಳರಪಾಳ್ಯ ಗ್ರಾಮದಲ್ಲಿ 800ಕ್ಕೂ ಹೆಚ್ಚು ಮನೆಗಳಿವೆ. ಇಲ್ಲಿ ಬಡ ಕೂಲಿ ಕಾರ್ಮಿಕರು ಹೆಚ್ಚಾಗಿ ನೆಲೆಸಿದ್ದಾರೆ. ಒಂದೇ ಒಂದು ಶುದ್ಧ ನೀರಿನ ಘಟಕವಿಲ್ಲ. ಕುಡಿಯುವ ನೀರಿಗಾಗಿ ಖಾಸಗಿ ಘಟಕಗಳಿಗೆ ತೆರಳಿ ದುಪ್ಪಟ್ಟು ಹಣ ನೀಡಿ ನೀರು ತರುವ ಪರಿಸ್ಥಿತಿ ಇದೆ. ಅಧಿಕಾರಿಗಳು ಇಲ್ಲಿನ ಪರಿಸ್ಥಿತಿ ಅರಿಯದೆ ಸ್ಥಳೀಯ ರಾಜಕೀಯ ವ್ಯಕ್ತಿಗಳ ಕೈಗೊಂಬೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ’ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ರಾಜಕೀಯ ನಾಯಕರ ಅಣತಿಯಂತೆ ಅಧಿಕಾರಿಗಳು ನಮ್ಮ ಗ್ರಾಮಕ್ಕೆ ಮಂಜೂರಾದ ಘಟಕವನ್ನು ಹೂಡಿಗೆ ಸ್ಥಳಾಂತರಿಸಿದ್ದಾರೆ. ಶುದ್ಧ ಕುಡಿಯುವ ನೀರಿನ ಘಟಕಕ್ಕಾಗಿ ಅಳವಡಿಸಿದ್ದ ಪೈಪ್ ಹಾಗೂ ಶುದ್ಧೀಕರಣ ಮಾಡುವ ಯಂತ್ರಗಳನ್ನು ರಾತ್ರೋರಾತ್ರಿ ಹೊತ್ತೊಯ್ದಿದ್ದಾರೆ. ಈ ರೀತಿ ತಾರತಮ್ಯ ಮುಂದುವರಿಸಿದರೆ ಗ್ರಾಮಸ್ಥರ ಸಮ್ಮುಖದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಗಳರಪಾಳ್ಯ ನಿವಾಸಿ ಹಾಗೂ ಭಾರತಿಯ ಸೇವಾ ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ರಾಮಚಂದ್ರ ಎಚ್ಚರಿಸಿದರು.

ಪ್ರಜಾವಾಣಿ

2024ರ ಜ್ಞಾಪಕ ಚಿತ್ರಶಾಲೆ

ಈ ವರ್ಷದ ಕೊನೆಯ ದಿನ, ಡಿಸೆಂಬರ್ 31ರಂದು ‘ಪ್ರಜಾವಾಣಿ’ಯು **‘2024: ಮೈಲಿಗಲ್ಲುಗಳು ಮತ್ತು ನೆನಪುಗಳ ಬುತ್ತಿ’**ಯನ್ನು ಓದುಗರ ಮುಂದೆ ತೆರೆದಿಡಲಿದೆ. ಜಗತ್ತು, ದೇಶ ಮತ್ತು ನಮ್ಮ ಸಮುದಾಯವನ್ನು ಪ್ರಭಾವಿಸಿದ ಅತ್ಯಂತ ಮಹತ್ವದ ಘಟನೆಗಳು, ಅಸಾಧಾರಣ ಸಾಧನೆಗಳು ಮತ್ತು ಪ್ರಮುಖ ಮೈಲಿಗಲ್ಲುಗಳನ್ನು ಈ ಬರಹದ ಬುತ್ತಿ ಹೊತ್ತು ತರಲಿದೆ.

ಮಿಸ್ ಮಾಡಿಕೊಳ್ಳಬೇಡಿ:

1. ಜಗತ್ತಿಗೆ ಹೊಸ ರೂಪನೀಡಿದ ಪ್ರಮುಖ ಜಾಗತಿಕ ಬೆಳವಣಿಗೆಗಳು
2. ಭಾರತದ ಪ್ರಮುಖ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಮೈಲಿಗಲ್ಲುಗಳು
3. ಸಾಧನೆ, ಯಶಸ್ಸು ಮತ್ತು ಆವಿಷ್ಕಾರಗಳಿಗೆ ಸಂಬಂಧಿಸಿದ ಸ್ಥಳೀಯ ವಿದ್ಯಮಾನಗಳು
4. ಸಿನಿಮಾ, ಕಲೆ, ಸಂಸ್ಕೃತಿ ಮತ್ತು ಕ್ರೀಡಾ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳು

‘ಪ್ರಜಾವಾಣಿ’ಯ ನಾಳೆಯ ಸಂಚಿಕೆ ತಪ್ಪದೇ ನೋಡಿರಿ.

2024 ಮೈಲಿಗಲ್ಲುಗಳು ಮತ್ತು ನೆನಪುಗಳು

Follow us on:

ಚಿನ್ನದ ಅಂಗಡಿ ಮಾಲಕಿಯಿಂದ ಚಿನ್ನಾಭರಣ ಪಡೆದು ವಂಚಿಸಿದ್ದ ಪ್ರಕರಣ

ಬಂಧನ ಭೀತಿ: ಧರ್ಮೇಂದ್ರ ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನದ ಅಂಗಡಿ ಮಾಲಕಿಯಿಂದ ಚಿನ್ನಾಭರಣ ಪಡೆದು ವಂಚಿಸಿದ್ದ ಪ್ರಕರಣದ ಮತ್ತೊಬ್ಬ ಆರೋಪಿ ಕನ್ನಡದ ನಟ ಧರ್ಮೇಂದ್ರ ಬಂಧನ ಭೀತಿಯಿಂದ ತಲೆಮರೆಸಿಕೊಂಡಿದ್ದಾರೆ.

ಮೊದಲ ಆರೋಪಿ ಐಶ್ವರ್ಯಾ ಗೌಡ ಮತ್ತು ಆಕೆಯ ಪತಿ ಹರೀಶ್ ಅವರನ್ನು ಶನಿವಾರ ಚಂದ್ರಾಲೇಔಟ್ ಪೊಲೀಸರು ಬಂಧಿಸಿದರು. ಇದರ ಬೆನ್ನಲ್ಲೇ ಧರ್ಮೇಂದ್ರ ಅವರು ತಮ್ಮ ಮೊಬೈಲ್ ಫೋನ್ ಸ್ವಿಚ್‌ಆಫ್ ಮಾಡಿಕೊಂಡಿದ್ದಾರೆ.

ಪೊಲೀಸರು ಆರೋಪಿಗೆ ನೋಟಿಸ್ ನೀಡಲು ಮನೆಗೆ ಹೋದಾಗ ಅಲ್ಲಿರಲಿಲ್ಲ. ಹಾಗಾಗಿ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಅನ್ನು ಅವರ ಮನೆ ಗೋಡೆಗೆ ಅಂಟಿಸಿದ್ದರು. ಆದರೆ ಅವರು ವಿಚಾರಣೆಗೆ ಗೈರು ಹಾಜರಾಗಿದ್ದು, ಪೊಲೀಸರು ಅವರ ಪತ್ತೆ ಕಾರ್ಯ ಮುಂದುವರಿಸಿದ್ದಾರೆ.

ವಂಚನೆ: ಶ್ವೇತಾ ಗೌಡ ವಿರುದ್ಧ ಮತ್ತೊಂದು ಎಫ್‌ಐಆರ್

ಬೆಂಗಳೂರು: ಮಾಜಿ ಸಚಿವ ವರ್ತೂರು ಪ್ರಕಾಶ್ ಅವರ ಆಪ್ತೆ ಎಂದು ಪರಿಚಯಿಸಿಕೊಂಡು ಆಭರಣ ಅಂಗಡಿ ಮಾಲೀಕನಿಗೆ ವಂಚಿಸಿದ ಆರೋಪದಡಿ ಬಂಧಿತರಾಗಿರುವ ಶ್ವೇತಾ ಗೌಡ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿದೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಸುಭಾಶ್ ನಗರದ ಪ್ರಗತಿ ಜ್ಯುವೆಲರಿ ಶಾಪ್ ಮಾಲೀಕ ಬಾಲರಾಜ್ ಸೇಟ್ ಅವರ ದೂರಿನ ಮೇರೆಗೆ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೆಂಗಳೂರಿನ ಜ್ಯುವೆಲರಿ ಶಾಪ್ ಮಾಲೀಕ ಸಂಜಯ್ ಬಾಫ್ನಾ ಮೂಲಕ ಆರು ತಿಂಗಳ ಹಿಂದೆ ಶ್ವೇತಾ ಗೌಡ ಪರಿಚಯವಾಗಿದ್ದರು. ತಾನು ಸಂಜಯ್ ಬಳಿ ಕೋಟಿಗಟ್ಟಲೆ ವ್ಯವಹಾರ ಹೊಂದಿದ್ದೇನೆ. ಹಳೆಯ ಆ್ಯಂಟಿಕ್ ಜ್ಯುವೆಲರಿ ಹಾಗೂ ವಜ್ರದ ಆಭರಣಗಳನ್ನು ಖರೀದಿ ಮಾಡುತ್ತೇನೆ. 250 ಗ್ರಾಂ ತೂಕದ ಆ್ಯಂಟಿಕ್ ಆಭರಣಗಳನ್ನು ತಯಾರು ಮಾಡಿಕೊಡುವಂತೆ ಅವರು ಕೇಳಿದ್ದರು' ಎಂದು ಬಾಲರಾಜ್ ದೂರಿನಲ್ಲಿ ತಿಳಿಸಿದ್ದಾರೆ.

'ಡಿ. 11ರಂದು 285 ಗ್ರಾಂ ತೂಕದ ಹಳೆಯ ಆಭರಣಗಳ ವ್ಯಾಪಾರಕ್ಕಾಗಿ ನನ್ನ ಸಹೋದರ ನಾಗರಾಜ್ ಅವರನ್ನು ಬೆಂಗಳೂರಿಗೆ ಕಳಿಸಿದ್ದೆ. ವ್ಯಾಪಾರಿ ಸಿಗದ ಕಾರಣ ಮಾರಾಟಕ್ಕೆಂದು ಕಳುಹಿಸಿದ್ದ ಆಭರಣಗಳ ಫೋಟೊಗಳನ್ನು ಶ್ವೇತಾ ಅವರಿಗೆ ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸಲಾಗಿತ್ತು. ಆಭರಣಗಳನ್ನು ನಾನೇ ಖರೀದಿಸುತ್ತೇನೆ ಎಂದು ಶ್ವೇತಾ ಗೌಡ ಹೇಳಿದ್ದರು. ಅದರಂತೆ ನನ್ನ ಸಹೋದರ, ಶ್ವೇತಾ ಅವರನ್ನು ಯು.ಬಿ ಸಿಟಿ ಸಮೀಪದ ಕಾಫಿ ಡೇನಲ್ಲಿ ಭೇಟಿ ಆಗಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಆಭರಣಗಳನ್ನು ಪಡೆದಿದ್ದ ಶ್ವೇತಾ, ₹5 ಲಕ್ಷದ 2 ಚೆಕ್, ₹ 6 ಲಕ್ಷದ 1 ಚೆಕ್ ನೀಡಿ, ಬಾಕಿ ₹4.75 ಲಕ್ಷವನ್ನು ಆರ್‌ಟಿಜಿಎಸ್ ಮಾಡುವುದಾಗಿ ಹೇಳಿದ್ದರು. ಆದರೆ ಡಿ. 13ರಂದು ಬ್ಯಾಂಕ್‌ನಲ್ಲಿ ಚೆಕ್ ಹಾಜರುಪಡಿಸಿದಾಗ ಅವು ಅಮಾನ್ಯವೆಂದು ತಿಳಿದು ಬಂದಿದೆ. ಬಾಕಿ ಹಣವನ್ನು ಆರ್‌ಟಿಜಿಎಸ್ ಮಾಡದ ಶ್ವೇತಾ ಗೌಡಗೆ ಕರೆ ಮಾಡಿ ವಿಚಾರಿಸಿದಾಗ, ಬ್ಯಾಂಕ್‌ನಲ್ಲಿ ಸಮಸ್ಯೆಯಾಗಿದೆ ಎಂದು ಹೇಳಿದ್ದರು. ನಂತರ ಅವರ ಫೋನ್ ಸ್ವಿಚ್ ಆಫ್ ಆಗಿದ್ದರಿಂದ ಅನುಮಾನ ಬಂತು. ಸಂಜಯ್ ಬಾಫ್ನಾಗೆ ಕರೆ ಮಾಡಿದಾಗ, ವಂಚನೆ ಪ್ರಕರಣದಲ್ಲಿ ಬಂಧನವಾಗಿರುವುದು ಗೊತ್ತಾಯಿತು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ವಂಚನೆ ಆರೋಪ: ವಂಚನೆ ಪ್ರಕರಣದಲ್ಲಿ ಜೈಲು ಸೇರಿರುವ ಐಶ್ವರ್ಯಾ ಗೌಡ ಮತ್ತು ಅವರ ಪತಿ ಹರೀಶ್ ವಿರುದ್ಧ ಮತ್ತೊಂದು ವಂಚನೆ ಆರೋಪ ಕೇಳಿ ಬಂದಿದೆ. ನಿವೇಶನಗಳನ್ನು ಮಾರಾಟ

ಅಪರಾಧ ಸುದ್ದಿ

ಮಾಡಿಸುವುದಾಗಿ ಹೇಳಿ ₹5 ಕೋಟಿ ವಂಚನೆ ಮಾಡಿದ್ದಾರೆ ಎಂದು ಚಿನ್ನದ ವ್ಯಾಪಾರಿ ಸೋನು ಲಮಾಣಿ ಅವರು ಐಶ್ವರ್ಯಾ ಗೌಡ ದಂಪತಿ ವಿರುದ್ಧ ಆರೋಪಿಸಿದ್ದು, ಈ ಸಂಬಂಧ ದಾಖಲೆಗಳ ಸಮೇತ ಜೆ.ಪಿ. ನಗರ ಪೊಲೀಸ್ ಠಾಣೆಗೆ ದೂರು ನೀಡುವುದಾಗಿ ವಿಡಿಯೊದಲ್ಲಿ ಹೇಳಿಕೆ ನೀಡಿದ್ದಾರೆ.

ಈ ನಡುವೆ ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ಧ್ವನಿಯಲ್ಲಿ ಆರ್. ಆರ್. ನಗರದ ರಾಜಕಾರಣಿಯೊಬ್ಬರ ಪುತ್ರ ಶ್ರೇಯಸ್ ಅವರೊಂದಿಗೆ ನಟ ಧರ್ಮೇಂದ್ರ ಅವರು ರಸ್ತೆ ಕಾಮಗಾರಿಯ ಗುತ್ತಿಗೆ ನೀಡಲು ಹಣಕ್ಕೆ ಬೇಡಿಕೆ ಇರಿಸಿರುವ ಕುರಿತು ನಡೆಸಿರುವ ಸಂಭಾಷಣೆ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸ್ನೇಹಿತನ ಕೊಲೆ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಫೋನ್ ನೋಡುವ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಸ್ನೇಹಿತನನ್ನು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಚೆನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಿ.ನರಸೀಪುರದ ನಾಗರಾಜ್ (36) ಬಂಧಿತ ಆರೋಪಿ. ತನ್ನ ಜತೆಗೆ ವಾಸವಾಗಿದ್ದ ಶ್ರೀನಿವಾಸ್‌ಗೆ ಡಿಸೆಂಬರ್ 26ರಂದು ವಾಟರ್ ಹೀಟರ್ ಕಾಯಿಲ್‌ನಿಂದ ಹೊಡೆದು ಕೊಲೆ ಮಾಡಿ ಪರಾರಿಯಾಗಿದ್ದ.

ತಿ.ನರಸೀಪುರದ ಇಬ್ಬರೂ ನಗರದಲ್ಲಿ ಗಾರೆ ಕೆಲಸ ಮಾಡಿಕೊಂಡಿದ್ದರು. ಶ್ರೀನಿವಾಸ ನಗರದಲ್ಲಿ ರೂಮ್ ಬಾಡಿಗೆಗೆ ಪಡೆದು ವಾಸವಿದ್ದರು. ಮೃತ ಶ್ರೀನಿವಾಸ್ ಪತ್ನಿಯನ್ನು ತೊರೆದಿದ್ದ. ಈತ ಯಾವಾಗಲೂ ನಾಗರಾಜ್‌ನ ಮೊಬೈಲ್ ಫೋನ್ ತೆಗೆದುಕೊಂಡು ನೋಡುತ್ತಿದ್ದ ಹಾಗೂ ರೂಮ್‌ನ ಕೀಯನ್ನು ನಾಗರಾಜ್‌ಗೆ ನೀಡುತ್ತಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಇದೇ ವಿಚಾರಕ್ಕೆ ಡಿ.26ರಂದು ಇಬ್ಬರ ನಡುವೆ ಗಲಾಟೆಯಾಗಿದೆ. ಕೋಪದಲ್ಲಿ ನಾಗರಾಜ್ ವಾಟರ್ ಹೀಟರ್ ಕಾಯಿಲ್‌ನಿಂದ ಶ್ರೀನಿವಾಸ್‌ಗೆ ಹೊಡೆದಿದ್ದ. ಆತ ಮೃತಪಟ್ಟಿದ್ದು ಗೊತ್ತಾಗುತ್ತಿದ್ದಂತೆ ನಾಗರಾಜ್ ಮನೆ ಬಿಟ್ಟು ತೆರಳಿದ್ದ. ಇಬ್ಬರೂ ಕೆಲಸಕ್ಕೆ ಬರದಿದ್ದಾಗ ರೂಮ್ ಬಳಿ ಮೇಸ್ತ್ರಿ ಬಂದು ನೋಡಿದಾಗ ಕೊಲೆಯಾಗಿರುವ ವಿಚಾರ ಗೊತ್ತಾಗಿದೆ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

'ದುರ್ವರ್ತನೆ ತೋರಿದರೆ ಕ್ರಮ'

ಬೆಂಗಳೂರು: ಹೊಸ ವರ್ಷಾಚರಣೆ ವೇಳೆ ದುರ್ವರ್ತನೆ ತೋರುವಂತಿಲ್ಲ. ಕಾನೂನು ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ.

ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇದನ್ನು ಮನವಿಯಾಗಿಯಾದರೂ ಪರಿಗಣಿಸಿ, ಇಲ್ಲವೇ ಎಚ್ಚರಿಕೆ ಎಂದಾದರೂ ಪರಿಗಣಿಸಿ' ಎಂದಿದ್ದಾರೆ.

ನಗರಾದ್ಯಂತ 10 ಸಾವಿರಕ್ಕೂ ಹೆಚ್ಚು ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಲಾಗಿದ್ದು, ಎಲ್ಲರ ಚಲನವಲನಗಳ ಮೇಲೆ ಕಣ್ಣಿಡಲಾಗುವುದು. ಹೊಸ ವರ್ಷಾಚರಣೆ ವೇಳೆ ರಾಜ್ಯದ ಗೌರವ, ಗಾಂಭೀರ್ಯ ಕಾಪಾಡಬೇಕು ಎಂದು ತಿಳಿಸಿದರು.

ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ನಿಧನದ ಕಾರಣ ರಾಜ್ಯ ಸರ್ಕಾರ ಏಳು ದಿನ ಶೋಕಾಚರಣೆ ಘೋಷಣೆ ಮಾಡಿದ್ದು, ಕೇವಲ ಸರ್ಕಾರಿ ಕಾರ್ಯಕ್ರಮಗಳನ್ನು ಮಾತ್ರ ತಡೆ ಹಿಡಿಯಲಾಗಿದೆ. ಅದರ ಹೊರತಾಗಿ ಖಾಸಗಿ ಕಾರ್ಯಕ್ರಮಗಳಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಖಾಸಗಿಯಾಗಿ ಹೊಸ ವರ್ಷಾಚರಣೆ ಮಾಡುವವರು ಮಾಡಿಕೊಳ್ಳಬಹುದು ಎಂದರು.

ರಾಜ್ಯದಲ್ಲಿ ಕಾನೂನು, ಸುವ್ಯವಸ್ಥೆಗೆ ಧಕ್ಕೆಯಾಗಬಾರದು. ಬಿಬಿಎಂಪಿ ಹಾಗೂ ಪೊಲೀಸರು ವ್ಯಾಪಾರಸ್ಥರಿಗೆ ಮಾರ್ಗಸೂಚಿ ನೀಡಲಿದ್ದಾರೆ. ಕಾಲಾವಕಾಶ ವಿಸ್ತರಣೆ ಮಾಡಿದ್ದರೂ ಯಾರೊಬ್ಬರೂ ಕಾನೂನು ಉಲ್ಲಂಘನೆ ಮಾಡುವಂತಿಲ್ಲ ಎಂದು ತಿಳಿಸಿದರು.

ಸುತ್ತಿಗೆಯಿಂದ ಹೊಡೆದು ಕೊಲೆ

ಬೆಂಗಳೂರು: ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತ್ನಿಯ ತಲೆಗೆ ಸುತ್ತಿಗೆಯಿಂದ ಹೊಡೆದು ಕೊಲೆ ಮಾಡಿರುವ ಘಟನೆ ಅತ್ತಿಬೆಲೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಅತ್ತಿಬೆಲೆ ಸಮೀಪದ ಮೇದಹಳ್ಳಿ ನಿವಾಸಿ ಬಿಹಾರದ ಮಲ್ಲಿಕಾ ಖಾತೂನ್ (35) ಕೊಲೆಯಾದ ಮಹಿಳೆ. ಪತಿ ಮಹಮ್ಮದ್ ಸೈಯ್ಯದ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ನಗರದಲ್ಲಿ 15 ವರ್ಷಗಳಿಂದ ವಾಸವಿರುವ ದಂಪತಿಗೆ, ಮೂವರು ಮಕ್ಕಳಿದ್ದಾರೆ. ಹಣಕಾಸು ಹಾಗೂ ಮಕ್ಕಳ ಶಿಕ್ಷಣ ವಿಚಾರಕ್ಕೆ ದಂಪತಿ ನಡುವೆ ಆಗಾಗ್ಗೆ ಜಗಳ ನಡೆಯುತ್ತಿತ್ತು. ಪತ್ನಿಯ ಶೀಲದ ಬಗ್ಗೆಯೂ ಶಂಕೆ ವ್ಯಕ್ತಪಡಿಸಿ ಜಗಳವಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಶನಿವಾರ ಬೆಳಿಗ್ಗೆಯೂ ಇಬ್ಬರ ನಡುವೆ ಜಗಳ ನಡೆದಿತ್ತು. ಮಲ್ಲಿಕಾ ಪ್ರಾರ್ಥನೆ ಸಲ್ಲಿಸುವ ವೇಳೆ ಪತಿ ಸುತ್ತಿಗೆಯಿಂದ ಆಕೆಯ ತಲೆಗೆ ಹೊಡೆದಿದ್ದಾನೆ. ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲಿಯೇ ಮೃತಪಟ್ಟರು ಎಂದು ಹೇಳಿದ್ದಾರೆ.

ಚಿನ್ನ ಕದ್ದು ಸಿಕ್ಕಿಬಿದ್ದ ರೂಮ್‌ಬಾಯ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಸಾರ್ಟ್‌ನಲ್ಲಿ ಮಹಿಳೆಯ ಚಿನ್ನಾಭರಣ ಕಳವು ಮಾಡಿದ್ದ, ರೂಮ್‌ಬಾಯ್‌ನನ್ನು ಚಿಕ್ಕಜಾಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತರಹುಣಸೆ ನಿವಾಸಿ ವೆಂಕಟೇಶ್ (28) ಅವರನ್ನು ಬಂಧಿಸಿ, ₹3.10 ಲಕ್ಷ ಮೌಲ್ಯದ 53 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ.

ಖಾಸಗಿ ವಿಮಾ ಕಂಪನಿಯ ಉದ್ಯೋಗಿ ಆಗಿರುವ ಮಹಿಳೆ ಮೀಟಿಂಗ್ ಸಂಬಂಧ ಡಿ.12ರಂದು ಸಾದಹಳ್ಳಿ ಗೇಟ್ ಸಮೀಪದ ರೆಸಾರ್ಟ್‌ವೊಂದರಲ್ಲಿ ತಂಗಿದ್ದರು. ರಾತ್ರಿ ಮಲಗುವಾಗ ಮಾಂಗಲ್ಯ ಸರ, 2 ಉಂಗುರ, ವಾಚ್ ತೆಗೆದು ತಲೆದಿಂಬಿನ ಕೆಳಗೆ ಇರಿಸಿದ್ದರು. ಬೆಳಿಗ್ಗೆ ರೂಮ್ ಖಾಲಿ ಮಾಡಿದ್ದರು.

ಮೀಟಿಂಗ್ ವೇಳೆ ಚಿನ್ನಾಭರಣ ನೆನಪಾಗಿ ರೆಸಾರ್ಟ್ ರೂಮ್‌ಗೆ ಬಂದು ನೋಡಿದಾಗ ಅವುಗಳು ಇರಲಿಲ್ಲ. ರೂಮ್‌ಬಾಯ್ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಾನೇ ಕಳವು ಮಾಡಿದ್ದಾಗಿ ಒಪ್ಪಿಕೊಂಡಿದ್ದು, ಆರೋಪಿಯಿಂದ ಚಿನ್ನಾಭರಣ, ವಾಚ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾಂಗಲ್ಯ ಸರ ಅಪಹರಿಸಿ ಸಿಕ್ಕಿಬಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಗೆ ಚಾಕುವಿನಿಂದ ಬೆದರಿಸಿ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದ ಕಾನೂನು ಸಂಘರ್ಷಕ್ಕೆ ಒಳಗಾದ ಇಬ್ಬರು ಬಾಲಕರು ಸೇರಿದಂತೆ ಮೂವರನ್ನು ಚಿಕ್ಕಜಾಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ನಾರಾಯಣ ಹಳ್ಳಿಯ ಬಾಲಾಜಿ ಬಂಧಿತ ಆರೋಪಿ. ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕರನ್ನು ಸರ್ಕಾರಿ ಬಾಲಮಂದಿರಕ್ಕೆ ಬಿಡಲಾಗಿದೆ. ಬಂಧಿತರಿಂದ ₹9.50 ಲಕ್ಷ ಮೌಲ್ಯದ 120 ಗ್ರಾಂ ತೂಕದ ಮಾಂಗಲ್ಯ ಸರ ಮತ್ತು ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೂರದಾರ ಮಹಿಳೆಯು ತರಬನಹಳ್ಳಿಯ ತನ್ನ ಮನೆಯ ಕಾಂಪೌಂಡ್‌ನಲ್ಲಿ ಡಿ.15ರಂದು ಚೀಲಕ್ಕೆ ರಾಗಿ ತುಂಬುತ್ತಿದ್ದರು. ಆಗ ಆರೋಪಿಗಳು ಅವರನ್ನು ಬಲವಂತವಾಗಿ ಮನೆಯೊಳಗೆ ಎಳೆದೊಯ್ದು ಬೆದರಿಸಿ, ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಅಪರಾಧ ಹಿನ್ನೆಲೆಯುಳ್ಳ ಬಾಲಾಜಿ ತನ್ನ ಸಂಬಂಧಿಕರಾದ ಕಾನೂನು ಸಂಘರ್ಷಕ್ಕೆ ಒಳಗಾದ ಇಬ್ಬರು ಬಾಲಕರನ್ನು ಜತೆಯಲ್ಲಿ ಸೇರಿಸಿಕೊಂಡು ಅಪರಾಧ ಕೃತ್ಯಗಳನ್ನು ಎಸಗುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಸರಗಳ್ಳರ ಬಂಧನ: ಒಂಟಿ ಮಹಿಳೆಯರನ್ನು ಗುರಿಯಾಗಿಸಿಕೊಂಡು ಚಿನ್ನದ ಸರ ದೋಚುತ್ತಿದ್ದ ಆರೋಪಿಗಳನ್ನು ಬಂಧಿಸಿರುವ ಸಂಪಿಗೆಹಳ್ಳಿ ಠಾಣೆ ಪೊಲೀಸರು, ₹3 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

ಡಿ.ಜೆ.ಹಳ್ಳಿ ಬಳಿಯ ಮದೀನಾ ಪಾಳ್ಯದ ಆರೀಫ್ ಖಾನ್ ಮತ್ತು ಮುಷ್ತಾಕೀಬ್ ಪಾಷಾ ಬಂಧಿತರು. ಆರೋಪಿಗಳಿಂದ 47 ಗ್ರಾಂ ತೂಕದ ಚಿನ್ನದ ಸರ, ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ.

ನ.22ರಂದು ಅಗ್ರಹಾರ ಬಡಾವಣೆ ಮುಖ್ಯರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಯನ್ನು ಆರೋಪಿಗಳು ಹಿಂಬಾಲಿಸಿ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಪ್ರಕರಣದ ತನಿಖೆ ವೇಳೆ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಸಾರಾಯಿಪಾಳ್ಯದಲ್ಲಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಸರ ಕಿತ್ತುಕೊಂಡು ಪರಾರಿಯಾಗಿದ್ದು ತಾವೇ ಎಂದು ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳು ದುಶ್ಚಟಗಳ ದಾಸರಾಗಿದ್ದು, ಸುಲಭವಾಗಿ ಹಣ ಗಳಿಸುವ ಉದ್ದೇಶಕ್ಕೆ ಸರಗಳ್ಳತನಕ್ಕೆ ಇಳಿದಿದ್ದರು. ಆರೋಪಿಗಳ ಬಂಧನದಿಂದ ಸಂಪಿಗೆಹಳ್ಳಿ ಮತ್ತು ಸಂಜಯ ನಗರ ಠಾಣೆ ವ್ಯಾಪ್ತಿಯಲ್ಲಿ ತಲಾ ಒಂದೊಂದು ಸರಗಳವು ಪ್ರಕರಣ ಪತ್ತೆಯಾಗಿದೆ. ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಟೆಕಿ ಮೇಲೆ ಹಲ್ಲೆ: ಮೊಬೈಲ್ ಫೋನ್, ಹಣ ಸುಲಿಗೆ

ಬೆಂಗಳೂರು: ವಾಯು ವಿಹಾರ ಮಾಡುತ್ತಿದ್ದ ಟೆಕಿ ಮೇಲೆ ಹಲ್ಲೆ ನಡೆಸಿ ಹಣ ಹಾಗೂ ಮೊಬೈಲ್ ಫೋನ್ ಕಿತ್ತುಕೊಂಡು ಪರಾರಿಯಾಗಿದ್ದ ಆರೋಪಿಗಳನ್ನು ಸಂಪಿಗೆಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಸಾರಾಯಿ ಪಾಳ್ಯ ಸಾದಿಕ್ ಲೇಔಟ್ ನಿವಾಸಿಗಳಾದ ಮೊಹಮದ್ ಯಾಸರ್, ಸೈಯದ್ ಅಯಾನ್, ಅಬ್ಬಾಸ್ ಮತೀನ್ ಅಲಿಯಾಸ್ ಮೇಜರ್, ಕೆ.ಜಿ.ಹಳ್ಳಿ ಲಿಡ್ಕರ್ ಕಾಲೊನಿ ನಿವಾಸಿ ಮವೀನ್ ಕ್ರಿಸ್ಟೋಫರ್ ಅಲಿಯಾಸ್ ಸಿಬ್ಬಿ ಮತ್ತು ಡಿ.ಜಿ.ಹಳ್ಳಿ ನಿವಾಸಿ ಸಿದ್ದಿಕ್ ಖಾನ್ ಅವರನ್ನು ಬಂಧಿಸಿ ₹ 2 ಸಾವಿರ ನಗದು, ಕಾರು, ಚಾಕು ಜಪ್ತಿ ಮಾಡಲಾಗಿದೆ.

ಸಂಪಿಗೆಹಳ್ಳಿ ಬಳಿಯ ಎಂಸಿಇಸಿಎಚ್‌ಎಸ್ ಲೇಔಟ್ ನಿವಾಸಿ ಅಭಿಷೇಕ್ ಅವರು ನವೆಂಬರ್ 22ರಂದು ಮನೆಯ ಮುಂಭಾಗದ ರಸ್ತೆಯಲ್ಲಿ ಮೊಬೈಲ್ ಫೋನ್‌ನಲ್ಲಿ ಮಾತನಾಡುತ್ತಾ ವಾಯುವಿಹಾರ ಮಾಡುತ್ತಿದ್ದರು. ಆಗ ಆರೋಪಿಗಳು ಕಾರಿನಲ್ಲಿ ಬಂದು ಅಭಿಷೇಕ್ ಅವರನ್ನು ಅಡ್ಡಗಟ್ಟಿ ಹಲ್ಲೆ ನಡೆಸಿ, ಮೊಬೈಲ್, ₹5 ಸಾವಿರ ದೋಚಿ ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ಅಬ್ಬಾಸ್ ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಯಾಗಿದ್ದು, ಆತನ ವಿರುದ್ಧ ಗೋವಿಂದಪುರ ಠಾಣೆಯಲ್ಲಿ ಸುಲಿಗೆ ಪ್ರಕರಣ ದಾಖಲಾಗಿತ್ತು. ಆರೋಪಿಗಳು ಮೋಜು– ಮಸ್ತಿಗಾಗಿ ಹಣ ಸುಲಿಗೆ ಮಾಡಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಅಪಘಾತ: ನಿವೃತ್ತ ಪೊಲೀಸ್ ಸಾವು

ರಾಮನಗರ: ತಾಲ್ಲೂಕಿನ ಸುಗ್ಗನಹಳ್ಳಿ ಬಳಿಯ ಬೆಜ್ಜರಹಳ್ಳಿ ಕಟ್ಟೆ ಬಳಿ ಭಾನುವಾರ ಬೈಕ್‌ಗೆ ಡೀಸೆಲ್ ಟ್ಯಾಂಕರ್ ಡಿಕ್ಕಿ ಹೊಡೆದಿದ್ದರಿಂದ ನಿವೃತ್ತ ಪೊಲೀಸ್ ಬಸವಲಿಂಗ ಶಾಸ್ತ್ರಿ (65) ಅವರು ಮೃತಪಟ್ಟಿದ್ದಾರೆ. ಘಟನೆಯಲ್ಲಿ ಮಹದೇವಸ್ವಾಮಿ ಎಂಬುವರಿಗೆ ಗಾಯವಾಗಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೂನಮುದ್ದನಹಳ್ಳಿಯ ನಿವಾಸಿ ಆದ ಶಾಸ್ತ್ರಿ ಅವರು ಮಧ್ಯಾಹ್ನ 12.45ರ ಸುಮಾರಿಗೆ ಬೈಕ್‌ನಲ್ಲಿ ಮಹದೇವಸ್ವಾಮಿ ಅವರೊಂದಿಗೆ ಹೋಗುತ್ತಿದ್ದರು. ಈ ವೇಳೆ ಸುಗ್ಗನಹಳ್ಳಿಯಿಂದ ಮಾಗಡಿ ಕಡೆಗೆ ಹೊರಟಿದ್ದ ಟ್ಯಾಂಕರ್ ವೇಗವಾಗಿ ಬಂದು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಶಾಸ್ತ್ರಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ರಾಮನಗರ ಗ್ರಾಮಾಂತರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಅಗ್ನಿಶಾಮಕ ಠಾಣೆಗೆ ನುಗ್ಗಿದ ಕರಡಿ

ಪ್ರಜಾವಾಣಿ ವಾರ್ತೆ

ಪಾವಗಡ: ಪಟ್ಟಣದ ಅಗ್ನಿಶಾಮಕ ಠಾಣೆ ಒಳಗೆ ಶನಿವಾರ ರಾತ್ರಿ ಕರಡಿ ನುಗ್ಗಿ ಕೆಲಕಾಲ ಠಾಣೆಯೊಳಗೆ ಓಡಾಡಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣಕ್ಕೆ ಹೊಂದಿಕೊಂಡಿರುವ ಠಾಣೆ ಒಳಗೆ ಕರಡಿಯೊಂದು ನುಗ್ಗಿ ಆಹಾರಕ್ಕಾಗಿ ಹುಡುಕಾಡಿದೆ. ಸಿಬ್ಬಂದಿಯ ವಸತಿ ನಿಲಯವೂ ಇದೇ ಸ್ಥಳದಲ್ಲಿ ಇರುವುದರಿಂದ ಮಹಿಳೆಯರು, ಮಕ್ಕಳು ಆತಂಕದಲ್ಲಿಯೇ ದಿನ ದೂಡುತ್ತಿದ್ದಾರೆ.

ಅಗ್ನಿಶಾಮಕ ಠಾಣೆಗೆ ಸಮರ್ಪಕ ಆವರಣ ಗೋಡೆ ಇಲ್ಲದಿರುವುದರಿಂದ ಕರಡಿಗಳು ಬರುತ್ತಿರುತ್ತವೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಸಿಬ್ಬಂದಿ ಕರಡಿ ನುಗ್ಗಿರುವ ಬಗ್ಗೆ ಮಹಿಳೆಯರು, ಮಕ್ಕಳಿಗೆ ಮಾಹಿತಿ ನೀಡಿ ಯಾರೂ ಹೊರಬಾರದಂತೆ ಸೂಚಿಸಿದ್ದಾರೆ.

ಬ್ಯಾಡರಹಳ್ಳಿ ಪಿಎಸ್‌ಐ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನ್ಮ ದಿನಾಂಕ ಸಂಬಂಧ ನಕಲಿ ದಾಖಲೆ ನೀಡಿ ಹುದ್ದೆ ಗಿಟ್ಟಿಸಿಕೊಂಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಬ್ಯಾಡರಹಳ್ಳಿ ಪೊಲೀಸ್ ಠಾಣೆ ಪಿಎಸ್‌ಐ ಕಾಶಿಲಿಂಗೇಗೌಡ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಸ್.ಟಿ.ಚಂದ್ರಶೇಖರ್ ದೂರಿನ ಮೇರೆಗೆ ಕಾಶಿಲಿಂಗೇಗೌಡ ವಿರುದ್ಧ ಪ್ರಕರಣ ದಾಖಲಾಗಿದೆ.

'ಗೃಹ ಇಲಾಖೆಯಿಂದ 2017-18ರಲ್ಲಿ ಪಿಎಸ್‌ಐ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿತ್ತು. ಗರಿಷ್ಠ ವಯೋಮಿತಿಯು 2018ರ ಮಾರ್ಚ್ 12ಕ್ಕೆ 30 ವರ್ಷ ಮೀರಿರಬಾರದು ಎಂಬುದಾಗಿ ಅಧಿಸೂಚನೆಯಲ್ಲಿ ತಿಳಿಸಲಾಗಿತ್ತು. ಕಾಶಿಲಿಂಗೇಗೌಡ ಅವರ ಜನ್ಮ ದಿನಾಂಕ 1987ರ ಏಪ್ರಿಲ್ 15 ಆಗಿತ್ತು. ವಯೋಮಿತಿಯ ಅನ್ವಯ ಪಿಎಸ್‌ಐ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರಲ್ಲದಿದ್ದರೂ ಸಣಬ ಗ್ರಾಮದ ಅಂಗನವಾಡಿ ಕೇಂದ್ರದ 1987-88 ಮತ್ತು 1988-89ನೇ ಸಾಲಿನ ಚುಚ್ಚುಮದ್ದಿನ ರಿಜಿಸ್ಟರ್‌ನಲ್ಲಿನ ಕೆಲ ಮಾಹಿತಿಯನ್ನು ಅದಲು ಬದಲು ಮಾಡಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಬಳಿಕ ಕುಣಿಗಲ್ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ತನ್ನ ಜನ್ಮದಿನಾಂಕ 1988ರ ಏಪ್ರಿಲ್ 15 ಎಂಬುದಾಗಿ ಖಾಸಗಿ ದಾವೆ ಹೂಡಿದ್ದರು. ತನ್ನ ವಯೋಮಿತಿಗೆ ಸಂಬಂಧಿಸಿದಂತೆ ನಕಲಿ ದಾಖಲಾತಿಗಳನ್ನು ಕೋರ್ಟ್‌ಗೆ ಸಲ್ಲಿಸಿದ್ದರು. ಈ ಮೂಲಕ 1988ರ ಏಪ್ರಿಲ್‌15 ಎಂದು ತಿದ್ದುಪಡಿ ಮಾಡುವಂತೆ ಡಿಕ್ರಿ ಆದೇಶವನ್ನು ಪಡೆದುಕೊಂಡು, ಜನ್ಮ ದಿನಾಂಕದ ನಕಲಿ ದಾಖಲೆಗಳ ಮೂಲಕ ಪಿಎಸ್‌ಐ ಹುದ್ದೆಗೆ ನೇಮಕವಾಗಿದ್ದಾರೆ' ಎಂದು ದೂರಿನಲ್ಲಿ ವಿವರಿಸಲಾಗಿದೆ.

ಪ್ರಕರಣ ಬಯಲಿಗೆ ಬಂದಿದ್ದು: 'ಕಾಶಿಲಿಂಗೇಗೌಡ 2013ರಿಂದ 2018ರವರೆಗೆ ಪಿಎಸ್‌ಐ ಹುದ್ದೆಗೆ ಅರ್ಜಿ ಹಾಕಿದ್ದು, 2013ರಿಂದ 2017ರವರೆಗೆ ನೀಡಿರುವ ಜನ್ಮ ದಿನಾಂಕ ಮತ್ತು 2018ರಲ್ಲಿ ನೀಡಿದ ಜನ್ಮ ದಿನಾಂಕ ವ್ಯತ್ಯಾಸವಿದೆ ಎಂದು ಆರೋಪಿಸಲಾಗಿತ್ತು. ಅಮೃತೂರು ಹೋಬಳಿಯ ಸಣಬ ಗ್ರಾಮದ ಚುಚ್ಚುಮದ್ದು ಕಾರ್ಯಕ್ರಮದ ರಿಜಿಸ್ಟರ್‌ನಲ್ಲಿನ ಮಾಹಿತಿಯನ್ನು ಪರಿಶೀಲಿಸಿದ್ದ ವೇಳೆ ಅವರ ಜನ್ಮ ದಿನಾಂಕ 1987ರ ಏಪ್ರಿಲ್ 15 ಎಂಬುದು ದೃಢಪಟ್ಟಿತ್ತು. ಹೀಗಾಗಿ ಕಾಶಿಲಿಂಗೇಗೌಡ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ' ದೂರುದಾರರು ಕೋರಿದ್ದಾರೆ.

ಕಾರ್ಯಕ್ರಮದಲ್ಲಿ ಕನ್ನಡ ಜನಶಕ್ತಿ ಕೇಂದ್ರದ ಪ್ರಧಾನ ಸಂಚಾಲಕರಾದ ದಯಾನಂದ ಕಟ್ಟೆ, ಉಪಾಧ್ಯಕ್ಷರಾದ ಶಂಕರ ಹೂಗಾರ, ಸಿ.ಕೆ. ರಾಮೇಗೌಡ, ಪಿ.ಮಲ್ಲಿಕಾರ್ಜುನಪ್ಪ, ಎಸ್‌ ಮಹದೇವಯ್ಯ ಉಪಸ್ಥಿತರಿದ್ದರು

'ಸಾಹಿತ್ಯದ ಮೂಲಕ ಸಾಮಾಜಿಕ ಸಾಂಸ್ಕೃತಿಕ, ಬೌದ್ಧಿಕ ಕ್ರಾಂತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಮಾನವ ಕುವೆಂಪು ಅವರು 20ನೇ ಶತಮಾನದಲ್ಲಿ ಸಾಹಿತ್ಯದ ಮೂಲಕ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಬೌದ್ಧಿಕ ಕ್ರಾಂತಿಯನ್ನು ಮಾಡಿದ್ದಾರೆ ಎಂದು ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ಹೇಳಿದರು.

ಕನ್ನಡ ಜನಶಕ್ತಿ ಕೇಂದ್ರ ಹಾಗೂ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ಸಹಯೋಗದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಕುವೆಂಪು ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕುವೆಂಪು ಅವರು ಕನ್ನಡ ಭಾಷಾ ಪರಂಪರೆಯಲ್ಲಿ ಸಂಸ್ಕೃತ, ಹಳಗನ್ನಡ, ನಡುಗನ್ನಡ ಜನಪದರ ಆಡುನುಡಿಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದರು. ಜನರಿಂದ ದೂರವಾಗಿ ನಶಿಸಿ ಹೋಗಬಹುದಾದ ಕನ್ನಡ ಭಾಷಾ ಸಂಸ್ಕೃತಿಯನ್ನು ಅವರ ಸಾಹಿತ್ಯದಲ್ಲಿ ಜೀವಂತವಾಗಿರಿಸಿ ಉಸಿರಾಡುವಂತೆ ಮಾಡಿದ್ದಾರೆ. ನೂರಾರು ಹೊಸ ಕನ್ನಡ ಪದಗಳನ್ನು ಸೃಷ್ಟಿಸಿದ್ದಾರೆ. ಕುವೆಂಪು ಅವರು ನುಡಿದಂತೆ ಬರೆದವರು, ಬರೆದಂತೆ ಬದುಕಿದರು. ರಾಜ್ಯದಲ್ಲಿ ದ್ವಿಭಾಷಾ ನೀತಿಯನ್ನು ಜಾರಿಗೊಳಿಸುವಂತೆ ಸರ್ಕಾರಕ್ಕೆ ಒತ್ತಾಯಿಸುತ್ತಿದ್ದರು ಎಂದು ನೆನಪಿಸಿಕೊಂಡರು.

ಇದೇ ಸಂದರ್ಭದಲ್ಲಿ ಕುವೆಂಪು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ ಕುವೆಂಪು ಕುರಿತ ಕವನಗಳನ್ನು ವಾಚಿಸಿದರು. ಶಂಕರ ಹೂಗಾರ ಅವರು ಕುವೆಂಪು ರಚಿಸಿದ ಕವಿತೆಗಳನ್ನು ಹಾಡಿದರು. ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ಎಸ್. ಮಹದೇವಯ್ಯ, ಕನ್ನಡ ಪರ ಹೋರಾಟಗಾರರಾದ ದಯಾನಂದ ಕಟ್ಟೆ, ಸು. ಜಗದೀಶ್ ಮತ್ತು ಎಂ.ಬಿ. ವಿಜಯಲಕ್ಷ್ಮಿ, ಕಲಾವಿದ ಸಿ.ವಿ. ಶ್ರೀನಿವಾಸ, ಸಿ. ಪುಟ್ಟರಾಜು, ಕೆ. ರಾಮು, ರಾಮಕೃಷ್ಣ, ಕೋದಂಡರಾಮು ಭಾಗವಹಿಸಿದ್ದರು.

ಕಾಡಾನೆ ಹಿಂಡಿನ ದಾಳಿ: ಸೌತೆಕಾಯಿ ಬೆಳೆ ಧ್ವಂಸ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಚಿಕ್ಕವಿಠಲೇನಹಳ್ಳಿಯಲ್ಲಿ ಶನಿವಾರ ರಾತ್ರಿ ತೋಟಕ್ಕೆ ನುಗ್ಗಿದ ಐದು ಕಾಡಾನೆಗಳ ಗುಂಪೊಂದು ಕಟಾವಿಗೆ ಬಂದಿದ್ದ ಸೌತೆಕಾಯಿ ಬೆಳೆಯನ್ನು ತಿಂದು, ತುಳಿದು ಧ್ವಂಸ ಮಾಡಿವೆ.

ಗ್ರಾಮದ ರೈತ ದೇವರಾಜು ಮೂರೂವರೆ ಎಕರೆ ಜಮೀನಿನಲ್ಲಿ ಬೆಳೆದಿದ್ದ ಸೌತೆ, ಕಾಡಾನೆಗಳ ದಾಳಿಯಲ್ಲಿ ನಾಶವಾಗಿದೆ. ರೈತ ಬೆಳೆ ಬೆಳೆಯಲು ₹4 ಲಕ್ಷ ಖರ್ಚು ಮಾಡಿದ್ದ.

ಕಾಡಾನೆ ಹಿಂಡಿನ ದಾಳಿಯಿಂದ ನಾಶವಾದ ಸೌತೆ ಬೆಳೆ

ಚಿಕ್ಕಮಣ್ಣುಗುಡ್ಡೆ ಪ್ರದೇಶದಲ್ಲಿ ಶನಿವಾರ ಕಾಡಾನೆಯೊಂದನ್ನು ಸೆರೆ ಹಿಡಿಯಲಾಗಿತ್ತು. ಅದೇ ದಿನ ರಾತ್ರಿಯೇ ಈ ಘಟನೆ ನಡೆದಿದೆ. ಈಗಾಗಲೇ ತಾಲ್ಲೂಕಿನಲ್ಲಿ ಈ ವರ್ಷ ಎರಡು ಕಾಡಾನೆಗಳನ್ನು ಸೆರೆ ಹಿಡಿಯಲಾಗಿದೆ.

ಕಾಡಾನೆ ದಾಳಿ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿತ್ತು. ಸಿಬ್ಬಂದಿಯನ್ನು ಕಳಿಸುವುದಾಗಿ ತಿಳಿಸಿದ್ದರು. ಯಾರೂ ಸ್ಥಳಕ್ಕೆ ಬಂದಿಲ್ಲ ಎಂದು ರೈತ ದೇವರಾಜು ಹರಿಹಾಯ್ದರು.

ಶಾಸಕ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಅಭಿಮತ

'ಕುವೆಂಪು ವೈಜ್ಞಾನಿಕ ಚಿಂತನೆ ಪಸರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರಕವಿ ಕುವೆಂಪು ಅವರ ವೈಜ್ಞಾನಿಕ ಚಿಂತನೆಗಳು ನಮ್ಮ ಶಿಕ್ಷಣದಲ್ಲಿ ಪಠ್ಯವಾಗಬೇಕು ಮತ್ತು ಅವುಗಳನ್ನು ಹೆಚ್ಚು ಪ್ರಚಾರ ಮಾಡಬೇಕು' ಎಂದು ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಅಭಿಪ್ರಾಯಪಟ್ಟರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಭಾನುವಾರ ಮಲ್ಲೇಶ್ವರದಲ್ಲಿ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಅವರ 120ನೇ ಜನ್ಮ ದಿನಾಚರಣೆಯಲ್ಲಿ ಭಾಗವಹಿಸಿ, ಮಲ್ಲೇಶ್ವರ ವೃತ್ತದಲ್ಲಿರುವ ಕುವೆಂಪು ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಕನ್ನಡದ ಅಂಕಿಗಳು ಮತ್ತು ಕನ್ನಡದ ಮಹತ್ವದ ವಿಷಯಗಳಿರುವ ಕನ್ನಡದ ದಿನದರ್ಶಿಕೆಯನ್ನು ಅವರು ಬಿಡುಗಡೆ ಮಾಡಿದರು.

'ಕುವೆಂಪು ಅವರ ವೈಚಾರಿಕ ಸಂದೇಶಗಳನ್ನು ಪಸರಿಸಲು ಸಂಘ ಸಂಸ್ಥೆಗಳು ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಬೇಕು' ಎಂದು ಸಲಹೆ ನೀಡಿದರು.

ರಾಷ್ಟ್ರಕವಿ ಕುವೆಂಪು ಅವರ 120ನೇ ಜನ್ಮ ದಿನದ ಅಂಗವಾಗಿ ನಗರದ ಮಲ್ಲೇಶ್ವರ ವೃತ್ತದಲ್ಲಿರುವ ರಾಷ್ಟ್ರಕವಿ ಕುವೆಂಪು ಪ್ರತಿಮೆಗೆ ಶಾಸಕ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಮಾಲಾರ್ಪಣೆ ಮಾಡಿ, ಕನ್ನಡ ಅಂಕೆಗಳು ಮತ್ತು ಕನ್ನಡದ ಮಾಹಿತಿಯಿರುವ ಕನ್ನಡ ದಿನದರ್ಶಿಕೆಯನ್ನು ಬಿಡುಗಡೆ ಮಾಡಿದರು

ನಗರ ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪ್ರಕಾಶ ಮೂರ್ತಿ ಮಾತನಾಡಿ, 'ಮನುಜಮತ ವಿಶ್ವಪಥ ಎಂಬ ವಿಶ್ವ ಮಾನವ ಸಂದೇಶವನ್ನು ಜಗತ್ತಿಗೆ ಸಾರಿದ ಕುವೆಂಪು ಅವರು, ತಮ್ಮ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳನ್ನು ಮತ್ತು ವೈಚಾರಿಕ ಚಿಂತನೆಗಳನ್ನು ಬಿತ್ತುವ ಮೂಲಕ ವಿಶ್ವಮಾನ್ಯ ಸಾಹಿತಿ ಆಗಿದ್ದಾರೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಎಚ್. ಶಿವರಾಮೇಗೌಡ, ಬೆಂಗಳೂರು ನಗರ ಜಿಲ್ಲಾ ಕಸಾಪದ ಮಾಜಿ ಅಧ್ಯಕ್ಷ ಶ್ರ.ದೇ.ಪಾರ್ಶ್ವನಾಥ, ಹಾಲಿ ಕಾರ್ಯಕಾರಿ ಸಮಿತಿ ಸದಸ್ಯರಾದ ಗೌಡಗೆರೆ ಮಾಯಶ್ರೀ, ವರ್ಧಮಾನ ಕಳಸೂರು, ಎಂ.ನಾಗೇಶ್, ಮಾಗಡಿ ಗಿರೀಶ್, ಅರವಿಂದ್, ಶಿವಕುಮಾರ್, ವೇಣುಗೋಪಾಲ್ ಹಾಜರಿದ್ದರು.

ಚಿತ್ರಾವಳಿ

ಆರ್‌ಟಿ.ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದಿಂದ ಭಾನುವಾರ ಏರ್ಪಡಿಸಿದ್ದ ಕುವೆಂಪು ಜನ್ಮ ದಿನಾಚರಣೆಯಲ್ಲಿ ಹಿರಿಯ ಕವಿ ಸುಬ್ಬು ಹೊಲೆಯಾರ್ ಅವರು ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಸಂಘದ ಅಧ್ಯಕ್ಷ ಎಂ.ಸಿ.ಮರಿಯಪ್ಪ, ಕಾರ್ಯದರ್ಶಿ ಎಚ್‌.ಎನ್‌.ರಾಜು ಮತ್ತಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು

ರಾಷ್ಟ್ರಕವಿ ಕುವೆಂಪು ಅವರ 120ನೇ ಜನ್ಮದಿನದ ಪ್ರಯುಕ್ತ ಕನ್ನಡ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಲಾಲ್‌ಬಾಗ್ ಪಶ್ಚಿಮ ದ್ವಾರದಲ್ಲಿರುವ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಸಮಿತಿಯ ಅಧ್ಯಕ್ಷ ಎ.ಎಸ್‌.ನಾಗರಾಜಸ್ವಾಮಿ, ಕಾರ್ಯಾಧ್ಯಕ್ಷ ಎಂ. ಪ್ರಕಾಶಮೂರ್ತಿ, ನಲ್ಲೂರ್ ಪ್ರಸಾದ್, ರಾಮಣ್ಣ ಎಚ್‌. ಕೋಡಿಹೊಸಹಳ್ಳಿ, ಸಮಿತಿಯ ಪ್ರಧಾನ ಕಾರ್ಯದರ್ಶಿ ತಾ.ಸಿ.ತಿಮ್ಮಯ್ಯ, ಉಪಾಧ್ಯಕ್ಷ ಬಿ.ಸಿ. ರಾಜಕುಮಾರ್ ಮತ್ತಿತರರು ಉಪಸ್ಥಿತರಿದ್ದರು

ಅಮೆರಿಕದ ಸಂಸ್ಕೃತಿ ಪ್ರತಿಷ್ಠಾನ ಹಾಗೂ ಆದರ್ಶ ಸುಗಮಸಂಗೀತ ಅಕಾಡೆಮಿ ಸಹಯೋಗದಲ್ಲಿ ಆಯೋಜಿಸಿದ್ದ ಗಾಯಕ ದಿವಂಗತ ಸಿ.ಅಶ್ವಥ್ ಅವರ ನೆನಪಿನ ಕಾರ್ಯಕ್ರಮದಲ್ಲಿ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ, ನಿರ್ದೇಶಕ ಟಿ.ಎನ್‌.ಸೀತಾರಾಮ್, ರಂಗಕರ್ಮಿ ಶ್ರೀನಿವಾಸಪ್ರಭು, ಕವಿ ಬಿ.ಆರ್‌.ಲಕ್ಷ್ಮಣರಾವ್, ಸಂಸ್ಕೃತಿ ಫೌಂಡೇಷನ್ ಸಂಸ್ಥಾಪಕಿ ಅನಸೂಯ ಗುರುಪ್ರಸಾದ್, ಗಾಯಕ ವೈ.ಕೆ.ಮುದ್ದುಕೃಷ್ಣ, ನಿವೃತ್ತ ಐಎಎಸ್ ಅಧಿಕಾರಿ ಸಿ.ಸೋಮಶೇಖರ್, ಸಂಗೀತ ಸಂಯೋಜಕ ವಿ.ಮನೋಹರ್ ಪಾಲ್ಗೊಂಡಿದ್ದರು. ಇತ್ತೀಚೆಗೆ ನಿಧನರಾದ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರಿಗೆ ಕಾರ್ಯಕ್ರಮದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು

ಕೊಡುತ್ತಲೇ ಇರುವಂತಹ ಉಡುಗೊರೆ.
Prestige
NEW YEAR BO-NAN-ZA
ಹೊಸ ವರ್ಷದ ಬೊನಾಂಜಾ
21 ಡಿಸೆಂಬರ್ 2024 ರಿಂದ 26 ಜನವರಿ 2025 ರವರೆಗೆ
75 Years of Prestige
ಚಿಮಣಿ ಖರೀದಿಸಿ
ಕನಿಷ್ಠ 45% ರಿಯಾಯಿತಿಯಲ್ಲಿ
ಪಡೆಯಿರಿ₹17 495.00 ಮೌಲ್ಯದ
ಸ್ವಚ್ಛ್ ಎಫಿಷಿಯಾ ಕನ್ವರ್ಟಿಬಲ್ ಹಾಬ್
3 ಬರ್ನರ್ ₹10 995.00ಕ್ಕೆ 1 ಯೂನಿಟ್
ಖರೀದಿಸಿ ಯಾವುದೇ ಒಟಿಜಿ
30% ರಿಯಾಯಿತಿಯಲ್ಲಿ
ಪಡೆಯಿರಿ₹2 395.00 ಮೌಲ್ಯದ
PHM 2.0 ಹ್ಯಾಂಡ್ ಮಿಕ್ಸರ್ ₹1 495.00ಕ್ಕೆ 1 ಯೂನಿಟ್
ಖರೀದಿಸಿ ಯಾವುದೇ ಏರ್ ಫ್ರೈಯರ್
30% ರಿಯಾಯಿತಿಯಲ್ಲಿ
ಪಡೆಯಿರಿ₹1 295.00 ಮೌಲ್ಯದ
ಎಸ್ ಹ್ಯಾಂಡ್ ಬ್ಲೆಂಡರ್
₹695.00ಕ್ಕೆ 1 ಯೂನಿಟ್
ಯಾವುದೇ ಇಂಡಕ್ಷನ್ ಕುಕ್‌ಟಾಪ್ ಖರೀದಿಸಿ
30% ರಿಯಾಯಿತಿಯಲ್ಲಿ
ಪಡೆಯಿರಿ₹2 540.00 ಮೌಲ್ಯದ ಸ್ವಚ್ಛ್ SS ಪಾಪ್ಯುಲರ್
ಪ್ರೆಶರ್ ಕುಕ್ಕರ್ (3 ಲೀ), ₹1 995.00ಕ್ಕೆ 1 ಯೂನಿಟ್
ಖರೀದಿಸಿ ಮಿಕ್ಸರ್ ಗ್ರೈಂಡರ್
ಕನಿಷ್ಠ 30% ರಿಯಾಯಿತಿಯಲ್ಲಿ
750W ಅಥವಾ 1000W ಮತ್ತು
ಪಡೆಯಿರಿ ₹1 795.00 ಮೌಲ್ಯದ PGMFB
ಸ್ಯಾಂಡ್‌ವಿಚ್ ಮೇಕರ್ ₹1 095.00ಕ್ಕೆ 1 ಯೂನಿಟ್
ಗ್ಯಾಸ್ ಸ್ಟವ್ ಖರೀದಿಸಿ
25% ರಿಯಾಯಿತಿಯಲ್ಲಿ
ಪಡೆಯಿರಿ₹390.00 ಮೌಲ್ಯದ
ಹೋಸ್ ಪೈಪ್, ಚೂರಿ ಮತ್ತು ಲೈಟರ್
₹95.00ಕ್ಕೆ 1 ಯೂನಿಟ್
ಇತರ ಕೆಟಗರಿಗಳಲ್ಲಿನ ಇನ್ನೂ ಹೆಚ್ಚಿನ ಡೀಲ್‌ಗಳನ್ನು
ಮಿಸ್ ಮಾಡಿಕೊಳ್ಳಬೇಡಿ.
*ಷರತ್ತುಗಳು ಅನ್ವಯಿಸುತ್ತವೆ. ಮೇಲೆ ಸೂಚಿಸಿದ ಬೆಲೆಗಳು ಉತ್ಪನ್ನದ ಎಂ ಆರ್ ಪಿ (ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ). ಎಂ ಆರ್ ಪಿ ಮೇಲೆ ಮಾತ್ರ ರಿಯಾಯಿತಿಗಳನ್ನು ನೀಡಲಾಗುತ್ತದೆ. ಯಾವುದೇ ಎರಡು ಕೊಡುಗೆಗಳನ್ನು ಸೇರಿಸಲಾಗದು. ಚಿಮಣಿ ಮತ್ತು ಗ್ಯಾಸ್ ಸ್ಟವ್ ಮೇಲಿನ ಆಫರ್‌ಗಳು ಆಯ್ದ ಮಾಡೆಲ್‌ಗಳ ಮೇಲೆ ಮಾತ್ರ ಅನ್ವಯವಾಗುತ್ತವೆ. ಎಂ ಆರ್ ಪಿ ಮತ್ತು ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಹತ್ತಿರದ ನಿಮ್ಮ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್/ಡೀಲರ್ ಔಟ್‌ಲೆಟ್‌ಗೆ ಭೇಟಿ ನೀಡಿ.
MADE WITH PRIDE IN INDIA
CUSTOMER CARE NO 080-6000 4411
Store Locator
Scan to Connect
Shop Online on shop.ttkprestige.com
ttk
Prestige Xclusive
ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್ ಮತ್ತು ಪ್ರಮುಖ ಡೀಲರ್ ಮಳಿಗೆಗಳಲ್ಲಿ ಲಭ್ಯ.
Prestige
ತಮ್ಮವರನ್ನು ಪ್ರೀತಿಸುವವರು
ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?

ಶಿಕ್ಷಣ

ಬೇಡಿಕೆಯಲ್ಲಿರುವ ಇನ್‌ಸ್ಟ್ರಕ್ಷನಲ್ ಡಿಸೈನ್ ಕೋರ್ಸ್

ರವಿಚಂದ್ರ ಎಂ.

ವೈದ್ಯರು ಮತ್ತು ನರ್ಸ್ ಹೇಗೆ ಆಸ್ಪತ್ರೆ ನಿರ್ವಹಣೆಗೆ ಆಧಾರವೋ, ಅದೇ ರೀತಿ, ಇ-ಲರ್ನಿಂಗ್ ಅಥವಾ ಆನ್‌ಲೈನ್ ಕಲಿಕೆಗೆ ಇನ್‌ಸ್ಟ್ರಕ್ಷನಲ್ ಡಿಸೈನ್ (ID) ಮತ್ತು ಲರ್ನಿಂಗ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (LMS) ಪರಿಣತರ ಅಗತ್ಯ ಸಾಕಷ್ಟಿದೆ.

ರಾಡಿಕ್ಸ್ ಎಂಬ ಸಾಫ್ಟ್‌ವೇರ್ ಸಂಸ್ಥೆ ನೀಡಿರುವ ಅಂಕಿ ಅಂಶದ ಪ್ರಕಾರ 2000ದಿಂದ ಈಚೆಗೆ ಇ-ಲರ್ನಿಂಗ್ ಕ್ಷೇತ್ರ ಶೇ 90ರಷ್ಟು ಬೆಳವಣಿಗೆ ಸಾಧಿಸಿದೆ. 2024ರಲ್ಲಿ ಇನ್ನಷ್ಟು ಬೆಳವಣಿಗೆ ಕಾಣಲಿದೆ. ಶೇ 90ರಷ್ಟು ಸಂಸ್ಥೆಗಳು ತಮ್ಮ ಉದ್ಯೋಗಿಗಳಿಗೂ ಆನ್‌ಲೈನ್ ತರಬೇತಿ ನೀಡಲು ಉತ್ತೇಜನ ನೀಡುತ್ತಿವೆ. ಆನ್‌ಲೈನ್ ಕಲಿಕೆ ಪೂರೈಸುವ ಎಲ್‌ಎಂಎಸ್ ತಂತ್ರಾಂಶದ ಮಾರುಕಟ್ಟೆಯು ಅಂದಾಜು 30 ಬಿಲಿಯನ್ ಅಮೆರಿಕನ್ ಡಾಲರ್‌ನಷ್ಟು ವಿಸ್ತಾರಗೊಳ್ಳುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ. ಹಾಗಾಗಿ ಇನ್‌ಸ್ಟ್ರಕ್ಷನಲ್ ಡಿಸೈನ್ ಮತ್ತು ಲರ್ನಿಂಗ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಪರಿಣತರ ಬೇಡಿಕೆ ಸಹಜವಾಗಿಯೇ ವೃದ್ಧಿಸಿದೆ.

ಏನಿದು ಇನ್‌ಸ್ಟ್ರಕ್ಷನಲ್ ಡಿಸೈನ್?

ಶಿಕ್ಷಾರ್ಥಿಗಳ ಅಗತ್ಯವನ್ನು ಮನಗಂಡು, ಕಲಿಕೆಯಲ್ಲಿ ಪರಿಣಾಮಕಾರಿಯಾಗಿ ತೊಡಗಿಕೊಳ್ಳುವಂತೆ ಪಠ್ಯವನ್ನು ರೂಪಿಸುವ ಗುರುತರ ಜವಾಬ್ದಾರಿಗೆ ಇನ್‌ಸ್ಟ್ರಕ್ಷನಲ್ ಡಿಸೈನ್ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಇನ್‌ಸ್ಟ್ರಕ್ಷನಲ್ ಡಿಸೈನ್ ಹುದ್ದೆಯಲ್ಲಿ ಇರುವವರು, ಶೈಕ್ಷಣಿಕ ಸಲಕರಣೆಗಳಾದ ಕಲಿಕಾ ಸಾಮಗ್ರಿ, ವರ್ಕ್-ಶಾಪ್, ಕಲಿಕಾ ಮಾದರಿ, ಸಿಮ್ಯುಲೇಷನ್ಸ್‌ಗಳನ್ನು, ಕಲಿಕೆ ವಿಡಿಯೊ-ಆಡಿಯೊಗಳಿಗೆ ಬೇಕಾದ ಪೂರ್ವಸಿದ್ಧತೆ ನಡೆಸುತ್ತಾರೆ. ಈ ಕ್ಷೇತ್ರ ಆಯ್ಕೆ ಮಾಡಿಕೊಂಡರೆ ಇನ್‌ಸ್ಟ್ರಕ್ಷನಲ್ ಡಿಸೈನರ್ ಅಸಿಸ್ಟೆಂಟ್ ಹುದ್ದೆಯಿಂದ ಇನ್‌ಸ್ಟ್ರಕ್ಷನ್ ಡಿಸೈನರ್, ಕರಿಕ್ಯುಲಂ ಡೆವೆಲಪರ್ (ಪಠ್ಯ ವಿನ್ಯಾಸಕರು), ಲರ್ನಿಂಗ್ ಎಕ್ಸ್‌ಪೀರಿಯೆನ್ಸ್ ಡಿಸೈನರ್ (LXD), ಮ್ಯಾನೇಜರ್ ಒಫ್ ಲರ್ನಿಂಗ್ ಆ್ಯಂಡ್ ಡೆವಲಪ್‌ಮೆಂಟ್, ಚೀಫ್ ಲರ್ನಿಂಗ್ ಆಫೀಸರ್‌ವರೆಗೂ ಬೆಳೆಯಬಹುದು.

ವಿದ್ಯಾರ್ಹತೆ: ಬ್ಯಾಚುಲರ್ ಆಫ್ ಎಜುಕೇಷನ್, ಬ್ಯಾಚುಲರ್ ಆಫ್ ಇನ್‌ಸ್ಟ್ರಕ್ಷನ್ ಡಿಸೈನ್. ಅಥವಾ ಯಾವುದೇ ಪದವೀಧರರಾದರೂ ಸರಿ, ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ಅನುಭವ ಇರಬೇಕು.

ಸರ್ಟಿಫಿಕೇಷನ್‌ಗಳು: ಉಡೆಮಿ (Udemy), ಕೋರ್ಸೆರಾ (Coursera) ಸೇರಿ ಆನ್‌ಲೈನ್ ಪ್ಲಾಟ್‌ಫಾರಂಗಳು ಇನ್‌ಸ್ಟ್ರಕ್ಷನ್ ಡಿಸೈನ್ ಡಿಪ್ಲೊಮಾ ಕೋರ್ಸ್‌ಗಳನ್ನು ನೀಡುತ್ತವೆ. ಎಟಿಡಿ ಮತ್ತು ಐಎಸ್‌ಡಿ ಇನ್‌ಸ್ಟಿಟ್ಯೂಟ್‌ಗಳಿಂದ ಸರ್ಟಿಫೈಡ್ ಪ್ರೊಫೆಷನಲ್ ಇನ್ ಲರ್ನಿಂಗ್ ಆ್ಯಂಡ್ ಪರ್ಫಾರ್ಮೆನ್ಸ್ (CPLP)ಕೋರ್ಸ್ ಮಾಡಬಹುದು.

ನಿಮ್ಮ ಸಂಸ್ಥೆ ಅಥವಾ ಶಾಲೆಯ ಗ್ರಂಥಾಲಯ ನಿರ್ವಹಣೆಗೆ ಗ್ರಂಥಪಾಲಕರು ಇದ್ದಂತೆ ಮತ್ತು ಪುಸ್ತಕಗಳನ್ನು ಬರೆಯಲು ಶಿಕ್ಷಕರು/ಲೇಖಕರು ಇದ್ದಂತೆ, ಆಧುನಿಕ ಇ -ಲರ್ನಿಂಗ್ ವ್ಯವಸ್ಥೆಯಲ್ಲಿ ಎಲ್‌ಎಂಎಸ್ ಅಡ್ಮಿನಿಸ್ಟ್ರೇಟರ್ ಮತ್ತು ಇನ್‌ಸ್ಟ್ರಕ್ಷನಲ್ ಡಿಸೈನರ್‌ಗಳ ಅಗತ್ಯ ವ್ಯಾಪಕವಾಗಿದೆ. ❖

ಎಲ್‌ಎಂಎಸ್ ಮ್ಯಾನೇಜ್‌ಮೆಂಟ್ ಎಂದರೆ ಏನು?

ಕಲಿಕಾ-ವೇದಿಕೆ (ಲರ್ನಿಂಗ್ ಪ್ಲಾಟ್‌ಫಾರ್ಮ್) ನಿರ್ವಹಣೆ ಮತ್ತು ಉಸ್ತುವಾರಿ ನೋಡಿಕೊಳ್ಳುವವರನ್ನು ಎಲ್.ಎಂ.ಎಸ್ ಅಡ್ಮಿನಿಸ್ಟ್ರೇಟರ್ ಎಂದು ಕರೆಯಲಾಗುತ್ತದೆ. ಇವರು ಶಿಕ್ಷಕರು ಮತ್ತು ಶಿಕ್ಷಾರ್ಥಿಗಳ ಕುರಿತ ದತ್ತಾಂಶ ನಿರ್ವಹಣೆ ಮಾಡುತ್ತಾರೆ. ಜತೆಗೆ ಆನ್‌ಲೈನ್ ವೇದಿಕೆಯನ್ನು ಸಮರ್ಪಕವಾಗಿ ಬಳಸಲು ಅನುವು ಮಾಡಿಕೊಡುತ್ತಾರೆ.

ಕಲಿಕಾ ಸಾಮಗ್ರಿಗಳಾದ ನೋಟ್ಸ್, ವಿಡಿಯೊ, ಕ್ವಿಜ್, ಫಲಿತಾಂಶ, ಸರ್ಟಿಫಿಕೆಟ್ಸ್ ಒದಗಿಸುತ್ತಾರೆ.

ಈ ಕ್ಷೇತ್ರ ಆಯ್ಕೆ ಮಾಡಿಕೊಂಡರೆ, ಅಡ್ಮಿನಿಸ್ಟ್ರೇಟರ್ ಅಸಿಸ್ಟೆಂಟ್ ಆಗಿ ಕಾರ್ಯ ಪ್ರಾರಂಭಿಸಿ, ಮುಂದೆ ಇ-ಲರ್ನಿಂಗ್ ಸಪೋರ್ಟ್ ಸ್ಪೆಷಲಿಸ್ಟ್, ಎಲ್‌ಎಂಎಸ್ ಅಡ್ಮಿನಿಸ್ಟ್ರೇಟರ್, ಲರ್ನಿಂಗ್ ಟೆಕ್ನಾಲಜಿ ಸ್ಪೆಷಲಿಸ್ಟ್, ಡೈರೆಕ್ಟರ್ ಆಫ್ ಲರ್ನಿಂಗ್ ಟೆಕ್ನಾಲಜಿಯವರೆಗೂ ಬೆಳೆಯಬಹುದು.

ವಿದ್ಯಾರ್ಹತೆ: ಬ್ಯಾಚುಲರ್ ಆಫ್ ಎಜುಕೇಷನ್, ಬ್ಯಾಚುಲರ್ ಆಫ್ ಇನ್‌ಸ್ಟ್ರಕ್ಷನ್ ಡಿಸೈನ್, ಕಂಪ್ಯೂಟರ್ ಸೈನ್ಸ್ ಅಥವಾ ಇನ್ನಿತರೆ ತಾಂತ್ರಿಕ ಪದವಿ ಪಡೆದವರು.

ಸರ್ಟಿಫಿಕೇಷನ್‌ಗಳು

Cornerstone Learning Certification:
Cornerstone OnDemand LMS
Litmus Training Operations Certification
Moodle Certified Professional
(ಈ ಸರ್ಟಿಫಿಕೇಷನ್ ಕೋರ್ಸ್‌ಗಳು ಉಚಿತವಾಗಿ ಲಭ್ಯ)
Canvas Certified Associate
(ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಈ ಎಲ್‌ಎಂ.ಎಸ್ ಹೆಚ್ಚಾಗಿ ಬಳಕೆಯಲ್ಲಿದೆ)
Docebo LMS Administrator Certification

ಇಂಡಸ್ಟ್ರಿಯಲ್ ಎಂಜಿನಿಯರಿಂಗ್‌ಗೆ ಅವಕಾಶಗಳೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

- **ನನ್ನ ಮಗ ಬಿ.ಟೆಕ್ (ಇಂಡಸ್ಟ್ರಿಯಲ್ ಎಂಜಿನಿಯರಿಂಗ್) ಮಾಡಿದ್ದು, ಸರ್ಕಾರಿ ಕ್ಷೇತ್ರದಲ್ಲಿ ವೃತ್ತಿಯ ಅವಕಾಶಗಳೇನು?**
ಗೌಡ, ಬೆಂಗಳೂರು.

ಬಿ.ಟೆಕ್ (ಇಂಡಸ್ಟ್ರಿಯಲ್ ಎಂಜಿನಿಯರಿಂಗ್) ನಂತರ ಸರ್ಕಾರಿ ವಲಯದ ಉತ್ಪಾದನೆ, ರಿಫೈನರಿ, ಆಟೋಮೇಷನ್, ಜವಳಿ ಉದ್ಯಮ, ರೈಲ್ವೇಸ್, ಭಾರತೀಯ ರಕ್ಷಣಾ ಪಡೆ ಸೇರಿ ಅನೇಕ ಕ್ಷೇತ್ರಗಳಲ್ಲಿ ವೃತ್ತಿಯನ್ನು ಅರಸಬಹುದು. ಹಾಗೂ ಸರ್ಕಾರಿ ವಲಯದ ಪ್ರಮುಖ ಸಂಸ್ಥೆಗಳಾದ ಎನ್‌ಟಿಪಿಸಿ, ಒಎನ್‌ಜಿಸಿ, ಸ್ಟೀಲ್ ಅಥಾರಿಟಿ ಅಫ್ ಇಂಡಿಯಾ, ಎಂಜಿನಿಯರ್ಸ್ ಇಂಡಿಯಾ, ಇಸ್ರೊ, ಡಿಆರ್‌ಡಿಒ, ಎಚ್‌ಎಎಲ್ ಸಂಸ್ಥೆಗಳಲ್ಲಿಯೂ ಹುದ್ದೆಗಳನ್ನು ಪಡೆದುಕೊಳ್ಳಬಹುದು. ಜತೆಗೆ, ಯುಪಿಎಸ್‌ಸಿ ಪರೀಕ್ಷೆಯ ಮೂಲಕ ಐಎಎಸ್ ಅಧಿಕಾರಿಯಾಗಬಹುದು. ಈಗ, ಸರ್ಕಾರಿ ವಲಯದ ಎಲ್ಲಾ ವೃತ್ತಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿರುತ್ತದೆ. ಹಾಗಾಗಿ, ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ, ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗುರುತಿಸಿ, ವೃತ್ತಿಯೋಜನೆಯನ್ನು ಮಾಡಿ, ನಿರ್ಧಾರ ಮಾಡುವುದು ಸೂಕ್ತ. ವೃತ್ತಿಯೋಜನೆಯ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:https://www.youtube.com/watch?v = AwlDno1YduQ

- **ಎಂಎಸ್ಸಿ(ಫೊರೆನ್ಸಿಕ್ ಸೈನ್ಸ್ ಮತ್ತು ಕ್ರಿಮಿನಾಲಜಿ) ನಂತರ ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಅವಕಾಶಗಳೇನು?**
ಹೆಸರು, ಊರು ತಿಳಿಸಿಲ್ಲ.

ಹೆಚ್ಚುತ್ತಿರುವ ಸೈಬರ್ ಕ್ರೈಂ, ವಂಚನೆ, ಮೋಸಗಾರಿಕೆ ಮತ್ತು ಇನ್ನಿತರ ಅಪರಾಧಗಳಿಂದ, ವಿಧಿ ವಿಜ್ಞಾನ (ಫೊರೆನ್ಸಿಕ್ ಸೈನ್ಸ್) ಮತ್ತು ಅಪರಾಧ ಶಾಸ್ತ್ರ (ಕ್ರಿಮಿನಾಲಜಿ) ಕ್ಷೇತ್ರದ ತಜ್ಞರಿಗೆ ಬೇಡಿಕೆಯಿದೆ. ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ಸ್ವಾಭಾವಿಕವಾದ ಒಲವು ಮತ್ತು ಆಸಕ್ತಿಯಿದ್ದು ವಿವೇಚನೆ, ದತ್ತಾಂಶ ಸಂಗ್ರಹಣೆ ಮತ್ತು ನಿರ್ವಹಣೆ, ತಾರ್ಕಿಕ ಪ್ರತಿಪಾದನಾ ಕೌಶಲ, ವಿಶ್ಲೇಷಣಾ ಮತ್ತು ಸಂಶೋಧನಾ ಕೌಶಲ, ಸಮಯ ಪ್ರಜ್ಞೆ ಇತ್ಯಾದಿ ಕೌಶಲಗಳನ್ನು ಬೆಳೆಸಿಕೊಳ್ಳುವುದರ ಜತೆಗೆ ಪದವಿ ಪರೀಕ್ಷೆಯ ಫಲಿತಾಂಶ ಉತ್ಕೃಷ್ಟವಾಗಿರಬೇಕು. ವಿದ್ಯಾಭ್ಯಾಸದ ನಂತರ ಸಂಶೋಧನಾ ಸಂಸ್ಥೆಗಳು, ಖಾಸಗಿ ಮತ್ತು ಸರ್ಕಾರಿ ಪತ್ತೇದಾರಿ ಸಂಸ್ಥೆಗಳು, ಪೊಲೀಸ್ ಇಲಾಖೆ, ವಿಧಿ ವಿಜ್ಞಾನ ಲ್ಯಾಬೋರೇಟರಿಗಳು, ಸಿಐಡಿ, ಸಿಬಿಐ, ಐಬಿ, ಪೋಲೀಸ್ ಇಲಾಖೆ, ನರ್ಕೋಟಿಕ್ಸ್ ಇಲಾಖೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು ಇತ್ಯಾದಿ ಕ್ಷೇತ್ರಗಳಲ್ಲಿ ವೃತ್ತಿಯನ್ನು ಅರಸಬಹುದು.

- **ನಾನು ಬಿಸಿಎ ಮಾಡುತ್ತಿದ್ದು, ಮುಂದೆ ಎಂಬಿಎ ಮಾಡಬಹುದೇ?**
ರೋಹಿತ್, ಊರು ತಿಳಿಸಿಲ್ಲ.

ಐಟಿ ವಿಸ್ತಾರವಾದ ಮತ್ತು ತ್ವರಿತವಾಗಿ ಅಭಿವೃದ್ಧಿಯಾಗುತ್ತಿರುವ ಕ್ಷೇತ್ರ. ಎಂಬಿಎ. ಕೋರ್ಸಿನಲ್ಲಿ ವೃತ್ತಿಗೂ, ಜೀವನಕ್ಕೂ ಅಗತ್ಯವಾದ ಅನೇಕ ಮೂಲಭೂತ ತತ್ವಗಳ, ಮೌಲ್ಯಗಳ ಮನದಟ್ಟಾಗುತ್ತದೆ. ಈ ತತ್ವಗಳ ಆಧಾರದ ಮೇಲೆ, ನೀವು ವೃತ್ತಿ ಮತ್ತು ಖಾಸಗೀ ಜೀವನಗಳೆರಡರಲ್ಲೂ ಯಶಸ್ಸು ಸಾಧಿಸಬಹುದು. ಹಾಗಾಗಿ, ಬಿಸಿಎ ಅಥವಾ ಯಾವುದೇ ತಾಂತ್ರಿಕ ಕೋರ್ಸ್ ನಂತರ ಎಂಬಿಎ ಉತ್ತಮ ಆಯ್ಕೆ. ಹೆಚ್ಚಿನ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v = WHZTFCmu3zg

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಕೋಟಕ್ ಸುರಕ್ಷಾ ಸ್ಕಾಲರ್‌ಷಿಪ್

ಸಾಮಾನ್ಯ / ವೃತ್ತಿಪರ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಕೋಟಕ್ ಸೆಕ್ಯೂರಿಟಿಸ್ ಲಿಮಿಟೆಡ್ (ಕೆಎಸ್‌ಎಲ್) ಅರ್ಜಿಗಳನ್ನು ಆಹ್ವಾನಿಸುತ್ತದೆ

ಅರ್ಹತೆ: ಅಭ್ಯರ್ಥಿಗಳು ಕನಿಷ್ಠ ಶೇ 55 ಅಂಕಗಳನ್ನು ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹ 3,20,000 ಮೀರುವಂತಿರಬಾರದು.

ಆರ್ಥಿಕ ಸಹಾಯ:ವಾರ್ಷಿಕ ₹ 1,00,000

ಅರ್ಜಿ ಸಲ್ಲಿಸಲು ಕೊನೆ ದಿನ: 23-01-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಮಾಹಿತಿಗೆ: Short Url: www.b4s.in/pjvi/KSSP3

ಅಬ್ದುಲ್ ಕಲಾಂ ಯಂಗ್ ರಿಸರ್ಚ್ ಫೆಲೋಷಿಪ್

ಪರಿಸರಕ್ಕೆ ಸಂಬಂಧಿಸಿದ ಕ್ಷೇತ್ರದಲ್ಲಿ ಪದವಿ, ಸ್ನಾತಕೋತ್ತರ ಪದವಿ, ಪಿಎಚ್.ಡಿಯನ್ನು ಅಭ್ಯಾಸ ಮಾಡುತ್ತಿರುವ ಅಥವಾ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ಟೆಕ್ನಾಲಜಿ, ಎಜುಕೇಷನ್, ರಿಸರ್ಚ್ ಅಂಡ್ ರಿಹ್ಯಾಬಲಿಟೇಶನ್ ಫಾರ್ ಎನ್ವೈರ್ನಮೆಂಟ್ (ಟಿಇಆರ್‌ಆರ್‌ಇ) ಸೆಂಟರ್ ನೀಡುವ ಅವಕಾಶ ಇದಾಗಿದೆ.

ಅರ್ಹತೆ: 2024ರ ಡಿಸೆಂಬರ್ 31ಕ್ಕೆ ಅನ್ವಯವಾಗುವಂತೆ 18ರಿಂದ 25 ವರ್ಷದೊಳಗಿನ ವಯೋಮಾನದವರಾಗಿರಬೇಕು. ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿಯ ಕಡೆಗೆ ಅದ್ವಿತೀಯ ಸಂಶೋಧನಾ ಕೊಡುಗೆಯನ್ನು ನೀಡಿರಬೇಕು.

ಆರ್ಥಿಕ ಸಹಾಯ: ₹25,000ದ ವರೆಗಿನ ಫೆಲೋಶಿಪ್ ಮತ್ತು ಪ್ರಮಾಣಪತ್ರ.

ಅರ್ಜಿ ಸಲ್ಲಿಸಲು ಕೊನೆ ದಿನ: 15-02-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ

ಮಾಹಿತಿಗೆ: Short Url:www.b4s.in/pjvi/APJF1

ಡೀಕನ್ ಇಂಡಿಯಾ

ಭಾರತೀಯ ಪದವೀಧರರಿಗೆ ಆಸ್ಟ್ರೇಲಿಯಾದ ಡೀಕನ್ ಯುನಿವರ್ಸಿಟಿ ನೀಡುವ ಅವಕಾಶವಾಗಿದೆ. ಅರ್ಹ ವಿದ್ಯಾರ್ಥಿಗಳಿಗೆ ತಮ್ಮ ವಿಶ್ವವಿದ್ಯಾಲಯ ಶುಲ್ಕ ಮತ್ತು ಅಧ್ಯಯನ ವೆಚ್ಚಕ್ಕಾಗಿ ಆರ್ಥಿಕವಾಗಿ ಬೆಂಬಲ ನೀಡುತ್ತದೆ.

ಅರ್ಹತೆ: ಭಾರತೀಯ ಪಾಸ್‌ಪೋರ್ಟ್ ಹೊಂದಿರುವ ಮತ್ತು ಅರ್ಜಿ ಸಲ್ಲಿಸುವ ಸಮಯದಲ್ಲಿ ಭಾರತದಲ್ಲಿ ವಾಸಿಸುತ್ತಿರುವವರಿಗೆ ಮುಕ್ತವಾಗಿದೆ. ಅವರು ಭಾರತ ಮೂಲದ ಡೀಕನ್ ಅಧಿಕೃತ ಏಜೆಂಟ್ ಮೂಲಕ ಅರ್ಜಿ ಸಲ್ಲಿಸಬೇಕು. ಪದವಿಯಲ್ಲಿ ಒಟ್ಟಾರೆ ಶೇ 55 - ಶೇ 74.99 ಅಂಕಗಳನ್ನು ಗಳಿಸಿರಬೇಕು.

ಆರ್ಥಿಕ ಸಹಾಯ: ಬೋಧನಾ ಶುಲ್ಕದಲ್ಲಿ ಶೇ 20 ವಿನಾಯಿತಿ.

ಅರ್ಜಿ ಸಲ್ಲಿಸಲು ಕೊನೆ ದಿನ: 31-01-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಮಾಹಿತಿಗೆ: Short Url: www.b4s.in/pjvi/DIPB4

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

ಮೈಸೂರಿನ ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

ಪ್ರಶ್ನೋತ್ತರ:–

34) ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಿವಾನರಾಗಿ ಕಾರ್ಯನಿರ್ವಹಿಸಿದ ಮಹನಿಯರನ್ನು ಹೆಸರಿಸಿ

ಉತ್ತರ:– ಪಿ. ಎನ್. ಕೃಷ್ಣಮೂರ್ತಿ, ವಿ. ಪಿ. ಮಾಧವರಾಯರು, ಸರ್. ಎಂ. ವಿಶ್ವೇಶ್ವರಯ್ಯನವರು, ಕಾಂತರಾಜ ಅರಸ್, ಸರ್ ಆಲ್ಬಿಯನ್ ಬ್ಯಾನರ್ಜಿ, ಸರ್ ಮಿರ್ಜಾ ಇಸ್ಮಾಯಿಲ್ ಮುಂತಾದ ಪ್ರಖ್ಯಾತ ದಿವಾನರುಗಳು ಸೇವೆ ಸಲ್ಲಿಸಿದ್ದಾರೆ.

35) ನಾಲ್ವಡಿ ಕೃಷ್ಣರಾಜ ಒಡೆಯರು ಆಶ್ರಯದಲ್ಲಿದ್ದ ವಿದ್ವಾಂಸರು ಯಾರು?

ಉತ್ತರ:– ಶ್ಯಾಮಾಶಾಸ್ತ್ರಿ, ಎಂ. ಹಿರಿಯಣ್ಣ, ವೀಣೆ ಶೇಷಣ್ಣ, ಸಾಂಬಯ್ಯ, ಬಿಡಾರಂ ಕೃಷ್ಣಪ್ಪ, ಮುತ್ತಯ್ಯ ಭಾಗವತರ್, ವಾಸುದೇವಾಚಾರ್ಯ, ಟಿ. ಚೌಡಯ್ಯ, ಮುಂತಾದವರು

36) ಮಹಾತ್ಮ ಗಾಂಧಿಯವರು ಯಾರನ್ನು 'ರಾಜರ್ಷಿ' ಎಂದು ಕರೆದಿದ್ದಾರೆ ?

ಉತ್ತರ:– ನಾಲ್ವಡಿ ಕೃಷ್ಣರಾಜ ಒಡೆಯರು

37). ನಾಲ್ವಡಿ ಕೃಷ್ಣರಾಜ ಒಡೆಯರ ನಂತರ ಯಾರು ಸಿಂಹಾಸನವನ್ನು ಏರಿದರು?

ಉತ್ತರ:– ಜಯಚಾಮರಾಜ ಒಡೆಯರು

38) ಜಯಚಾಮರಾಜ ಒಡೆಯರ ಕಾಲದಲ್ಲಿ ದಿವಾನರಾಗಿ ಸೇವೆ ಸಲ್ಲಿಸಿದವರನ್ನು ಹೆಸರಿಸಿ

ಉತ್ತರ:– ಮಿರ್ಜಾ ಇಸ್ಮಾಯಿಲ್, ಎನ್. ಮಾಧವರಾವ್ ಹಾಗೂ ಆರ್ಕಾಟ್ ರಾಮಸ್ವಾಮಿ

39) ಧೋಂಡಿಯಾ ವಾಘ್‌ನ ಹೋರಾಟ ಅಂತ್ಯ ಹಾಡಲು ಪ್ರಯತ್ನಿಸಿದ ಬ್ರಿಟಿಷ್ ಅಧಿಕಾರಿ ಯಾರು?

ಉತ್ತರ:– ಲಾರ್ಡ್ ವೆಲ್ಲೆಸಿ

40) ಧೋಂಡಿಯಾ ವಾಘ್ ಯಾರ ಆಸ್ಥಾನದಲ್ಲಿ ಸೈನಿಕನಾಗಿ ಸೇರಿದ್ದನು?

ಉತ್ತರ:– ಹೈದಾರಾಲಿ.

41) ಧೋಂಡಿಯಾ ವಾಘ್ ಎಲ್ಲಿ ಜನಿಸಿದ್ದನು?

ಉತ್ತರ:– ಚನ್ನಗಿರಿ

42) ಯಾರ ಜತೆಗಿನ ಮನಸ್ತಾಪದಿಂದ ಧೋಂಡಿಯಾ ವಾಘ್ ಸೆರೆಮನೆ ಸೇರುವಂತಾಗಿತ್ತು?

ಉತ್ತರ:– ಟಿಪ್ಪು ಸುಲ್ತಾನ್

43) ಧೋಂಡಿಯಾ ವಾಘ್ ಯಾವೆಲ್ಲಾ ಕೋಟೆಯನ್ನು ವಶಪಡಿಸಿಕೊಂಡಿದ್ದರು?

ಉತ್ತರ:– ಶಿವಮೊಗ್ಗ ಮತ್ತು ಬಿದನೂರು

44) ಧೋಂಡಿಯಾ ವಾಘ್‌ನ ಹೋರಾಟದ ಕುರಿತು ಬರೆಯಿರಿ

ಉತ್ತರ:– ಬ್ರಿಟಿಷ್ ಆಳ್ವಿಕೆಯ ವಿರುದ್ಧ ಕಂಡುಬಂದ ಪ್ರತಿಭಟನೆಗಳು ಮತ್ತು ಬಂಡಾಯಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ. ಸಶಸ್ತ್ರ ಬಂಡಾಯಗಳಲ್ಲಿ ಧೋಂಡಿಯಾ ವಾಘ್‌ನ ನಾಯಕತ್ವದಲ್ಲಿ ಕಂಡುಬಂದಿದ್ದ ಸಶಸ್ತ್ರ ಹೋರಾಟ ಪ್ರಮುಖವಾಗಿದೆ. ಧೋಂಡಿಯಾ ಚನ್ನಗಿರಿಯ ಮರಾಠ ಕುಟುಂಬದಲ್ಲಿ ಜನಿಸಿದನು. ಅವನ ಶೌರ್ಯ ಪರಾಕ್ರಮಗಳಿಂದ ಜನ ಅವನನ್ನು ವಾಘ್ ಎಂದು ಕರೆದರು. ಮರಾಠಿಯಲ್ಲಿ ವಾಘ್ ಎಂದರೆ ಹುಲಿ.

ಕ್ರಿ.ಶ. 1789ರ ಸುಮಾರಿಗೆ ಮೈಸೂರಿನ ಹೈದರಾಲಿಯ ಸೈನ್ಯದಲ್ಲಿ ಒಬ್ಬ ಅಶ್ವಾರೋಹಿ ಸೈನಿಕನಾಗಿ ಸೇರಿ ಕಾಲಾನಂತರ ಸೇನಾ ನಾಯಕನಾದನು. ಖಾಸಗಿಯಾಗಿ ಒಂದು ಸೈನ್ಯವನ್ನು ಸಜ್ಜುಗೊಳಿಸಿದ ಅವನು ಟಿಪ್ಪುವಿನ ಸೈನ್ಯದಲ್ಲಿ ಸೇವೆ ಸಲ್ಲಿಸಿದನು. ಆತನೊಂದಿಗೆ ಮನಸ್ತಾಪದಿಂದಾಗಿ ಅವನು ಸೆರೆಮನೆ ಸೇರುವಂತಾಯಿತು. ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧದ ಸಮಯದಲ್ಲಿ ಶ್ರೀರಂಗಪಟ್ಟಣದ ಪತನಾ ನಂತರ ಬ್ರಿಟಿಷರು ಈತನನ್ನು ಸೆರೆಮನೆಯಿಂದ ಬಿಡುಗಡೆಗೊಳಿಸಿದರು. ತರುವಾಯ ಇವನು ಒಂದು ಸೈನ್ಯವನ್ನು ಸಂಘಟಿಸಿ ಸೈನಿಕ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದನು. ಆತನ ಸೈನ್ಯ ದೊಡ್ಡದಾಗಿರಲಿಲ್ಲ. ಅವನು ಟಿಪ್ಪುವಿನ ಸೈನ್ಯದಲ್ಲಿದ್ದ ಅತೃಪ್ತ ಸೈನಿಕರು, ಅಧಿಕಾರದಿಂದ ಮುಕ್ತಗೊಳಿಸಲ್ಪಟ್ಟ ಪಾಳೇಯಗಾರರು ಮೊದಲಾದವರನ್ನು ಸಂಘಟಿಸಿ ಒಂದು ಸೈನ್ಯವನ್ನು ಸುಸಜ್ಜಿತಗೊಳಿಸಿ ಬಂಡಾಯದ ಬಾವುಟವನ್ನು ಹಾರಿಸಿದನು. ಶಿವಮೊಗ್ಗ ಮತ್ತು ಬಿದನೂರಿನ ಕೋಟೆಗಳನ್ನು ವಶಪಡಿಸಿಕೊಂಡನು. ಚಿತ್ರದುರ್ಗದ ಕೋಟೆಯನ್ನು ವಶಪಡಿಸಿಕೊಳ್ಳಲು ವಿಫಲ ಪ್ರಯತ್ನಗಳನ್ನು ನಡೆಸಿದನು. ಗವರ್ನರ್ ಜನರಲ್‌ನಾಗಿದ್ದ ಲಾರ್ಡ್ ವೆಲ್ಲೆಸ್ಲಿ ಬಂಡಾಯವನ್ನು ಹತ್ತಿಕ್ಕಲು ಪ್ರಾರಂಭಿಸಿದನು. ಧೋಂಡಿಯಾನ ನಿಯಂತ್ರಣದಲ್ಲಿದ್ದ ಶಿವಮೊಗ್ಗ, ಹೊನ್ನಾಳಿ, ಹರಿಹರ ಮೊದಲಾದವುಗಳ ಮೇಲೆ ಆಕ್ರಮಣ ನಡೆಸಲಾಯಿತು. ಧೋಂಡಿಯಾ ತನ್ನ ನೆಲೆಯನ್ನು ಕಳೆದುಕೊಂಡನು. ಶಿಕಾರಿಪುರವನ್ನು ಬ್ರಿಟಿಷರು ವಶಪಡಿಸಿಕೊಂಡ ತರುವಾಯ ಧೋಂಡಿಯಾ ನಿಜಾಮನ ಹತೋಟಿಯಲ್ಲಿದ್ದ ಗುತ್ತಿಯ ಕಡೆಗೆ ಪಲಾಯನ ಗೈದನು. ಆಗ ನಿಜಾಮನು ಗುತ್ತಿಯನ್ನು ಮುತ್ತಿದಾಗ ಧೋಂಡಿಯಾ ಮರಾಠರ ಪ್ರದೇಶಕ್ಕೆ ಓಡಿಹೋದನು. ಮರಾಠ ಸೈನ್ಯ ಅವನನ್ನು ಸೋಲಿಸಿ ಅವನ ಶಸ್ತ್ರಾಸ್ತ್ರಗಳು, ಒಂಟೆ ಮತ್ತು ಆನೆಗಳನ್ನು ವಶಪಡಿಸಿಕೊಂಡರೂ ಧೃತಿಗೆಡದ ಧೋಂಡಿಯಾ ತನ್ನ ಹೋರಾಟವನ್ನು ಮುಂದುವರಿಸಿದನು. ಅನೇಕ ಅತೃಪ್ತ ಪಾಳೆಯಗಾರರು ಧೋಂಡಿಯಾನಿಗೆ ಪ್ರೋತ್ಸಾಹಿಸಿದರು. ಮಲಬಾರಿನ ಮಾಹೆಯಲ್ಲಿದ್ದ ಫ್ರೆಂಚರು ಆತನಿಗೆ ಸಹಾಯ ಹಸ್ತವನ್ನು ನೀಡಿದರು. ಹರಿಹರ, ಚಿತ್ರದುರ್ಗ, ಶಿಕಾರಿಪುರ, ಸವಣೂರು, ರಾಣೆಬೆನ್ನೂರು, ಕಿತ್ತೂರು ಮತ್ತು ಲೋಂಡಾ ಹೀಗೆ ವಿಶಾಲ ಭೌಗೋಳಿಕ ಪ್ರದೇಶದಲ್ಲಿ ಬ್ರಿಟಿಷರ ಸೈನ್ಯ ಆತನನ್ನು ಹಿಂಬಾಲಿಸಿತು. ಶಿರಹಟ್ಟಿಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡ ಬ್ರಿಟಿಷ್ ಸೈನ್ಯ ಧೋಂಡಿಯಾನ ಸೈನ್ಯದ ಅನೇಕ ಸೈನಿಕರನ್ನು ಸಾಯಿಸಿತು. ಧೋಂಡಿಯಾ ವಾಘ್‌ನ ಅಂತ್ಯವನ್ನು ಹಾಡಲು ಲಾರ್ಡ್ ವೆಲ್ಲೆಸ್ಲಿ ನಿರ್ಧರಿಸಿ ದೇಶಿಯ ಸಂಸ್ಥಾನಗಳ ರಾಜರ ಸಹಾಯವನ್ನು ಕೋರಿನು. ಶಿಕಾರಿಪುರದ ಕೋಟೆಯನ್ನು ಪುನಃ ಗೆದ್ದುಕೊಂಡ ಧೋಂಡಿಯಾನ ಸೈನ್ಯವನ್ನು ಬ್ರಿಟಿಷ್ ಸೈನ್ಯ ಚದುರಿಸಿತು. ತುಂಗಭದ್ರಾ ಮತ್ತು ಮಲಪ್ರಭಾ ನದಿಗಳ ನಡುವಿನ ಪ್ರದೇಶದ ವಿಶಾಲ ಭೂಪ್ರದೇಶದಲ್ಲಿ ನಿರ್ಭೀತಿಯಿಂದ ಸಂಚರಿಸುತ್ತಿದ್ದ ಧೋಂಡಿಯಾನ ಸೈನ್ಯವನ್ನು ಸೋಲಿಸಲು ಬ್ರಿಟಿಷರು ಪ್ರಯತ್ನಿಸಿದರು. ಎಲ್ಲಾ ದಿಕ್ಕುಗಳಿಂದಲೂ ಆತನನ್ನು ಬ್ರಿಟಿಷ್ ಸೈನ್ಯ ಸುತ್ತುವರೆಯಿತು. ರಾಯಚೂರಿನಿಂದ ಹೊರಟ ಅವನನ್ನು ಹಿಂಬಾಲಿಸಲಾಯಿತು. ನಿಜಾಮ ಮತ್ತು ಮರಾಠರ ಸೈನ್ಯದ ನಡುವೆ ಸಿಲುಕಿದ ಧೋಂಡಿಯಾನ ನೇತೃತ್ವದಲ್ಲಿನ ಸೈನ್ಯದ ಮೇಲೆ ಬ್ರಿಟಿಷರು ಯಾಪಲಪೆರವಿ ಎಂಬ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿ ಕೋನ್‌ಗಲ್ ಎಂಬ ಸ್ಥಳದಲ್ಲಿ ಆತನನ್ನು ಹತ್ಯೆಗೈದರು. ತಮ್ಮ ನಾಯಕನ ಹತ್ಯೆಯ ನಂತರ ಅಳಿದುಳಿದ ಸೈನಿಕರು ಚದುರಿದರು. ಬಂಡುಕೋರರಿಂದ ಅಪಾರ ಪ್ರಮಾಣದ ಮದ್ದುಗುಂಡುಗಳನ್ನು ಮತ್ತು ಶಸ್ತ್ರಾಸ್ತ್ರಗಳನ್ನು ಬ್ರಿಟಿಷರು ವಶಪಡಿಸಿಕೊಂಡರು.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC MATHS

VECTOR ALGEBRA



$$\overrightarrow{OP_1} + \overrightarrow{P_1P_2} = \overrightarrow{OP_2}$$
$$\Rightarrow \overrightarrow{P_1P_2} = \overrightarrow{OP_2} - \overrightarrow{OP_1}$$

(By the properties of vector addition)

(.......Contd)

$$\Rightarrow \overrightarrow{P_1P_2} = \left(x_2\hat{i} + y_2\hat{j} + z_2\hat{k}\right) - \left(x_1\hat{i} + y_1\hat{j} + z_1\hat{k}\right)$$
$$\overrightarrow{P_1P_2} = (x_2 - x_1)\hat{i} + (y_2 - y_1)\hat{j} + (z_2 - z_1)\hat{k}$$

This gives vector joining two points P_1, P_2.

The magnitude of vector $\overrightarrow{P_1P_2}$ is given by

$$P_1P_2 = \left|\overrightarrow{P_1P_2}\right|$$
$$= \sqrt{(x_2 - x_1)^2 + (y_2 - y_1)^2 + (z_2 - z_1)^2}$$

gives the distance formula.

Dividing a line segment in a given ratio (Section Formula)

Let P and Q be two points represented by the position vectors $\overrightarrow{OP}$ and $\overrightarrow{OQ}$ respectively, with respect to the origin O. Then the line segment joining the points P and Q may be divided by a third point, say R, in two ways – internally and externally.

Here, we want to find the position vector $\overrightarrow{OR}$ for the point R with respect to the origin O.

Case 1 - Internal Division.

When R divides PQ internally.

If R divides $\overrightarrow{PQ}$ such that $m\overrightarrow{RQ} = n\overrightarrow{PR}$

When *m* and *n* are positive scalars, we say that the point R divides $\overrightarrow{PQ}$ internally in the ratio of m : n.



Now from triangles ORQ and OPR, we have

$$\overrightarrow{RQ} = \overrightarrow{OQ} - \overrightarrow{OR} = \vec{b} - \vec{r} \text{ and}$$
$$\overrightarrow{PR} = \overrightarrow{OR} - \overrightarrow{OP} = \vec{r} - \vec{a}$$

$$\therefore m(\vec{b} - \vec{r}) = n(\vec{r} - \vec{a})$$
$$\Rightarrow m\vec{b} - m\vec{r} = n\vec{r} - n\vec{a}$$
$$\Rightarrow (m+n)\vec{r} = m\vec{b} + n\vec{a}$$
$$\Rightarrow \vec{r} = \frac{m\vec{b} + n\vec{a}}{m+n}$$

Hence, the position vector of the point R which divides P and Q internally in the ratio of m : n is given by

$$\overrightarrow{OR} = \frac{m\vec{b} + n\vec{a}}{m+n}$$

Case II - External Division

When R divides PQ externally.

$$\text{Then } \frac{PR}{QR} = \frac{m}{n}$$
$$\Rightarrow n\overrightarrow{PR} = m\overrightarrow{QR}$$
$$\Rightarrow n(\vec{r} - \vec{a}) = m(\vec{r} - \vec{b})$$
$$\Rightarrow (m-n)\vec{r} = m\vec{b} - n\vec{a}$$
$$\Rightarrow \overrightarrow{OR} = \vec{r} = \frac{m\vec{b} - n\vec{a}}{m-n}$$

If R is the mid-point of PQ, then m = n

$\therefore$ the mid – point R of $\overrightarrow{PQ}$, will have its position vector as $\overrightarrow{OR} = \frac{\vec{a} + \vec{b}}{2}$

Some more problems:-

1. If a, b, c are non – coplanar, show that the following vectors are coplanar.

$$a - 2b + 3c, \ -2a + 3b - 4c, \ -b + c$$

Soln:- **Given vectors will be coplanar if one vector can be expressed as a linear combination of the other two.**

$$\text{Let, } -2a + 3b - 4c = x(a - 2b + 3c) + y(-b + 2c)$$
$$= xa + (-2x - y)b + (3x + 2y)c$$

Comparing the coefficients, we get,

$$x = -2, \quad -2x - y = 3, \quad 3x + 2y = -4$$
$$\therefore -2(-2) - y = 3 \Rightarrow y = 1$$

Also x = -2 , y = 1 satisfy 3x + 2y = - 4
$-2a + 3b - 4c = -2(a - 2b + 3c) + 1(-b + 2c)$ **Therefore the given vectors are coplanar.**

2. Find the unit vector perpendicular to the vector $\vec{a} = \hat{i} - 2\hat{j} + k$ and coplanar with the vectors $\vec{b} = 2\hat{i} + \hat{j} - k$ and $\vec{c} = \hat{i} + \hat{j} - 3k$.

Soln:- $\vec{a} \times (\vec{b} \times \vec{c})$ **is the vector which is perpendicular to** $\vec{a}$ **and lies in the same plane of** $\vec{b}$ **and** $\vec{c}$

$$\vec{a} \cdot \vec{c} = (i - 2j + k) \cdot (i + j - 3k)$$
$$= 1 - 2 - 3 = -4$$
$$\vec{a} \cdot \vec{b} = (i - 2j + k) \cdot (2i + j - k)$$
$$= 2 - 2 - 1 = -1$$
$$\vec{a} \times (\vec{b} \times \vec{c}) = -4(2i + j - k) - (-1)(i + j - 3k)$$
$$= -7i - 3j + k$$
$$\therefore n = \frac{\vec{a} \times (\vec{b} \times \vec{c})}{\left|\vec{a} \times (\vec{b} \times \vec{c})\right|} = \frac{-7i - 3j + k}{\sqrt{(-7)^2 + (-3)^2 + 1^2}}$$
$$= \frac{-7i - 3j + k}{\sqrt{59}}$$

ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದ ಸಚಿವ, ₹10 ಲಕ್ಷ ಪರಿಹಾರ ಘೋಷಣೆ • ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆಗ್ರಹ

ಗುತ್ತಿಗೆದಾರನ ಮನೆಗೆ ಖಂಡ್ರೆ, ವಿಜಯೇಂದ್ರ ಭೇಟಿ

ಪ್ರಜಾವಾಣಿ ವಾರ್ತೆ

ಕಟ್ಟಿತೂಗಾಂವ್ (ಬೀದರ್ ಜಿಲ್ಲೆ): ಮೃತ ಯುವ ಗುತ್ತಿಗೆದಾರ ಸಚಿನ್ ಮಾನಪ್ಪ ಪಾಂಚಾಳ್ ಅವರ ಇಲ್ಲಿನ ಮನೆಗೆ ಪರಿಸರ–ಅರಣ್ಯ ಖಾತೆ ಸಚಿವ ಈಶ್ವರ ಬಿ. ಖಂಡ್ರೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಪಕ್ಷದ ಮುಖಂಡರು ಭಾನುವಾರ ಪ್ರತ್ಯೇಕವಾಗಿ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿ, ಧೈರ್ಯ ತುಂಬಿದರು.

ಮಧ್ಯಾಹ್ನ ಈಶ್ವರ ಬಿ. ಖಂಡ್ರೆ ಅವರು ಸಚಿನ್ ಅವರ ಮನೆಗೆ ಬರುತ್ತಿದ್ದಂತೆ ಅವರ ಸಹೋದರಿಯರು ಪೊಲೀಸ್ ಅಧಿಕಾರಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. 'ಠಾಣೆಗೆ ಹೋದಾಗ ಪೊಲೀಸರು ಸರಿಯಾಗಿ ನಡೆದುಕೊಳ್ಳಲಿಲ್ಲ. ನಮ್ಮ ದೂರು ಸ್ವೀಕರಿಸಲಿಲ್ಲ. ಒಂದು ವೇಳೆ ನಾವು ಕೊಟ್ಟಿದ್ದ ದೂರು ಸ್ವೀಕರಿಸಿ, ತನಿಖೆ ನಡೆಸಿದ್ದರೆ ಸಚಿನ್ ಬದುಕುಳಿಯುತ್ತಿದ್ದ. ಈಗೇಕೆ ಇಲ್ಲಿಗೆ ಬಂದಿದ್ದೀರಿ. ನೀವು ಮೊದಲು ಇಲ್ಲಿಂದ ಹೊರನಡೆಯಬೇಕು' ಎಂದು ಸಚಿವರ ಸಮ್ಮುಖದಲ್ಲೇ ಹೇಳಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಎಸ್‌ಪಿ ಜೆ.ಎಸ್. ನ್ಯಾಮೆಗೌಡ ಸೇರಿದಂತೆ ಇತರೆ ಪೊಲೀಸ್ ಅಧಿಕಾರಿಗಳು ಮನೆಯಿಂದ ನಿರ್ಗಮಿಸಿದರು.

'ನಮ್ಮ ಸಹೋದರನ ಸಾವಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಘಟನೆ ನಡೆದು ನಾಲ್ಕು ದಿನಗಳಾದರೂ ಮರಣ ಪತ್ರದಲ್ಲಿ ಉಲ್ಲೇಖಿಸಿರುವ ಹೆಸರುಗಳ ವ್ಯಕ್ತಿಗಳನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿಲ್ಲ. ಪೊಲೀಸರ ಮೇಲೆ ನಂಬಿಕೆ ಇಲ್ಲದಂತಾಗಿದೆ' ಎಂದು ಸಚಿನ್ ಸಹೋದರಿಯರಾದ ಸವಿತಾ, ಸಂಗೀತಾ, ಸುಜಾತಾ ಗೋಳು ತೋಡಿಕೊಂಡರು.

'ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಇಬ್ಬರು ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಬೀದರ್ ರೈಲ್ವೆ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಸ್ವತಂತ್ರ ತನಿಖಾ ಸಂಸ್ಥೆಯಿಂದ ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂದು ಮುಖ್ಯಮಂತ್ರಿಯವರನ್ನು ಕೋರಿದ್ದೇನೆ. ತನಿಖೆಯಿಂದ ಸತ್ಯಾಂಶ ಹೊರಬಂದ ನಂತರ ಸೂಕ್ತ ಕಾನೂನು ಕ್ರಮ ಕೈಗೊಳ್ಳ ಲಾಗುವುದು' ಎಂದು ಈಶ್ವರ ಖಂಡ್ರೆ ಭರವಸೆ ನೀಡಿದರು. ಬಳಿಕ ಪತ್ರಕರ್ತರೊಂದಿಗೆ ಮಾತನಾಡಿ, 'ಸಚಿನ್ ಪಾಂಚಾಳ್ ಅವರ ಕುಟುಂಬಕ್ಕೆ ವೈಯಕ್ತಿಕ ಹಾಗೂ ಸರ್ಕಾರದಿಂದ ಜಂಟಿಯಾಗಿ ₹10 ಲಕ್ಷ ಪರಿಹಾರ ನೀಡಲಾಗುವುದು. ಕುಟುಂಬದ ಒಬ್ಬ ಸದಸ್ಯನಿಗೆ ಸರ್ಕಾರಿ ನೌಕರಿ ಕೊಡಿಸುವ ಬಗ್ಗೆ ಸಿಎಂ ಜತೆ ಚರ್ಚಿಸುತ್ತೇನೆ' ಎಂದರು.

ಬಿ.ವೈ. ವಿಜಯೇಂದ್ರ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿ ದಂತೆ ಇತರೆ ಮುಖಂಡರು ಸಂಜೆ ಭೇಟಿ ಕೊಟ್ಟರು. ಮುಚ್ಚಿದ ಲಕೋಟೆಯಲ್ಲಿ ಸಚಿನ್ ಅವರ ಸಹೋದರಿಯರಿಗೆ ನಗದು ಪರಿಹಾರ ಕೊಡಲು ಮುಂದಾದರು. ಆದರೆ, ಅವರ ಸಹೋದರಿಯರು ಅದನ್ನು ತಿರಸ್ಕರಿಸಿದರು.

ಬಳಿಕ ವಿಜಯೇಂದ್ರ ಮಾತನಾಡಿ, ಸಚಿನ್ ಕುಟುಂಬದ ಒಬ್ಬ ಸದಸ್ಯನಿಗೆ ಸರ್ಕಾರಿ ನೌಕರಿ ಕೊಡಬೇಕು. ₹1 ಕೋಟಿ ಪರಿಹಾರ ನೀಡಬೇಕು. ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು. ಸಚಿವ ಪ್ರಿಯಾಂಕ್ ಖರ್ಗೆ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು. ಮುಖ್ಯಮಂತ್ರಿಯವರು ಖರ್ಗೆ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು' ಎಂದು ಒತ್ತಾಯಿಸಿದರು.

ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಕಟ್ಟಿತೂಗಾಂವ್ ಗ್ರಾಮದ ಸಚಿನ್ ಪಾಂಚಾಳ್ ಅವರ ಮನೆಗೆ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಭಾನುವಾರ ಭೇಟಿ ಕೊಟ್ಟು, ನಗದು ಪರಿಹಾರ ತೆಗೆದುಕೊಳ್ಳುವಂತೆ ಕೈಮುಗಿದು ಮನವಿ ಮಾಡಿದರು. ಆದರೂ ಕುಟುಂಬ ಸದಸ್ಯರು ಸ್ವೀಕರಿಸಲಿಲ್ಲ

ಸಚಿವ ಪ್ರಿಯಾಂಕ್ ಖರ್ಗೆ ಬೆಂಬಲಿಗರ ಕಿರುಕುಳದಿಂದ ಗುತ್ತಿಗೆದಾರರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು, ರಾಜ್ಯ ಸರ್ಕಾರದ ಆಡಳಿತ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಭ್ರಷ್ಟಾಚಾರ ಮಿತಿ ಮೀರಿದ್ದು, ಜನಸಾಮಾನ್ಯರು ತೊಂದರೆ ಅನುಭವಿಸುವಂತಾಗಿದೆ

ಜಗದೀಶ ಶೆಟ್ಟರ್ ಸಂಸದ

'ಖರ್ಗೆ ಕುಟುಂಬಕ್ಕೆ ಅಂಬೇಡ್ಕರ್ ಸಂವಿಧಾನ ಅನ್ವಯಿಸದೇ?'

ಬೆಂಗಳೂರು: 'ಬೀದರ್ ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆಗೆ ಸಚಿವ ಪ್ರಿಯಾಂಕ್ ಖರ್ಗೆ ಕಾರಣರು. ಅವರು ಊರಿಗೆ ಉಪದೇಶ ಮಾಡುವುದನ್ನು ಬಿಟ್ಟು ಮೊದಲು ರಾಜೀನಾಮೆ ಕೊಟ್ಟು ನೈತಿಕತೆ ಪ್ರದರ್ಶಿಸಲಿ' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಆಗ್ರಹಿಸಿದ್ದಾರೆ.

'ಖರ್ಗೆ ಕುಟುಂಬಕ್ಕೆ ಅಂಬೇಡ್ಕರ್ ಸಂವಿಧಾನ ಅನ್ವಯ ಆಗುವುದಿಲ್ಲವೆ' ಎಂದು ಅವರು ಪ್ರಶ್ನಿಸಿದ್ದಾರೆ.

'ಪ್ರಿಯಾಂಕ್ ಖರ್ಗೆ ಕಲಬುರಗಿಯ ನಿಜಾಮನೂ ಅಲ್ಲ. ಅವರ ಅನುಯಾಯಿಗಳು ರಜಾಕಾರರೂ ಅಲ್ಲ. ಗುತ್ತಿಗೆದಾರ ಸಚಿನ್ ಸಾವಿನಲ್ಲಿ ಪ್ರಿಯಾಂಕ್ ಆಪ್ತರ ಪಾತ್ರವಿರುವುದು ಸ್ಪಷ್ಟವಾಗಿದೆ. ಈ ಹಿಂದೆ ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಮಾಡಿಕೊಂಡಾಗ, ಅಂದಿನ ಸಚಿವ ಈಶ್ವರಪ್ಪನವರ ರಾಜೀನಾಮೆ ಕೇಳಲಾಗಿತ್ತು. ಈಗ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಲಿ' ಎಂದು ಅಶೋಕ ಹೇಳಿದ್ದಾರೆ.

'ಸಚಿನ್ ಆತ್ಮಹತ್ಯೆಗೂ ಮುನ್ನ ಮರಣ ಪತ್ರ ಬರೆದು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು. ಇದನ್ನು ಗಮನಿಸಿದ ಕುಟುಂಬಸ್ಥರು ಆತಂಕಗೊಂಡು, ಕೂಡಲೇ ಹುಡುಕಿ ಕೊಡುವಂತೆ ಬೀದರ್‌ನ ಗಾಂಧಿಗಂಜ್ ಪೊಲೀಸ್ ಠಾಣೆಗೆ ಮನವಿ ಮಾಡಿದ್ದರು. ಆದರೆ, ದೂರು ದಾಖಲಿಸುವಲ್ಲಿ ಪೊಲೀಸರು ನಿರ್ಲಕ್ಷ್ಯ ಮಾಡಿದ್ದಾರೆ' ಎಂದು ಅವರು ದೂರಿದ್ದಾರೆ.

'ರಾಜು ಕಪನೂರು ₹15 ಲಕ್ಷಕ್ಕೂ ಅಧಿಕ ಹಣ ತೆಗೆದುಕೊಂಡು ಟೆಂಡರ್ ನೀಡದೆ ವಂಚನೆ ಮಾಡಿದ್ದಾನೆ. ಅಲ್ಲದೇ, ₹1 ಕೋಟಿ ನೀಡುವಂತೆ ಒತ್ತಡ, ಕೊಲೆ ಬೆದರಿಕೆ ಹಾಕಲಾಗಿದೆ ಎಂದು ಮರಣಪತ್ರದಲ್ಲಿ ಉಲ್ಲೇಖವಾಗಿದೆ. ಕಲಬುರಗಿಯ ಮಾಜಿ ಕಾರ್ಪೊರೇಟರ್ ರವಿ ಕಪನೂರು, ನಂದಕುಮಾರ್ ನಾಗಭುಜಂಗೆ, ಗೋರಖನಾಥ್ ಸೇರಿ 6 ಜನರ ವಿರುದ್ಧ ಜೀವ ಬೆದರಿಕೆ ಆರೋಪ ಮಾಡಲಾಗಿದೆ. ಇಂತಹ ಗೂಂಡಾಗಳನ್ನು ಆಪ್ತರನ್ನಾಗಿ ಇಟ್ಟುಕೊಂಡ ಸಚಿವರೂ ಕೂಡ ಹೊಣೆಗಾರರೇ' ಎಂದು ಕಿಡಿಕಾರಿದ್ದಾರೆ.

'ರಾಜು ಕಪನೂರು ಹಿಂದೆ ಅಕ್ರಮ ಪಿಸ್ತೂಲ್ ಹೊಂದಿದ್ದ ಆರೋಪದಲ್ಲಿ ಬಂಧಿತನಾಗಿದ್ದ. ಇಂತಹ ಗೂಂಡಾ, ಸಚಿವರ ಆಪ್ತ ಎಂದರೆ ನಮ್ಮ ರಾಜ್ಯದಲ್ಲಿ ಗೂಂಡಾಗಳು, ರೌಡಿಗಳ ಸರ್ಕಾರ ನಡೆಯುತ್ತಿದೆ ಎಂದರ್ಥ' ಎಂದು ಅಶೋಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಸಿಬಿಐ ತನಿಖೆ ನಡೆಯಲಿ: ವಿಜಯೇಂದ್ರ

'ಬಿಜೆಪಿ ನಾಯಕರ ಹತ್ಯೆ ನಡೆಸಲು ರಾಜು ಕಪನೂರ್‌ಗೆ ಸುಪಾರಿ ನೀಡಿರುವ ಗಂಭೀರ ಆರೋಪ ಕೇಳಿ ಬಂದಿದ್ದು, ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದ್ದಾರೆ.

'ನಮ್ಮ ಪಕ್ಷದ ಶಾಸಕ ಬಸವರಾಜ್ ಮತ್ತಿಮಡು, ಬಿಜೆಪಿ ನಾಯಕರಾದ ಚಂದು ಪಾಟೀಲ, ಮಣಿಕಂಠ ರಾಥೋಡ್ ಮತ್ತು ಆಂದೋಲ ಸ್ವಾಮೀಜಿಯವರ ಹತ್ಯೆಗಾಗಿ ರಾಜು ಕಪನೂರುಗೆ ಸುಪಾರಿ ನೀಡಿರುವ ಅಂಶ ಸಚಿನ್ ಬರೆದಿರುವ ಮರಣ ಪತ್ರದಲ್ಲಿರುವುದು ಬಹಿರಂಗವಾಗಿದೆ. ಇದು ಆತಂಕಕಾರಿ ಸಂಗತಿ' ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ದೆಹಲಿಯಲ್ಲಿ ಪ್ರಜಾಪ್ರಭುತ್ವ ಉಳಿಸುವ ಕಾರ್ಯದಲ್ಲಿ ಮಲ್ಲಿಕಾರ್ಜುನ ಖರ್ಗೆ ನಿರತರಾಗಿದ್ದರೆ, ಅವರ ಹಿತ್ತಲಿನ ರಿಪಬ್ಲಿಕ್ ಆಫ್ ಕಲಬುರ್ಗಿಯಲ್ಲಿ ಅವರ ಪುತ್ರ ಪ್ರಿಯಾಂಕ್ ಏನು ಮಾಡುತ್ತಿದ್ದಾರೆಂದು ಅವರಿಗೆ ತಿಳಿದಿಲ್ಲ

ಲಹರ್ ಸಿಂಗ್ ಸಿರೋಯಾ, ರಾಜ್ಯಸಭಾ ಸದಸ್ಯ

ಸಂಕ್ಷಿಪ್ತ ಸುದ್ದಿ

ಮತ್ತಿಬ್ಬರು ಅಯ್ಯಪ್ಪ ಮಾಲಾಧಾರಿಗಳ ಸಾವು

ಹುಬ್ಬಳ್ಳಿ: ಅಡುಗೆ ಅನಿಲ ಸಿಲಿಂಡರ್ ಸ್ಫೋಟದಿಂದ ತೀವ್ರ ಗಾಯಗೊಂಡು ಇಲ್ಲಿನ ಕೆಎಂಸಿ–ಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅಯ್ಯಪ್ಪ ಮಾಲಾಧಾರಿಗಳಲ್ಲಿ ಭಾನುವಾರ ಮತ್ತೆ ಇಬ್ಬರು ಮೃತಪಟ್ಟಿದ್ದಾರೆ. ಇದರೊಂದಿಗೆ ಸಾವನ್ನಪ್ಪಿದವರ ಸಂಖ್ಯೆ 6ಕ್ಕೆ ಏರಿದೆ.

ಇಲ್ಲಿನ ಉಣಕಲ್ ಸಾಯಿ ನಗರದ ನಿವಾಸಿಗಳಾದ ಶಂಕರ ಚವ್ಹಾಣ್(29) ಮತ್ತು ಮಂಜುನಾಥ ವಾಘ್ಮೋಡೆ(22) ಮೃತರು. 'ಆಸ್ಪತ್ರೆಯಲ್ಲಿ ಸದ್ಯಕ್ಕೆ ವಿನಾಯಕ (12) ಚೇತರಿಸಿಕೊಳ್ಳುತ್ತಿದ್ದು, ಇನ್ನೂ ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಎಲ್ಲರಿಗೂ ಅಗತ್ಯ ಚಿಕಿತ್ಸೆ ಮುಂದುವರಿದಿದೆ' ಎಂದು ಆಸ್ಪತ್ರೆಯ ನಿರ್ದೇಶಕ ಡಾ. ಎಸ್.ಎಫ್.ಕಮ್ಮಾರ ತಿಳಿಸಿದ್ದಾರೆ.

ಜಿಲೆಟಿನ್ ಸ್ಫೋಟಿಸಿಕೊಂಡು ಯುವಕ ಆತ್ಮಹತ್ಯೆ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕಾಳೇನಹಳ್ಳಿ ಗ್ರಾಮದಲ್ಲಿ ಭಾನುವಾರ ನಸುಕಿನಲ್ಲಿ ಯುವಕನೊಬ್ಬ ತಾನು ಪ್ರೀತಿಸಿದ್ದ ಬಾಲಕಿಯ ಮನೆ ಮುಂದೆಯೇ ಜಿಲೆಟಿನ್ ಕಡ್ಡಿ ಸ್ಫೋಟಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ರಾಮಚಂದ್ರ

ಹೊನಕೆರೆ ಹೋಬಳಿಯ ಬಸವೇಶ್ವರ ನಗರ ನಿವಾಸಿ ರಾಮಚಂದ್ರ (21) ಮೃತ ಯುವಕ. ಕಲ್ಲು ಗಣಿಗಾರಿಕೆಗೆ ಬಳಸುವ ಜಿಲೆಟಿನ್ ಸ್ಫೋಟಿಸಿಕೊಂಡು ಈತ ಮೃತಪಟ್ಟಿದ್ದಾನೆ. 'ವರ್ಷದ ಹಿಂದೆ ರಾಮಚಂದ್ರ ಬಾಲಕಿಯನ್ನು ಪ್ರೀತಿಸುತ್ತಿದ್ದ. ಆಕೆ ಅಪ್ರಾಪ್ತ ವಯಸ್ಕಳಾದ ಕಾರಣ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿತ್ತು. 3 ತಿಂಗಳು ಜೈಲು ವಾಸದ ಬಳಿಕ ಆತ ಬಿಡುಗಡೆ ಆಗಿದ್ದು, ರಾಜಿ ಸಂಧಾನದೊಂದಿಗೆ ಪ್ರಕರಣ ಅಂತ್ಯವಾಗಿತ್ತು' ಎಂದು ಪೊಲೀಸರು ಮಾಹಿತಿ ನೀಡಿದರು.

ದೂರು ಪರಿಶೀಲಿಸಿ ಕ್ರಮ: ಹೊರಟ್ಟಿ

ದಾವಣಗೆರೆ: 'ಸದನದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಏಳು ಪುಟಗಳ ದೂರು ನೀಡಿದ್ದಾರೆ. ಸಚಿವೆ ಲಕ್ಷ್ಮೀ ಹೆಬ್ಬಾಳಕರ ಕೂಡ ದೂರು ಕೊಡುವುದಾಗಿ ಹೇಳಿದ್ದಾರೆ. ಇಬ್ಬರ ದೂರು ಪರಿಶೀಲಿಸಿ ಸದನದ ಪರಿಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು' ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಬಸವರಾಜ ಹೊರಟ್ಟಿ

'ಡಿ.19ರಂದು ಸದನದಲ್ಲಿ ನಡೆದ ಬೆಳವಣಿಗೆಯನ್ನು ಗಮನಿಸಿದ್ದೇನೆ. ದಾಖಲೆಗಳನ್ನು ಪರಿಶೀಲಿಸಿದ್ದೇನೆ. ಇದನ್ನು ಬೆಳೆಸುವುದರಲ್ಲಿ ಅರ್ಥವಿಲ್ಲ. ಇದು ಇಲ್ಲಿಗೆ ಮುಗಿಯಲಿ ಎಂಬುದು ನನ್ನ ಅಪೇಕ್ಷೆ' ಎಂದು ಭಾನುವಾರ ಸುದ್ದಿಗಾರರಿಗೆ ಹೇಳಿದರು.

'ವಿಧಾನಪರಿಷತ್‌ನಲ್ಲಿ ಇರುವ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿನ ದೃಶ್ಯ ಹಾಗೂ ಆಡಿಯೊಗಳೇ ಅಧಿಕೃತ ದಾಖಲೆಗಳು. ಖಾಸಗಿ ಸುದ್ದಿವಾಹಿನಿಯಲ್ಲಿ ಬಿತ್ತರವಾದ ದೃಶ್ಯಗಳ ಬಗ್ಗೆ ಮಾಹಿತಿ ಇಲ್ಲ. ಈ ದೃಶ್ಯಗಳನ್ನು ನೀಡಿದರೆ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ಖಚಿತ ಪಡಿಸಿಕೊಳ್ಳಲಾಗುವುದು' ಎಂದರು.

ನಿಧನ ವಾರ್ತೆ

ಸಂಸ್ಕೃತ ಪಂಡಿತ ಪಿಯರ್ ಸಿಲ್ವನ್ ಫಿಲಿಯೋಜಾ

ಮೈಸೂರು: ಇಲ್ಲಿನ ಯಾದವಗಿರಿ ನಿವಾಸಿ, ಫ್ರಾನ್ಸ್ ಮೂಲದ ಸಂಸ್ಕೃತ ಪಂಡಿತ ಪಿಯರ್ ಸಿಲ್ವನ್ ಫಿಲಿಯೋಜಾ (89) ಫ್ರಾನ್ಸ್‌ನ ರಾಜಧಾನಿ ಪ್ಯಾರಿಸ್‌ನಲ್ಲಿ ಶನಿವಾರ ನಿಧನರಾದರು.

ವಯೋಸಹಜ ಅನಾರೋಗ್ಯದಿಂದ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಅವರನ್ನು ಈಚೆಗೆ ಏರ್‌ಲಿಫ್ಟ್ ಮೂಲಕ ಸ್ಥಳಾಂತರಿಸಿ ಪ್ಯಾರಿಸ್‌ನ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಅವರಿಗೆ ಪತ್ನಿ, ಧಾರವಾಡದ ಇತಿಹಾಸ ತಜ್ಞೆ ವಸುಂಧರಾ ಕವಲಿ ಫಿಲಿಯೋಜಾ, ಇಬ್ಬರು ಪುತ್ರಿಯರು ಇದ್ದಾರೆ. ಪ್ಯಾರಿಸ್‌ನಲ್ಲೇ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಂದೆ ಜಾನ್ ಫಿಲಿಯೋಜಾ ಮಾರ್ಗದರ್ಶನದಲ್ಲಿ ಐದು ದಶಕಗಳ ಕಾಲ ಸಂಸ್ಕೃತ ವ್ಯಾಕರಣ ಮತ್ತು ಶೈವಾಗಮವನ್ನು ಅಧ್ಯಯನ ಮಾಡಿದ್ದ ಅವರು, ಹಂಪಿ, ಬಾದಾಮಿ ಚಾಲುಕ್ಯರು, ಕಲ್ಯಾಣದ ಚಾಲುಕ್ಯರ ದೇವಾಲಯಗಳ ಬಗ್ಗೆ 'ಹಂಪಿ ಸೇಕ್ರೆಡ್ ಇಂಡಿಯಾ, ಗ್ಲೋರಿಯಸ್ ಇಂಡಿಯಾ' ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದರು. ಸಂಸ್ಕೃತ, ಫ್ರೆಂಚ್ ಹಾಗೂ ಇಂಗ್ಲಿಷ್‌ನಲ್ಲಿ ಕೃತಿಗಳನ್ನು ಬರೆದಿದ್ದರು. ಜೀವನದ ಬಹುಕಾಲವನ್ನು ಭಾರತದಲ್ಲೇ ಕಳೆದಿದ್ದರು. 2024ರ ಜನವರಿಯಲ್ಲಿ ಕೇಂದ್ರ ಸರ್ಕಾರದ 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದರು.

ಆರ್ಥಿಕ ಸಂಕಷ್ಟ, ಕೌಟುಂಬಿಕ ಕಲಹ ಸೇರಿ ವಿವಿಧ ಕಾರಣಗಳಿಂದ ಮಾನಸಿಕ ಅನಾರೋಗ್ಯ ಸಮಸ್ಯೆ ಹೆಚ್ಚಳ

5 ವರ್ಷದಲ್ಲಿ 47.89 ಲಕ್ಷ ಮಂದಿಗೆ 'ಮನೋವ್ಯಾಧಿ' ಚಿಕಿತ್ಸೆ

• ವರುಣ ಹೆಗಡೆ

ಬೆಂಗಳೂರು: ಆರ್ಥಿಕ ಸಂಕಷ್ಟ, ನಿರುದ್ಯೋಗ, ಕೌಟುಂಬಿಕ ಕಲಹ ಸೇರಿ ವಿವಿಧ ಕಾರಣಗಳಿಂದ ಮಾನಸಿಕ ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುವವರ ಸಂಖ್ಯೆ ರಾಜ್ಯದಲ್ಲಿ ಹೆಚ್ಚಳವಾಗುತ್ತಿದ್ದು, ಮನೋವ್ಯಾಧಿಗೆ ಸಂಬಂಧಿಸಿದಂತೆ ಐದು ವರ್ಷಗಳಲ್ಲಿ 47.89 ಲಕ್ಷ ಜನರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸಮಾಲೋಚನೆ ಹಾಗೂ ಚಿಕಿತ್ಸೆ ಒದಗಿಸಲಾಗಿದೆ.

ಆರೋಗ್ಯ ಇಲಾಖೆಯು ಮಾನಸಿಕ ಆರೋಗ್ಯ ಕಾರ್ಯಕ್ರಮಗಳಡಿ ಸರ್ಕಾರಿ ಆಸ್ಪತ್ರೆಗಳಲ್ಲಿ ಆಪ್ತ ಸಮಾಲೋಚನೆ ಹಾಗೂ ಚಿಕಿತ್ಸೆ ನೀಡುತ್ತಿದೆ. ಎಲ್ಲ ಜಿಲ್ಲಾ ಆಸ್ಪತ್ರೆಗಳು ಹಾಗೂ ಸರ್ಕಾರಿ ವೈದ್ಯಕೀಯ ಸಂಸ್ಥೆಗಳಲ್ಲಿ ಮನೋವೈದ್ಯಕೀಯ ಸೇವೆ ಒದಗಿಸಲಾಗುತ್ತಿದೆ. ತಾಲ್ಲೂಕು ಆಸ್ಪತ್ರೆಗಳಲ್ಲಿ 'ಮನೋಚೈತನ್ಯ' ಕಾರ್ಯಕ್ರಮದ ಮೂಲಕ ಆಯ್ದ ಮಂಗಳವಾರ ಹಾಗೂ ಶುಕ್ರವಾರ ತಜ್ಞ ಮನೋವೈದ್ಯರ ತಂಡವು ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ನೀಡುತ್ತಿವೆ. ಇದಲ್ಲದೆ, 'ಕ್ಷೇಮ' ಸೇರಿದಂತೆ ವಿವಿಧ ಕಾರ್ಯಕ್ರಮಗಳಡಿ ಮಾನಸಿಕ ಅಸ್ವಸ್ಥರಿಗೆ ಆರೋಗ್ಯ ಇಲಾಖೆಯು ಚಿಕಿತ್ಸೆಯ ಜತೆಗೆ ಪುನರ್ವಸತಿ ಒದಗಿಸುತ್ತಿದೆ. ಇದರಿಂದಾಗಿ ಅಧಿಕ ಸಂಖ್ಯೆಯಲ್ಲಿ ಮಾನಸಿಕ ಅನಾರೋಗ್ಯ ಪ್ರಕರಣಗಳು ದೃಢಪಡುತ್ತಿದ್ದು, ಇಲಾಖೆ ಪ್ರಕಾರ ಎಲ್ಲ ವಯೋಮಾನದವರಲ್ಲಿಯೂ ಈ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ.

ಮಾನಸಿಕ ಅನಾರೋಗ್ಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಸೇರಿ ವಿವಿಧ ಸಂಸ್ಥೆಗಳು ಜಾಗೃತಿ ಮೂಡಿಸುತ್ತಿವೆ. ನಿಮ್ಹಾನ್ಸ್ 'ಟೆಲಿ ಮನಸ್' ಸಹಾಯವಾಣಿ (14416) ಮೂಲಕ ಉಚಿತವಾಗಿ ವಾರದ ಎಲ್ಲ ದಿನಗಳು 24 ಗಂಟೆಗಳೂ ಸಮಾಲೋಚನೆ ಒದಗಿಸಲಾಗುತ್ತಿದೆ. ಇದರಿಂದಾಗಿ ಮಾನಸಿಕ ಅಸ್ವಸ್ಥತೆ ಹಾಗೂ ಅನಾರೋಗ್ಯ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡುತ್ತಿದೆ.

ಯುವಜನರೇ ಅಧಿಕ: ನಿಮ್ಹಾನ್ಸ್ ವೈದ್ಯರ ಪ್ರಕಾರ ಖಿನ್ನತೆಯಂತಹ ಮಾನಸಿಕ ಅನಾರೋಗ್ಯ ಸಮಸ್ಯೆಗೆ ಒಳಗಾಗುತ್ತಿರುವವರಲ್ಲಿ ಯುವಜನರ ಸಂಖ್ಯೆಯೇ ಅಧಿಕ. ಉದ್ಯೋಗ ದೊರೆಯದಿರುವುದು, ಅಲ್ಪಾವಧಿಯಲ್ಲಿ ಯಶಸ್ಸು ಸಾಧಿಸುವ ಹಂಬಲ, ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ಅತಿಯಾದ ಬಳಕೆ, ನಗರೀಕರಣ, ಕೌಟುಂಬಿಕ ಸಮಸ್ಯೆ, ಒಂಟಿತನ, ವೃತ್ತಿ ಸ್ಥಳದಲ್ಲಿ ಮಾನಸಿಕ ಒತ್ತಡ ಸೇರಿ ವಿವಿಧ ಕಾರಣಗಳು ಮಾನಸಿಕ ಅನಾರೋಗ್ಯ ಸಮಸ್ಯೆಗೆ ದಾರಿ ಮಾಡಿಕೊಡುತ್ತಿವೆ. ನಿಮ್ಹಾನ್ಸ್ ಸಂಸ್ಥೆಯ ವಿಶ್ಲೇಷಣೆ ಪ್ರಕಾರ ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ಮೂರನೇ ಒಂದರಷ್ಟು ಮಂದಿ ಮಾನಸಿಕ ಕಾಯಿಲೆಗಳಿಂದ ಬಳಲುತ್ತಿರುತ್ತಾರೆ. ಉಳಿದ ಎರಡು ಭಾಗದಷ್ಟು ಮಂದಿ ಆರ್ಥಿಕ ಸಮಸ್ಯೆ ಹಾಗೂ ಕುಟುಂಬದ ಬಾಂಧವ್ಯ ಕಡಿದುಕೊಳ್ಳುವಿಕೆಯಿಂದ ಆತ್ಮಹತ್ಯೆಗೆ ಒಳಗಾಗುತ್ತಿದ್ದಾರೆ.

'ಮಾನಸಿಕ ಅನಾರೋಗ್ಯವು ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಈ ಸಮಸ್ಯೆಗೆ ಒಳಗಾದವರಲ್ಲಿ ಆತಂಕ ಹಾಗೂ ಉನ್ಮಾದ, ನಿದ್ರಾಹೀನತೆ ಮತ್ತು ದುಃಸ್ವಪ್ನಗಳು ಕಾಣಿಸಿಕೊಳ್ಳುವುದು, ಅಸುರಕ್ಷಿತ ಭಾವನೆ, ಏಕಾಗ್ರತೆ ಕಳೆದುಕೊಳ್ಳುವುದು, ಉದ್ಯೋಗದಲ್ಲಿ ಆಸಕ್ತಿ ಕಳೆದುಕೊಳ್ಳುವುದು ಸೇರಿ ವಿವಿಧ ಸಾಮಾನ್ಯ ಲಕ್ಷಣಗಳನ್ನು ಗುರುತಿಸಬಹುದಾಗಿದೆ.

ಈ ಲಕ್ಷಣಗಳ ಅನುಸಾರ ಸಮಸ್ಯೆ ಗುರುತಿಸಿ, ಚಿಕಿತ್ಸೆ ಒದಗಿಸಬೇಕು' ಎಂದು ನಿಮ್ಹಾನ್ಸ್ ವೈದ್ಯರು 'ಪ್ರಜಾವಾಣಿ'ಗೆ ತಿಳಿಸಿದರು.

ಮುಖ್ಯಾಂಶಗಳು

- ಜಿಲ್ಲಾ ಆಸ್ಪತ್ರೆಗಳು, ಸರ್ಕಾರಿ ವೈದ್ಯಕೀಯ ಸಂಸ್ಥೆಗಳಲ್ಲಿ ಮನೋವೈದ್ಯಕೀಯ ಸೇವೆ
- ಎಲ್ಲಾ ವಯೋಮಾನದವರಲ್ಲಿಯೂ ಕಂಡು ಬರುವ ಸಮಸ್ಯೆ
- ಕೌಟುಂಬಿಕ ಸಮಸ್ಯೆ, ಒಂಟಿತನ, ಮಾನಸಿಕ ಒತ್ತಡ ಸೇರಿ ಹಲವು ಕಾರಣ

ಮಾನಸಿಕ ಅನಾರೋಗ್ಯಕ್ಕೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ

ವರ್ಷ	ಚಿಕಿತ್ಸೆ ಪಡೆದವರು
2019-20	10,63,242
2020-21	9,02,040
2021-22	8,65,386
2022-23	9,40,514
2023-24	10,18,75

ಮಕ್ಕಳು, ಹದಿಹರೆಯದವರಲ್ಲೂ ಸಮಸ್ಯೆ

ಶೈಕ್ಷಣಿಕ ಒತ್ತಡ, ಪರೀಕ್ಷೆ, ಅತಿಯಾಗಿ ಡಿಜಿಟಲ್ ಸಾಧನಗಳ ಬಳಕೆ ಸೇರಿ ವಿವಿಧ ಕಾರಣಗಳಿಂದ ಮಕ್ಕಳು ಹಾಗೂ ಹದಿಹರೆಯದವರಲ್ಲೂ ಮಾನಸಿಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಕಳೆದ ಮೂರು ವರ್ಷಗಳಲ್ಲಿ 28.24 ಲಕ್ಷ ಮಾನಸಿಕ ಅನಾರೋಗ್ಯ ಪ್ರಕರಣಗಳು ವರದಿಯಾಗಿವೆ. ಅವುಗಳಲ್ಲಿ 1.36 ಲಕ್ಷ ಮಂದಿ ಮಕ್ಕಳು ಹಾಗೂ ಹದಿಹರೆಯದವರಾಗಿದ್ದಾರೆ.

'ಪರೀಕ್ಷೆಗಳಲ್ಲಿ ಅಧಿಕ ಅಂಕ ಪಡೆಯುವಂತೆ ಪಾಲಕರು ಒತ್ತಡ ಹೇರುತ್ತಿರುವುದರಿಂದ ಮಕ್ಕಳಲ್ಲಿ ಸಹ ಮಾನಸಿಕ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಆಗಾಗ ಸಿಟ್ಟು ಮಾಡಿಕೊಂಡು ಕಿರುಚಾಟ ನಡೆಸುವುದು, ನಿರಂತರ ಹಟ ಮಾಡುವುದು ಕೂಡಾ ಮಾನಸಿಕ ಕಾಯಿಲೆಯ ಸ್ವರೂಪವಾಗಿದೆ.

ಪೋಷಕರು ಮಕ್ಕಳಲ್ಲಿನ ಬದಲಾವಣೆಯನ್ನು ಗುರುತಿಸಿ, ಅವರ ಬೇಕು ಬೇಡಗಳನ್ನು ಅರಿತುಕೊಳ್ಳಬೇಕು. ಈ ಮೂಲಕ ಮುಂದೆ ಆಗಬಹುದಾದ ಅನಾಹುತ ತಡೆಯಲು ಸಾಧ್ಯ' ಎಂದು ನಿಮ್ಹಾನ್ಸ್ ವೈದ್ಯರು ತಿಳಿಸಿದರು.

ಒತ್ತಡದ ಪರಿಸ್ಥಿತಿ ಇರುವುದರಿಂದ ಹಾಗೂ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡುತ್ತಿರುವುದರಿಂದ ಖಿನ್ನತೆಯಂತಹ ಸಮಸ್ಯೆಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ

ಡಾ. ಶಶಿಧರ್ ಎಚ್.ಎನ್., ನಿಮ್ಹಾನ್ಸ್‌ನ ಸ್ಥಾನಿಕ ವೈದ್ಯಾಧಿಕಾರಿ (ಆರ್‌ಎಂಒ)

'ಮಹಾ ಅಧಿವೇಶನ: ಸಿಂಗ್ ಫೋಟೊ ಹಾಕಿದ್ರಾ?'

ಬೆಂಗಳೂರು: 'ಬೆಳಗಾವಿಯಲ್ಲಿ ಇತ್ತೀಚೆಗೆ ನಡೆದ ಕಾಂಗ್ರೆಸ್ ಮಹಾ-ಅಧಿವೇಶನದಲ್ಲಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಫೋಟೊ ಹಾಕಿದ್ದರಾ' ಎಂದು ಸಂಸದ ಗೋವಿಂದ ಕಾರಜೋಳ ಪ್ರಶ್ನಿಸಿದ್ದಾರೆ.

'ಮನಮೋಹನ್ ಸಿಂಗ್ ಅವರ ನಿಧನದ ಸಂದರ್ಭದಲ್ಲೂ ಕಾಂಗ್ರೆಸ್ ಪಕ್ಷ ಕೆಳ ಮಟ್ಟದ ರಾಜಕೀಯ ಮಾಡುತ್ತಿದೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಮನಮೋಹನ ಸಿಂಗ್ ಅವರ ಸಮಾಧಿ ಮತ್ತು ಸ್ಮಾರಕಕ್ಕೆ ಜಾಗ ನೀಡುವುದಾಗಿ ಪ್ರಧಾನಿ ಹೇಳಿದ್ದಾರೆ. ಅಷ್ಟರಲ್ಲೇ ಕಾಂಗ್ರೆಸ್ ನಾಯಕರು ಮನಮೋಹನ ಸಿಂಗ್ ಅವರಿಗೆ ಅವಮಾನ ಮಾಡಿದ್ದಾರೆ ಎಂದು ತಪ್ಪು ಸಂದೇಶ ನೀಡುತ್ತಿದ್ದಾರೆ. ಅವರು ಬದುಕಿದ್ದಾಗ ಗೌರವದಿಂದ ನಡೆಸಿಕೊಳ್ಳದ ಕಾಂಗ್ರೆಸ್ ನಾಯಕರು ಅವರು ಮೃತಪಟ್ಟ ಬಳಿಕ ರಾಜಕಾರಣಕ್ಕಾಗಿ ನೆನಪು ಮಾಡಿಕೊಳ್ಳುತ್ತಿದ್ದಾರೆ' ಎಂದರು.

'ಸಮಾಧಿ ಮತ್ತು ಸ್ಮಾರಕಕ್ಕೆ ಜಾಗ ನೀಡುವುದಾಗಿ ಪ್ರಧಾನಿ ಹೇಳಿದ್ದಾರೆ. ಅದಕ್ಕೆ ಟ್ರಸ್ಟ್ ಮಾಡಬೇಕು. ಅವುಗಳನ್ನು ಎಲ್ಲಿ ನಿರ್ಮಿಸಬೇಕು ಎಂಬ ನಿಯಮಾವಳಿಯೂ ಇದೆ. ಆ ಪ್ರಕಾರವೇ ನಡೆಯುತ್ತದೆ' ಎಂದು ಕಾರಜೋಳ ಹೇಳಿದರು.

'ಕಾಂಗ್ರೆಸ್ ಪಕ್ಷದಲ್ಲಿ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಸರ್ವಾಧಿಕಾರಿಗಳು. ಮಲ್ಲಿಕಾರ್ಜುನ ಖರ್ಗೆ, ಸುರ್ಜೇವಾಲ, ವೇಣುಗೋಪಾಲ್ ಉತ್ಸವ ಮೂರ್ತಿಗಳು ಅಷ್ಟೇ. ಉತ್ಸವಮೂರ್ತಿಗಳ ಮಾತುಗಳು ನಡೆಯುವುದಿಲ್ಲ' ಎಂದು ಅವರು ವ್ಯಂಗ್ಯವಾಡಿದರು.

ಜೋಗ ಜಲಪಾತ ವೀಕ್ಷಣೆಗೆ ಇಲ್ಲ ನಿರ್ಬಂಧ

ಪ್ರಜಾವಾಣಿ ವಾರ್ತೆ

ಕಾರ್ಗಲ್ (ಶಿವಮೊಗ್ಗ): ಜೋಗ ನಿರ್ವಹಣಾ ಪ್ರಾಧಿಕಾರದ ಪ್ರವೇಶ ದ್ವಾರ ಬಿಟ್ಟು ಉಳಿದ ಸ್ಥಳಗಳಿಂದ ಜೋಗ ಜಲಪಾತ ವೀಕ್ಷಿಸಲು ಪ್ರವಾಸಿಗರಿಗೆ ಅವಕಾಶ ಕಲ್ಪಿಸಲಾಗಿದೆ.

ಮುಖ್ಯ ರಸ್ತೆಯ ವೀವ್ ಪಾಯಿಂಟ್, ಯಾತ್ರಿ ನಿವಾಸ, ರಾಣಿ ಫಾಲ್ಸ್, ಮುಂಬಯಿ ಬಂಗಲೆ, ಮುಂಗಾರು ಮಳೆ ಪಾಯಿಂಟ್ ಸೇರಿದಂತೆ ಇತರೆ ಸ್ಥಳಗಳಿಂದ ಪ್ರವಾಸಿಗರು ಜಲಪಾತದ ಸೊಬಗು ಕಣ್ತುಂಬಿಕೊಳ್ಳಬಹುದು ಎಂದು ಭಾನುವಾರ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಸಂಗ್ರಹ ಚಿತ್ರ

ಜೋಗ ಜಲಪಾತದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಜಲಪಾತ ವೀಕ್ಷಿಸಲು ತೆರಳುವ ಮುಖ್ಯ ಪ್ರವೇಶ ದ್ವಾರದ ಗೋಪುರ ನಿರ್ಮಾಣ ಕಾಮಗಾರಿಯೂ ಪ್ರಗತಿಯಲ್ಲಿದೆ. ಆದ್ದರಿಂದ ಜ.1ರಿಂದ ಮಾರ್ಚ್ 15ರವರೆಗೆ ಪ್ರವಾಸಿಗರಿಗೆ ನಿರ್ಬಂಧ ಹೇರಿ ಜಿಲ್ಲಾಧಿಕಾರಿ ಈಚೆಗೆ ಆದೇಶ ಹೊರಡಿಸಿದ್ದರು.

ಪ್ರತಿ ವರ್ಷ ಡಿಸೆಂಬರ್ ಕೊನೆಯ ವಾರದಲ್ಲಿ ಜೋಗದಲ್ಲಿ ಪ್ರವಾಸಿಗರ ದಟ್ಟಣೆ ಕಂಡುಬರುತ್ತಿತ್ತು. ಈ ಬಾರಿ ನಿರ್ಬಂಧದ ಆದೇಶ ಜಾರಿಗೊಳ್ಳುವ ಮುನ್ನವೇ ಪ್ರವಾಸಿಗರ ಸಂಖ್ಯೆಯಲ್ಲಿ ಇಳಿಕೆಯಾಗಿತ್ತು. ತಳಕಳಲೆ ಜಂಗಲ್ ಲಾಡ್ಜ್ ರೆಸಾರ್ಟ್, ಮುಪ್ಪಾನೆ ನೇಚರ್ ಕ್ಯಾಂಪ್, ವಡನ್ ಬೈಲು ಬಳೆ ಪದ್ಮಾವತಿ ದೇವಸ್ಥಾನ, ಕಾರ್ಗಲ್ ಚೌಡೇಶ್ವರಿ ದೇವಸ್ಥಾನ, ದ್ವಿಮುಖ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡುತ್ತಿದ್ದ ಪ್ರವಾಸಿಗರ ಸಂಖ್ಯೆಯೂ ತಗ್ಗಿತ್ತು.

'ಮುಖ್ಯ ಪ್ರವೇಶ ದ್ವಾರ ಬಿಟ್ಟು ಉಳಿದ ಸ್ಥಳಗಳಲ್ಲಿ ತಡೆಬೇಲಿಗಳನ್ನು ನಿರ್ಮಿಸಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಭದ್ರತಾ ಸಿಬ್ಬಂದಿಯನ್ನೂ ನೇಮಿಸಿ ಜಲಪಾತ ವೀಕ್ಷಣೆಗೆ ಅನುವು ಮಾಡಿಕೊಡಲಾಗಿದೆ' ಎಂದು ಪ್ರವಾಸೋದ್ಯಮ ಇಲಾಖೆಯ ಜಂಟಿ ಕಾರ್ಯದರ್ಶಿ ಧರ್ಮಪ್ಪ ತಿಳಿಸಿದ್ದಾರೆ.

ಬಿಜೆಪಿ ಆಂದೋಲನಾ ಸಮಿತಿ ರಚನೆ

ಬೆಂಗಳೂರು: ರಾಜ್ಯದಲ್ಲಿ ಸರಣಿ ಆತ್ಮಹತ್ಯೆ ನಡೆದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ, ಮಾಹಿತಿ ಕಲೆ ಹಾಕಿ ವರದಿ ಪಡೆಯುವ ಮತ್ತು ಹೋರಾಟ ರೂಪಿಸುವ ಉದ್ದೇಶದಿಂದ 'ಆಂದೋಲನಾ ಸಮಿತಿಯನ್ನು ರಚಿಸಲಾಗಿದೆ.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಆರಗ ಜ್ಞಾನೇಂದ್ರ, ಎನ್.ಮಹೇಶ್, ಅಶ್ವತ್ಥನಾರಾಯಣಗೌಡ, ಬಸವರಾಜ ಮತ್ತಿಮೂಡ್, ಎನ್.ರವಿಕುಮಾರ್ ಸೇರಿ 17 ಮಂದಿ ಸಮಿತಿಯಲ್ಲಿದ್ದಾರೆ. ಬಾಣಂತಿಯರು ಮತ್ತು ನವಜಾತ ಶಿಶುಗಳ ಸರಣಿ ಸಾವಿನ ಸತ್ಯಶೋಧನೆಗಾಗಿ ತಂಡವನ್ನು ರಚಿಸಲಾಗಿದ್ದು, ಡಾ.ಶೈಲೇಂದ್ರ ಬೆಲ್ದಾಳೆ, ಡಾ.ಅವಿನಾಶ್ ಜಾಧವ್, ಡಾ.ಚಂದ್ರು ಲಮಾಣಿ, ಡಾ.ಅಶ್ವಿನಿಗೌಡ, ಡಾ.ಬಸವರಾಜ್ ಕೇಲಗಾರ ಸೇರಿ 15 ಮಂದಿ ತಂಡದಲ್ಲಿದ್ದಾರೆ.

ಸುಧಾ
ಮಯೂರ
ಓದಿರಿ

ಮೂಲತ್ವ ವಿಶ್ವ ಪ್ರಶಸ್ತಿ ಸ್ವೀಕರಿಸಿದ ಮುಳುಗು ತಜ್ಞ ಈಶ್ವರ್ ಮಲ್ಪೆ ಸಲಹೆ

ಶಾಲೆಗಳಲ್ಲಿ ಈಜು ಕಲಿಕೆ ಕಡ್ಡಾಯವಾಗಲಿ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಉಳ್ಳಾಲದ ರೆಸಾರ್ಟ್‌ನ ಪುಟ್ಟ ಈಜು ಕೊಳದಲ್ಲಿ ಈಚೆಗೆ ಮೂವರು ಯುವತಿಯರು ಈಜು ಬಾರದೇ ಮೃತ ಪಟ್ಟರು. ಅಲ್ಲಲ್ಲಿ ಮರುಕಳಿಸುವ ಇಂತಹ ಘಟನೆಗಳನ್ನು ತಪ್ಪಿಸಲು ಪ್ರತಿ ಶಾಲೆಯೂ ಈಜುಕೊಳ ಹೊಂದಬೇಕು. ಶಾಲಾ ಹಂತದಲ್ಲಿ ಈಜು ಕಲಿಕೆಯನ್ನು ಕಡ್ಡಾಯಗೊಳಿಸಬೇಕು' ಎಂದು ಮುಳುಗು ತಜ್ಞ ಈಶ್ವರ ಮಲ್ಪೆ ಹೇಳಿದರು.

ಇಲ್ಲಿನ ಮೂಲತ್ವ ಫೌಂಡೇಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ ನೀಡುವ 10ನೇ ವರ್ಷದ 'ಮೂಲತ್ವ ವಿಶ್ವ ಪ್ರಶಸ್ತಿ- 2024' ಸ್ವೀಕರಿಸಿ ಅವರು ಮಾತಮಾಡಿದರು.

'ಶಾಲೆಯಲ್ಲಿ ಎಲ್ಲ ರೀತಿಯ ಪಾಠಗಳನ್ನೂ ಕಲಿಸಲಾಗುತ್ತದೆ. ಆದರೆ ಜೀವ ರಕ್ಷಣೆಗೆ ಅಗತ್ಯವಾದ ಈಜನ್ನು ಕಲಿಸುತ್ತಿಲ್ಲ. ನನ್ನ ಮೂರು ಮಕ್ಕಳೂ ಭಿನ್ನಸಾಮರ್ಥ್ಯದವರು. ಹಿರಿಯ ಮಗನನ್ನು ಈಗಾಗಲೇ ಕಳೆದು ಕೊಂಡಿದ್ದೇನೆ. ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ವೈಯಕ್ತಿಕ ಬದುಕಿನ ಬವಣೆಗಳನ್ನು ಮರೆಯಲು ಪ್ರಯತ್ನಿಸುತ್ತೇನೆ' ಎನ್ನುವಾಗ ಅವರ ಕಣ್ಣಾಲಿಗಳು ತುಂಬಿದ್ದವು.

ಈಶ್ವರ್ ಮಲ್ಪೆ ಅವರಿಗೆ ಪ್ರಶಸ್ತಿಯ ಜೊತೆಗೆ ₹1 ಲಕ್ಷ ನಗದು ಪ್ರದಾನ ಮಾಡಲಾಯಿತು.

ಮಂಗಳೂರು ಮೀನುಗಾರಿಕೆ ಕಾಲೇಜು ಡೀನ್ ಎಚ್.ಆಂಜನೇಯಪ್ಪ, ಸಾಮಾಜಿಕ ಕಾರ್ಯಕರ್ತ ರವಿ ಕಟಪಾಡಿ, ದೈಜಿವರ್ಲ್ಡ್‌ನ ವಾಲ್ಟರ್ ನಂದಳಿಕೆ, ಉಚ್ಚಿಲ ಮೊಗವೀರ ಮಹಾಸಭಾ ಉಪಾಧ್ಯಕ್ಷ ಮೋಹನ ಬೆಂಗ್ರೆ, ಟ್ರಸ್ಟಿಗಳಾದ ಕಲ್ಪನಾ ಪಿ.ಕೋಟ್ಯಾನ್, ಶೈನಿ ಲಕ್ಷ್ಮೀಶ ಪಿ.ಕೋಟ್ಯಾನ್ ಭಾಗವಹಿಸಿದ್ದರು.

ಟ್ರಸ್ಟ್‌ನ ಸಂಸ್ಥಾಪಕ ಪ್ರಕಾಶ್ ಮೂಲತ್ವ ಪ್ರಸ್ತಾವಿಕವಾಗಿ ಮಾತನಾಡಿದರು. ತೀರ್ಪುಗಾರರಲ್ಲಿ ಒಬ್ಬರಾದ ಪ್ರೊ.ರಾಜಮೋಹನ್ ರಾವ್ ಅಭಿನಂದನಾ ಪತ್ರ ವಾಚಿಸಿದರು.

ಈಶ್ವರ ಮಲ್ಪೆ ಅವರಿಗೆ ಮೂಲತ್ವ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ರಾಜಮೋಹನ್ ರಾವ್, ಮೋಹನ ಬೆಂಗ್ರೆ, ರವಿ ಕಟಪಾಡಿ, ವಾಲ್ಟರ್ ನಂದಳಿಕೆ, ಎಚ್.ಎನ್.ಆಂಜನೇಯಪ್ಪ, ಪ್ರಕಾಶ್ ಮೂಲತ್ವ, ಕಲ್ಪನಾ ಪಿ.ಕೋಟ್ಯಾನ್, ಶೈನಿ ಮೊದಲಾದವರು ಭಾಗವಹಿಸಿದ್ದರು

'ಸಾವಿನಂಚಿನಿಂದ ಬದುಕಿ ಬಂದೆ'

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಕೆಲ ತಿಂಗಳ ಹಿಂದೆ ನಡೆದ ಭೂಕುಸಿತದಿಂದ ನೀರುಪಾಲಾದವರ ಮೃತದೇಹಗಳನ್ನು ನದಿಯ ಆಳದಲ್ಲಿ ಹುಡುಕುವಾಗ ಜೀವರಕ್ಷಕ ಕವಚ ತೂತಾಗಿ ಗಾಳಿ ಖಾಲಿಯಾಗಿತ್ತು. ಮೇಲೆ ಬರಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯ ಆಗಿರಲಿಲ್ಲ. ಹೆಂಡತಿ ಮಕ್ಕಳ ಚಿತ್ರ ಕಣ್ಮುಂದೆ ಬಂದಿತ್ತು. ಧರಿಸಿದ್ದ 15 ಕೆ.ಜಿ. ತೂಕದ ಬೆಲ್ಟ್ ಕಿತ್ತೆಸೆದೆ. ಜನರ ಆಶೀರ್ವಾದ ಇದ್ದುದರಿಂದ ಸಾವಿನಂಚಿನಿಂದ ಬದುಕಿ ಬಂದೆ' ಎಂದು ಈಶ್ವರ ಮಲ್ಪೆ ವಿವರಿಸಿದರು.

NOTICE INVITING APPLICATIONS FOR ALLOTMENT OF VARIOUS REGIMENTAL SHOPS AT TRAINING BATTALION-I, MADRAS ENGINEER GROUP & CENTRE, BANGALORE

1. Applications are invited for allotment of three regimental shops at Training Battalion-1. **Madras Engineer Group & Centre, Bangalore.** Allotment will be on a rental basis to the highest bidder, prioritizing:-
   (a) War widows/widows of defense personnel killed while on duty.
   (b) Disabled Soldiers (Battle casualty).
   (c) Ex-Servicemen.
   (d) Spouse/widow of ex-servicemen.
   (e) Civilians (for only photo studio).
2. **Details of Shops are as under :-**
   (a) P-260/5, Bootmaker Shop, **213 sqft**
   (b) P-260/8, Photo Studio, **501.49 sqft**
   (c) T-108, Cafeteria, **10320 sqft.**
3. **Key Dates:-**
   (a) Application form collections **06-11 Jan 2025** (0900 hrs 1300 hrs).
   (b) Submission of applications **13-18 Jan 2025** (24 hrs)
   (c) Auction: **24 Jan 2025** (1000hrs)
4. Fee. ₹ **500/-** (refundable/ non-adjustable as applicable) via DD in favor of **"REGT FUND ACCOUNT TB I"** payable at SBI MEG & Centre, Bangalore.
5. Allotment period: **11 months**.
6. For forms and details, visit the Subedar Adjutant Office, TB-1.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ಕಾವೇರಿ–ಕಾರ್ಯಾಚರಣೆ & ನಿರ್ವಹಣೆ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	(ಕಾವೇರಿ–ಕಾ&ನಿ–1)	ಬೆಂಜಮಂ/ಕಾನಿಅ(ಕಾ–ಕಾ&ನಿ)–1/ಪಿಬಿ/2408/2024–25, ದಿನಾಂಕ: 21.12.2024	ರೂ.78.25 ಲಕ್ಷಗಳು ರೂ.1,56,500/–	13.01.2025ರ ಸಂಜೆ 4:00 ಗಂಟೆಯವರೆಗೆ	14.01.2025ರ ಸಂಜೆ 4:00 ಗಂಟೆಯ ನಂತರ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕಾವೇರಿ–ಕಾ&ನಿ–1)
2	(ಕಾವೇರಿ–ಕಾ&ನಿ–2)	ಬೆಂಜಮಂ/ಕಾನಿಅ(ಕಾ–ಕಾ&ನಿ)–2/ಪಿಬಿ/2660/2024–25, ದಿನಾಂಕ: 21.12.2024 (2ನೇ ಕರೆ)	ರೂ.68.98 ಲಕ್ಷಗಳು ರೂ.1,38,000/–	16.01.2025ರ ಸಂಜೆ 4:00 ಗಂಟೆಯವರೆಗೆ	17.01.2025ರ ಸಂಜೆ 4:00 ಗಂಟೆಯ ನಂತರ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕಾವೇರಿ–ಕಾ&ನಿ–2)

ಮುಖ್ಯ ಅಭಿಯಂತರರ ಕಚೇರಿ, (ವಿನ್ಯಾಸ ಮತ್ತು ಗುಣ ಆಶ್ವಾಸನೆ) 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
3	ಗುಣ ಆಶ್ವಾಸನೆ	ಬೆಂಜಮಂ/ಇಕ್ಯೂಎಟಿಇ/ಪಿಬಿ/1063/2024–25 ದಿನಾಂಕ:23.12.2024	ರೂ.79,92,911/– ರೂ.1,59,900/–	06.01.2025ರ ಸಂಜೆ 5:30 ಗಂಟೆಯವರೆಗೆ	08.01.2025ರ ಮಧ್ಯಾಹ್ನ 12:00 ಗಂಟೆಗೆ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಗುಣ ಆಶ್ವಾಸನೆ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/BCPL/3996/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಜಗಳ ಮಾಡಲು ಬಂದವನ ಎದುರು ಮೌನವಾಗು. ಅದು ಜಗಳದ ಬಾಗಿಲನ್ನು ಮುಚ್ಚುತ್ತದೆ.

–ಎ.ಆರ್. ಕೃಷ್ಣಶಾಸ್ತ್ರೀ

ಜಿಎಸ್‌ಟಿ ಮಂಡಳಿಯ ತೀರ್ಮಾನ ವ್ಯವಸ್ಥೆಯ ಅಸಮತೋಲನದ ಪ್ರದರ್ಶನ

ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಈಚೆಗೆ ನಡೆದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯ ಸಭೆಯು ಹಲವು ಪ್ರಮುಖ ಸಂಗತಿಗಳ ಬಗ್ಗೆ ತೀರ್ಮಾನ ಕೈಗೊಳ್ಳುವುದನ್ನು ಮುಂದೂಡಿದ್ದಕ್ಕಾಗಿ ತೀವ್ರ ಟೀಕೆಗೆ ಗುರಿಯಾಗಿದೆ. ಈ ಸಭೆಯು ಬಹಳ ಸಣ್ಣ ಸಂಗತಿಗಳ ಬಗ್ಗೆ ತೀರಾ ಸೂಕ್ಷ್ಮವಾಗಿ ಗಮನಹರಿಸಿದೆ ಎಂಬುದು ಕೂಡ ಟೀಕೆಗಳಲ್ಲಿ ಒಂದಾಗಿದೆ. ಪಾಪ್‌ಕಾರ್ನ್ ಮೇಲೆ ಬೇರೆ ಬೇರೆ ಹಂತಗಳ ತೆರಿಗೆಯನ್ನು ಜಾರಿಗೆ ತರಲು ತೀರ್ಮಾನಿಸಿರುವುದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಂಗ್ಯದ ವಸ್ತುವಾಗಿದೆ. ಉಪ್ಪುಸಹಿತ ಪಾಪ್‌ಕಾರ್ನ್‌ಗೆ ಶೇಕಡ 5ರಷ್ಟು ತೆರಿಗೆ, ಪ್ಯಾಕ್ ಆಗಿರುವ ಹಾಗೂ ಲೇಬಲ್ ಇರುವ ಪಾಪ್‌ಕಾರ್ನ್‌ಗೆ ಶೇ 12ರಷ್ಟು ಹಾಗೂ ಸಕ್ಕರೆಲೇಪಿತ ಪಾಪ್‌ಕಾರ್ನ್‌ಗೆ ಶೇ 18ರಷ್ಟು ತೆರಿಗೆ ವಿಧಿಸಲು ಮಂಡಳಿಯು ತೀರ್ಮಾನಿಸಿದೆ. ಈ ತೀರ್ಮಾನಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನೀಡಿದ ಸಮರ್ಥನೆಯು ಜಿಎಸ್‌ಟಿ ವ್ಯವಸ್ಥೆಯಲ್ಲಿ ಇರುವ ಅಸಮತೋಲನವನ್ನು ತೋರಿಸಿಕೊಡುವ ಕೆಲಸ ಮಾಡಿತು. ಕೆಲವು ಸಣ್ಣ ಉತ್ಪನ್ನಗಳಿಗೆ ಅವುಗಳಲ್ಲಿ ಏನೇನು ಇರುತ್ತವೆ ಎಂಬುದರ ಆಧಾರದಲ್ಲಿ ಹಾಗೂ ಅವುಗಳ ಪ್ಯಾಕೇಜಿಂಗ್ ಯಾವ ರೀತಿಯದ್ದು ಎಂಬುದರ ಆಧಾರದಲ್ಲಿ ತೆರಿಗೆ ದರ ತೀರ್ಮಾನ ಆಗುತ್ತಿರುವುದು ಇದೇ ಮೊದಲೇನೂ ಅಲ್ಲ. ಆದರೆ ಈ ರೀತಿಯ ತೀರ್ಮಾನಗಳು, ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸಬೇಕಿದ್ದ ವ್ಯವಸ್ಥೆಯೊಂದು ತೆರಿಗೆ ವ್ಯವಸ್ಥೆಯನ್ನು ಹೇಗೆ ಸಂಕೀರ್ಣಗೊಳಿಸಿದೆ ಎಂಬುದನ್ನು ತೋರಿಸುವ ಕೆಲಸ ಮಾಡುತ್ತಿವೆ. ಸಣ್ಣ ಸಂಗತಿಗಳ ಬಗ್ಗೆ ತೀರಾ ಹೆಚ್ಚು ಗಮನ ಕೊಡುತ್ತಿದ್ದರೆ, ದೊಡ್ಡ ಸಮಸ್ಯೆಗಳ ಬಗ್ಗೆ ಸೂಕ್ತವಾದ ನಿರ್ಧಾರಗಳನ್ನು ಸಕಾಲದಲ್ಲಿ ತೆಗೆದುಕೊಳ್ಳಲು ಆಗುವುದಿಲ್ಲ.

ಸಣ್ಣ ಸಂಗತಿಗಳ ಬಗ್ಗೆ ತೀರಾ ಹೆಚ್ಚು ಗಮನ ಕೊಡುತ್ತಿದ್ದರೆ, ದೊಡ್ಡ ಸಮಸ್ಯೆಗಳ ಬಗ್ಗೆ ಸೂಕ್ತವಾದ ನಿರ್ಧಾರಗಳನ್ನು ಸಕಾಲದಲ್ಲಿ ತೆಗೆದುಕೊಳ್ಳಲು ಆಗುವುದಿಲ್ಲ

ಪಾಪ್‌ಕಾರ್ನ್ ಮೇಲಿನ ತೆರಿಗೆ ದರಗಳನ್ನು ನಿಗದಿ ಮಾಡುವುದಷ್ಟೇ ಅಲ್ಲದೆ, ಜಿಎಸ್‌ಟಿ ಮಂಡಳಿಯು ಇತರ ಕೆಲವು ತೀರ್ಮಾನಗಳನ್ನು ಕೂಡ ತೆಗೆದುಕೊಂಡಿದೆ. ಸಾಲದ ನಿಯಮಗಳನ್ನು ಪಾಲಿಸದೇ ಇರುವವರಿಗೆ ವಿಧಿಸುವ ದಂಡದ ಮೇಲೆ ಜಿಎಸ್‌ಟಿ ಇರಬಾರದು ಎಂದು ಮಂಡಳಿ ತೀರ್ಮಾನ ತೆಗೆದುಕೊಂಡಿದೆ. ತೆರಿಗೆಗಳು ಜೀವನದ ವಾಸ್ತವ. ವಿನಾಯಿತಿ ಇರುವುವನ್ನು ಹೊರತುಪಡಿಸಿ, ಇತರ ಎಲ್ಲ ಸೇವೆಗಳು ಹಾಗೂ ಸರಕುಗಳು ತೆರಿಗೆ ವ್ಯಾಪ್ತಿಗೆ ಬರಬೇಕು. ಆದರೆ ತೆರಿಗೆ ವ್ಯವಸ್ಥೆಯು ಬಹಳ ಮುಖ್ಯವಾದ ಸಂಗತಿಗಳನ್ನು ಕಡೆಗಣಿಸಬಾರದು. ಆರೋಗ್ಯ ವಿಮಾ ಪಾಲಿಸಿ ಸೇರಿದಂತೆ ವಿಮಾ ಪಾಲಿಸಿಗಳ ಪ್ರೀಮಿಯಂ ಮೇಲಿನ ತೆರಿಗೆ ಪ್ರಮಾಣ ಕಡಿಮೆ ಮಾಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದನ್ನು ಜಿಎಸ್‌ಟಿ ಮಂಡಳಿಯು ಮತ್ತೆ ಮುಂದಕ್ಕೆ ಹಾಕಿದೆ. ತೆರಿಗೆ ಪ್ರಮಾಣ ಕಡಿಮೆ ಮಾಡುವ ವಿಚಾರವಾಗಿ ಸಚಿವರ ಸಮಿತಿಯೊಂದು ಕೆಲವು ಶಿಫಾರಸುಗಳನ್ನು ನೀಡಿದೆ, ಶಿಫಾರಸುಗಳನ್ನು ಪರಿಗಣಿಸಲಾಗುತ್ತಿದೆ ಎಂಬ ಮಾತನ್ನು ಕೇಂದ್ರ ಸರ್ಕಾರ ಆಡಿತ್ತು. ವಿಮಾ ಪ್ರೀಮಿಯಂ ವಿಚಾರವಾಗಿ ತೀರ್ಮಾನವೊಂದು ಹೊರಬೀಳುತ್ತದೆ ಎಂಬ ನಿರೀಕ್ಷೆಯಲ್ಲಿ ಹಲವರು ಇದ್ದರು. ತೆರಿಗೆ ಪ್ರಮಾಣ ಸರಳೀಕರಣಕ್ಕೆ ಸಂಬಂಧಿಸಿದ ಸಚಿವರ ಗುಂಪು ಹೆಚ್ಚುವರಿ ಕಾಲಾವಕಾಶ ಕೇಳಿದೆ. ಪರಿಹಾರ ಸೆಸ್ ಬಗ್ಗೆ ಪರಿಶೀಲನೆ ನಡೆಸುತ್ತಿರುವ ಸಚಿವರ ಇನ್ನೊಂದು ಗುಂಪಿಗೆ ನೀಡಿದ್ದ ಕಾಲಾವಕಾಶ ವಿಸ್ತರಿಸಲಾಗಿದೆ. ಈ ಮಹತ್ವದ ವಿಷಯಗಳ ಬಗೆಗಿನ ತೀರ್ಮಾನವನ್ನು ಬಹುಕಾಲ ತಡೆಹಿಡಿಯುವುದು ಸರಿಯಲ್ಲ.

ಜಿಎಸ್‌ಟಿ ವ್ಯವಸ್ಥೆ ಇನ್ನಷ್ಟು ಸರಳವಾಗುವ ಅಗತ್ಯ ಬಹಳ ಇದೆ. ಭಾರತದಲ್ಲಿ ಇರುವಂತಹ ಬಹು ಹಂತಗಳ ತೆರಿಗೆ ವ್ಯವಸ್ಥೆಯು ಬಹುತೇಕ ದೇಶಗಳಲ್ಲಿ ಇಲ್ಲ. ತೆರಿಗೆ ವಿಧಿಸುವಲ್ಲಿ ಹಲವು ಹಂತಗಳನ್ನು ಇರಿಸುವುದರಿಂದ ವ್ಯವಸ್ಥೆಯು ಅಸಮರ್ಥವಾಗುತ್ತದೆ, ಅಕ್ರಮಗಳು ನುಸುಳುತ್ತವೆ. ದೇಶದಲ್ಲಿ ಏಕರೂಪದ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂಬ ಉದ್ದೇಶದಿಂದ ರಾಜ್ಯಗಳು ತೆರಿಗೆ ವಿಧಿಸುವ ತಮ್ಮ ಅಧಿಕಾರವನ್ನು ಬಿಟ್ಟುಕೊಟ್ಟವು. ಜಿಎಸ್‌ಟಿ ಮಂಡಳಿ ತೆಗೆದುಕೊಳ್ಳುವ ತೀರ್ಮಾನಗಳ ಮೇಲೆ ತಮಗೆ ಯಾವ ನಿಯಂತ್ರಣವೂ ಉಳಿದಿಲ್ಲ ಎಂಬ ಅಸಮಾಧಾನವು ಹಲವು ರಾಜ್ಯಗಳಲ್ಲಿ ಇದೆ. ತೆರಿಗೆ ಸಂಗ್ರಹದಲ್ಲಿ ತಮಗೆ ಸಿಗಬೇಕಿರುವ ನ್ಯಾಯಯುತವಾದ ಪಾಲು ಸಿಗುತ್ತಿಲ್ಲ ಎಂಬ ಅಸಮಾಧಾನವು ಹಲವು ರಾಜ್ಯಗಳಲ್ಲಿ ಇದೆ. ಅದರಲ್ಲೂ ಮುಖ್ಯವಾಗಿ, ಕೇಂದ್ರವು ವಿಧಿಸುವ ಕೆಲವು ವಿಶೇಷ ತೆರಿಗೆಗಳಲ್ಲಿ ರಾಜ್ಯಗಳಿಗೆ ಪಾಲು ಸಿಗುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ಜಿಎಸ್‌ಟಿಯ ವ್ಯಾಪ್ತಿಯನ್ನು ಇನ್ನಷ್ಟು ಹಿಗ್ಗಿಸುವ ಅಥವಾ ತೆರಿಗೆ ದರವನ್ನು ಇನ್ನಷ್ಟು ಹೆಚ್ಚಿಸುವ ಪ್ರಸ್ತಾವಕ್ಕೆ ಹಲವು ರಾಜ್ಯಗಳು ಬೆಂಬಲ ಸೂಚಿಸಬಹುದು. ಹೀಗೆ ಮಾಡುವುದರಿಂದ ಜಿಎಸ್‌ಟಿ ವ್ಯವಸ್ಥೆಯು ಇನ್ನಷ್ಟು ಸಂಕೀರ್ಣವಾಗಬಹುದು.

ದಿನದ ಟ್ವೀಟ್

ಅಸ್ಮಿತೆ ನಮ್ಮ ಕೈಯಲ್ಲೇ ಇದೆ

2025ನೆಯ ವರ್ಷ ಬರುತ್ತಿದೆ... ಹೆಚ್ಚೆಚ್ಚು ಕನ್ನಡ ಪುಸ್ತಕ ಓದಿ, ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡದಲ್ಲಿ ಬರೆಯುಲು ಶುರು ಮಾಡಿ. ನಮ್ಮ ಬರವಣಿಗೆ ಎಲ್ಲಾ ಕಡೆ ಇದ್ದರೆ ಇನ್ನು 10 ವರ್ಷಗಳ ನಂತರ ಹುಡುಕಿದಾಗ ಕನ್ನಡಿಗರ ಮಾಹಿತಿ ಎಲ್ಲಾ ಕಡೆ ಸಿಗುತ್ತದೆ. ಕನ್ನಡ, ಕನ್ನಡಿಗ, ಕರ್ನಾಟಕದ ಅಸ್ಮಿತೆ ನಮ್ಮ ಕೈಯಲ್ಲೇ ಇದೆ...

ನೂತನ್

ಕಿಡಿನುಡಿ



ಮನಮೋಹನ ಸಿಂಗ್ ಅವರಿಗೆ ಭಾರತೀಯರಿಂದ ಹಾಗೂ ವಿದೇಶಿ ವ್ಯಕ್ತಿಗಳಿಂದ ಬರುತ್ತಿರುವ ಶ್ರದ್ಧಾಂಜಲಿಗಳು ಅಗತ್ಯವಾಗಿದ್ದ ಒಂದು ಪರಿಣಾಮ ಉಂಟುಮಾಡಿವೆ: ಅಂದರೆ, ಭಾರತವು 2014ರಲ್ಲಿ ಸ್ವಾತಂತ್ರ್ಯ ಪಡೆಯಿತು, ಮೋದಿ ಅವರು ಪ್ರಧಾನಿಯಾದ ನಂತರವೇ ದೇಶದಲ್ಲಿ ಒಳ್ಳೆಯ ಸಂಗತಿಗಳೆಲ್ಲ ಶುರುವಾದವು ಎಂಬ ಪ್ರಚಾರವನ್ನು ಇವು ಟೊಳ್ಳಾಗಿಸಿವೆ.

ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಗುರುವಾರ, 30-12-1999

- **ಹಣ ಬೇಡ: ಬಂಧಿತರ ಬಿಡುಗಡೆಗೆ ಉಗ್ರರ ಪಟ್ಟು**

ನವದೆಹಲಿ, ಡಿ. 29– ಇಂಡಿಯನ್ ಏರ್‌ಲೈನ್ಸ್ ವಿಮಾನವನ್ನು ಕಂದಹಾರ್‌ನಲ್ಲಿ ಹಿಡಿದಿಟ್ಟುಕೊಂಡಿರುವ ಅಪಹರಣಕಾರರು ತಮ್ಮ ಎರಡು ಬೇಡಿಕೆಗಳನ್ನು ಕೈಬಿಟ್ಟಿದ್ದರೂ ಭಾರತ ಬಹುತೇಕ ಮಟ್ಟಿಗೆ ಅವರ ಎಲ್ಲ ಬೇಡಿಕೆಗಳನ್ನು ತಿರಸ್ಕರಿಸಿದೆ. ಆದರೆ ಎಲ್ಲ ಪ್ರಯಾಣಿಕರ ಸುರಕ್ಷಿತ ಬಿಡುಗಡೆಗೆ ಪ್ರಯತ್ನ ಮುಂದುವರಿಸಿದೆ.

ಈ ಮಧ್ಯೆ ಕಂದಹಾರ್‌ನಲ್ಲಿ ಭಾರತದ ನಿಯೋಗವು ತಾಲಿಬಾನ್ ಸರ್ಕಾರದ ನೆರವಿನಿಂದ ಬಿಕ್ಕಟ್ಟಿಗೆ ಪರಿಹಾರ ಕಂಡುಹಿಡಿಯಲು ಅಪಹರಣಕಾರರ ಜತೆ ಇಂದು ನಡೆಸಿದ ಮಾತುಕತೆಯು ಮಧ್ಯರಾತ್ರಿಯ ವೇಳೆಗೆ ಅಪೂರ್ಣವಾಗಿ ಮುಕ್ತಾಯಗೊಂಡಿದ್ದು, ನಾಳೆ ಮುಂದುವರಿಯಲಿದೆ.

ಸಂಧಾನ ಸಫಲವಾಗದಿದ್ದರೆ ಜಾಗ ಖಾಲಿ ಮಾಡುವಂತೆ ಅಪಹರಣಕಾರರಿಗೆ ತಿಳಿಸಲು ತಾಲಿಬಾನ್ ಸರ್ಕಾರ ತನ್ನ ಇಂಗಿತವನ್ನು ವ್ಯಕ್ತಪಡಿಸಿರುವುದು ಅಪಹರಣಕಾರರನ್ನು ದಿಕ್ಕುಗೆಡಿಸಿರುವಂತಿದೆ.

- **ನಾಗಾಭರಣಗೆ 'ಕಣಗಾಲ್' ವಾದಿರಾಜ್‌ಗೆ 'ರಾಜ್' ಪ್ರಶಸ್ತಿ**

ಬೆಂಗಳೂರು, ಡಿ. 29– ರಾಜ್ಯ ಸರ್ಕಾರವು 1998–99ನೇ ಸಾಲಿನ ಚಲನಚಿತ್ರ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಪ್ರತಿಷ್ಠಿತ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಗೆ ಖ್ಯಾತ ನಿರ್ದೇಶಕ ಟಿ.ಎಸ್. ನಾಗಾಭರಣ, ಡಾ.ರಾಜ್‌ಕುಮಾರ್ ಪ್ರಶಸ್ತಿಗೆ ಹಿರಿಯ ನಿರ್ದೇಶಕ ಯು.ಎಸ್.ವಾದಿರಾಜ್, ಸುಬ್ಬಯ್ಯ ನಾಯ್ಡು ಪ್ರಶಸ್ತಿಗೆ ನಾಯಕ ನಟರಾದ ವಿಷ್ಣುವರ್ಧನ್ ಮತ್ತು ರಮೇಶ್ ಹಾಗೂ ಅತ್ಯುತ್ತಮ ನಟಿ ಪ್ರಶಸ್ತಿಗೆ ಸೌಂದರ್ಯ ಅವರನ್ನು ಆಯ್ಕೆ ಮಾಡಲಾಗಿದೆ.

ಮೊದಲ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ 'ಚೈತ್ರದ ಚಿಗುರು', ಎರಡನೇ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ 'ಹೂಮಳೆ' ಹಾಗೂ ಮೂರನೇ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ 'ದೋಣಿ ಸಾಗಲಿ' ಚಿತ್ರವನ್ನು ಆಯ್ಕೆ ಮಾಡಲಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 30-12-1974

- **ಕಾಳಿ ಯೋಜನೆಗೆ ನೆರವು ಅಗತ್ಯ**

ಹುಬ್ಬಳ್ಳಿ, ಡಿ. 29– ಕಾಳಿ ಜಲ ವಿದ್ಯುತ್ ಯೋಜನೆಯ ಪ್ರಥಮ ಹಂತವನ್ನು ಪೂರೈಸಲು ರಾಜ್ಯಕ್ಕೆ ತಕ್ಷಣ ₹25 ಕೋಟಿ ಒದಗಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಶಾಖೆಯ ಸಮ್ಮೇಳನ ನಿನ್ನೆ ಇಲ್ಲಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿತು.

ಕಾಳಿ ಯೋಜನೆಗೆ ನೆರವು ನೀಡುವುದರಲ್ಲಿ ಕೇಂದ್ರ ಸರ್ಕಾರದ ಅಲಕ್ಷ್ಯ ನೀತಿ ಮತ್ತು ಕೇಂದ್ರದಿಂದ ನೆರವು ದೊರಕಿಸಿಕೊಳ್ಳುವುದರಲ್ಲಿ ರಾಜ್ಯ ಸರ್ಕಾರದ ಅಸಾಮರ್ಥ್ಯ ಹಾಗೂ ದೌರ್ಬಲ್ಯ ಕುರಿತು ಸಮ್ಮೇಳನ ಅಂಗೀಕರಿಸಿದ ನಿರ್ಣಯದಲ್ಲಿ ಕಟುವಾಗಿ ಟೀಕಿಸಲಾಗಿದೆ.

- **ಪಾಕ್‌ನಲ್ಲಿ ಭೂಕಂಪ 1000 ಮಂದಿ ಸಾವು**

ರಾವಲ್ಪಿಂಡಿ, ಡಿ. 29– ಪಾಕಿಸ್ತಾನದ ಗುಡ್ಡಗಾಡು ಗ್ರಾಮವೊಂದರಲ್ಲಿ ಶನಿವಾರ ರಾತ್ರಿ ಸಂಭವಿಸಿದ ಭಾರಿ ಭೂಕಂಪದಲ್ಲಿ ಕನಿಷ್ಠಪಕ್ಷ ಒಂದು ಸಾವಿರ ಮಂದಿ ಸತ್ತಿದ್ದಾರೆಂದು ಇಂದು ಗೊತ್ತಾಗಿದೆ.

ಈ ಭೂಕಂಪದಲ್ಲಿ ಇತರ ನೂರು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆಂದು ಸೈನ್ಯದ ಅಧಿಕಾರಿಗಳು ವರದಿ ಮಾಡಿದ್ದಾರೆ.

ಭಾವನಾತ್ಮಕ ರಾಜಕಾರಣ ಸಾಕು, ಸುಧಾರಣಾ ರಾಜಕಾರಣ ಬೇಕು

ಎಲ್ಲ ಓಕೆ, ಬೆಲೆ ಒಂದೇ ಇಲ್ಲ ಏಕೆ?



ಅನುಸಂಧಾನ

ರವೀಂದ್ರ ಭಟ್ಟ

ಒಂದು ದೇಶ ಒಂದು ಚುನಾವಣೆ, ಒಂದು ದೇಶ ಒಂದು ತೆರಿಗೆ, ಒಂದು ದೇಶ ಒಂದು ಕಾರ್ಡ್, ಒಂದು ದೇಶ ಒಂದು ವಿದ್ಯಾರ್ಥಿ ಐಡಿ, ಒಂದು ದೇಶ ಒಂದು ನಂಬರ್ ಪ್ಲೇಟ್. ಭಲಾ ಭಲಾ ಏನು ಏಕರೂಪತೆ, ಮೆಚ್ಚಬೇಕಾದ್ದೆ. ವಿವಿಧತೆಯಲ್ಲಿ ಏಕತೆಯನ್ನು ಸಾರಿದ ದೇಶದಲ್ಲಿ ಏಕತೆಯ ಮಹಾಪೂರ. ಒಂದು ದೇಶ ಒಂದು ಸಾಧನ ಎನ್ನೋದರಲ್ಲಿ ಹಲವಾರು ಅನುಕೂಲಗಳಿವೆ. ಅದರಲ್ಲಿ ಅನುಮಾನಗಳಿಲ್ಲ. ಆದರೆ ಇದಕ್ಕಿಂತಲೂ ಅಗತ್ಯವಾಗಿ ಏಕತೆ ಸಾಧಿಸಲೇಬೇಕಾದ ಅನೇಕ ಸಂಗತಿಗಳು ಇವೆ.

ಉದಾಹರಣೆಗೆ ಒಂದು ದೇಶ ಒಂದು ಚುನಾವಣೆ ಚಿಂತನೆಯನ್ನೇ ತೆಗೆದುಕೊಳ್ಳೋಣ. ಇದಕ್ಕೆ ಸಂಬಂಧಿಸಿದ ಮಸೂದೆ ಈಗಾಗಲೇ ಸಂಸತ್ತಿನಲ್ಲಿ ಮಂಡನೆಯಾಗಿದೆ. ಜಂಟಿ ಸಂಸದೀಯ ಸಮಿತಿ ಪರಿಶೀಲನೆಗೆ ಅದನ್ನು ಒಪ್ಪಿಸಲಾಗಿದೆ. ಒಂದೇ ಬಾರಿಗೆ ಚುನಾವಣೆ ನಡೆದರೆ ಸಮಯ, ಹಣ ಎಲ್ಲ ಉಳಿತಾಯವಾಗುತ್ತದೆ ಎನ್ನೋದನ್ನು ಒಪ್ಪಿಕೊಳ್ಳೋಣ. ಪ್ರತಿ ಚುನಾವಣೆ ಸಂದರ್ಭದಲ್ಲಿಯೂ ತಿಂಗಳಾನುಗಟ್ಟಲೆ ಚುನಾವಣಾ ನೀತಿಸಂಹಿತೆ ಜಾರಿಯಲ್ಲಿರುವುದರಿಂದ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗುತ್ತದೆ ಎನ್ನುವುದನ್ನೂ ತಿಳಿದುಕೊಳ್ಳೋಣ. ಆದರೆ ಒಂದು ನೆನಪಿಡಬೇಕಾದ ವಿಷಯ ಏನೆಂದರೆ, 1967ರವರೆಗೆ ಈ ದೇಶದಲ್ಲಿ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳು ಏಕಕಾಲದಲ್ಲೇ ನಡೆಯುತ್ತಿದ್ದವು. ನಂತರದ ದಿನಗಳಲ್ಲಿ ಅವು ಬೇರೆ ಬೇರೆಯಾಗಿ ನಡೆಯಲು ಕಾರಣ ಮತದಾರರಂತೂ ಖಂಡಿತ ಅಲ್ಲ. ಈ ವ್ಯವಸ್ಥೆ ಹಾಳಾಗಲು ರಾಜಕಾರಣಿಗಳು ಕಾರಣ ಅನ್ನೋದನ್ನೂ ಮರೆಯಬಾರದು. ಒಂದೇ ಬಾರಿಗೆ ಚುನಾವಣೆ ನಡೆದರೆ ಜಾತಿ ಆಧಾರಿತ ಚುನಾವಣಾ ಪದ್ಧತಿ, ಹಣ ಬಲ ಮತ್ತು ತೋಳ್ಬಲದ ಚುನಾವಣಾ ಪದ್ಧತಿ ಕೊನೆಗೊಳ್ಳುತ್ತವೆಯೇ? ಈಗ ಸುಧಾರಣೆ ಆಗಬೇಕಿರುವುದು ಚುನಾವಣಾ ಪದ್ಧತಿಯಲ್ಲಿ.

ಒಂದು ದೇಶ ಒಂದು ಚುನಾವಣೆ, ಒಂದು ದೇಶ ಒಂದು ಕಾರ್ಡ್ ಎಂದು ಬೊಬ್ಬೆ ಹೊಡೆಯುವವರು ಒಂದು ದೇಶ ಒಂದು ಬೆಲೆ ಎಂದು ಯಾಕೆ ಮಾತನಾಡುವುದಿಲ್ಲ. ಕೃಷಿ ಉತ್ಪನ್ನಗಳಿಗೆ ಏಕರೂಪದ ಕನಿಷ್ಠ ಬೆಂಬಲ ಬೆಲೆ ಕೊಡಲು ಏಕೆ ಸಾಧ್ಯವಾಗುವುದಿಲ್ಲ. ಕನಿಷ್ಠ ಬೆಂಬಲ ಬೆಲೆಯನ್ನು ಕೊಡಿ ಎಂದು ಹೋರಾಟ ನಡೆಸುವ ರೈತರ ಮೇಲೆ ಜಲಪಿರಂಗಿ ದಾಳಿ ನಡೆಸುವ, ಅಶ್ರುವಾಯು ಷೆಲ್ ಪ್ರಯೋಗಿಸಿ ಚಳವಳಿಯನ್ನು ಹತ್ತಿಕ್ಕುವ ಪ್ರಯತ್ನಗಳು ಯಾಕೆ ನಡೆಯುತ್ತವೆ. ಬೆಲೆ ಖಾತರಿ ಕಾನೂನು ಜಾರಿ ಮಾಡಿ, ಸ್ವಾಮಿನಾಥನ್ ವರದಿ ಅನುಷ್ಠಾನಕ್ಕೆ ತನ್ನಿ ಎಂದು ಮುಷ್ಕರ ನಡೆಸಿದರೆ ಅವರಿಗೆ ಲಾಠಿ ಏಟು ಬೀಳುತ್ತದೆ ಯಾಕೆ?

ಒಂದು ದೇಶ ಒಂದು ಚುನಾವಣೆ ಜಾರಿಗೆ ತನ್ನಿ ಎಂದು ಯಾವ ಮತದಾರರೂ ಕೇಳಿಕೊಂಡಿಲ್ಲ. ಅದಕ್ಕಾಗಿ ಹೋರಾಟವನ್ನೂ ನಡೆಸಿಲ್ಲ. ಆದರೂ ಅದರ ಜಾರಿಗೆ ತರಾತುರಿ ತೋರುವ ನಮ್ಮ ನಾಯಕರು ಬೆಲೆ ನಿಗದಿ ಮಾಡಿ ಎಂದು ಕೂಗುವ ರೈತರು ರಾಜಧಾನಿ ಪ್ರವೇಶಿಸದಂತೆ ಬೇಲಿ ಹಾಕುತ್ತಾರೆ. ಹೋರಾಟ ವಿಫಲಗೊಳಿಸಲು ದಬ್ಬಾಳಿಕೆಗಳು ನಡೆಯುತ್ತವೆ. ವೇದಿಕೆಗಳ ಮೇಲೆ 'ರೈತರು ಈ ದೇಶಕ್ಕೆ ಅನ್ನ ನೀಡುವ ಅನ್ನದಾತರು' ಎಂದು ಕೊಂಡಾಡುವ ಜನರೇ ರೈತರು ಕೇಳುವ ಕನಿಷ್ಠ ಬೆಂಬಲ ಬೆಲೆಯನ್ನು ನೀಡಲು ಮುಂದಾಗುವುದಿಲ್ಲ ಯಾಕೆ? ಹೋರಾಟನಿರತ ರೈತರಲ್ಲಿ ನಾಲ್ಕು ಮಂದಿ ಸಾವಿಗೀಡಾದರೂ ನಮ್ಮ ಮನಸ್ಸು ಕರಗುವುದಿಲ್ಲ ಯಾಕೆ?

ಮೂರು ವರ್ಷಗಳ ಹಿಂದೆ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕು ಎಂದು ವರ್ಷಾನುಗಟ್ಟಲೆ ಹೋರಾಟ ನಡೆಸಿದಾಗಲೂ ನಮ್ಮ ಆಡಳಿತಗಾರರ ಧೋರಣೆ ಹೀಗೆಯೇ ಇತ್ತು. ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ನೇತೃತ್ವದಲ್ಲಿ ಈಗ ನಡೆಯುತ್ತಿರುವ ಹೋರಾಟದ ಕುರಿತೂ ನಮ್ಮ ರಾಜಕೀಯ ಮುಖಂಡರಿಗೆ ಕರುಣೆ ಬರುತ್ತಿಲ್ಲ. ಪಂಜಾಬಿನ ಶಂಭು ಗಡಿಯಲ್ಲಿ ರೈತರು ನಡೆಸುತ್ತಿರುವ ಹೋರಾಟದ ಸಂದರ್ಭದಲ್ಲಿ ಶುಭಕರನ್ ಸಿಂಗ್ ಎಂಬ ಯುವ ರೈತ ಪೊಲೀಸ್ ಜಟಾಪಟಿಯಲ್ಲಿ ಸಾವನ್ನಪ್ಪಿದ. ಆತನ ಕುಟುಂಬಕ್ಕೆ ಒಂದು ಕೋಟಿ ರೂಪಾಯಿ ಪರಿಹಾರ ನೀಡುವುದಾಗಿ ಹಾಗೂ ಕುಟುಂಬದ ಸದಸ್ಯರೊಬ್ಬರಿಗೆ ಸರ್ಕಾರಿ ನೌಕರಿ ಕೊಡುವುದಾಗಿ ಪಂಜಾಬ್ ಸರ್ಕಾರ ಪ್ರಕಟಿಸಿತು. ಆದರೆ ಇದನ್ನು ರೈತ ಕುಟುಂಬ ತಿರಸ್ಕರಿಸಿತು. ನಮ್ಮ ಕುಟುಂಬಕ್ಕೆ ಪರಿಹಾರ ಬೇಡ. ನಮಗೆ ನ್ಯಾಯ ಸಿಗಬೇಕು. ರೈತ ಹೋರಾಟಕ್ಕೆ ಜಯ ಸಿಗಬೇಕು ಎಂದು ಒತ್ತಾಯಿಸಿತು. ಆದರೂ ನಮ್ಮನ್ನು ಆಳುವ ಮಂದಿಗೆ ಕರುಣೆ ಬರಲಿಲ್ಲ. ಕನಿಷ್ಠ ಬೆಂಬಲ ಬೆಲೆ ಕೋರಿಕೆ ಬಗ್ಗೆ ಪರಿಶೀಲಿಸುವ ಕನಿಷ್ಠ ಬುದ್ಧಿಯೂ ಬರಲಿಲ್ಲ. ಆಳುವವರು ಅಳಲಿಲ್ಲ, ರೈತರ ಗೋಳು ಮುಗಿಯಲಿಲ್ಲ.

ರೈತರಿಗೆ ಕನಿಷ್ಠ ಬೆಂಬಲ ಬೆಲೆ ಸಿಗಲ್ಲ. ಆದರೆ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ಹೆಚ್ಚಾಗುತ್ತಲೇ ಇದೆ. ದಿನದಿಂದ ದಿನಕ್ಕೆ, ತಿಂಗಳಿನಿಂದ ತಿಂಗಳಿಗೆ ಬೆಲೆಗಳು ಏರುತ್ತಲೇ ಇವೆ. ಪೆಟ್ರೋಲ್, ಡೀಸೆಲ್ ಬೆಲೆ ನಿರ್ಧರಿಸುವ ಅಧಿಕಾರ ಕೇಂದ್ರ ಸರ್ಕಾರದ ಕೈಯಲ್ಲಿಯೇ ಇದೆ. ಒಂದು ದೇಶ ಒಂದು ಪೆಟ್ರೋಲ್ ಬೆಲೆ, ಒಂದು ದೇಶ ಒಂದು ಡೀಸೆಲ್ ಬೆಲೆ ಎಂದು ಮಾಡೋಕೆ ಯಾಕೆ ಸಾಧ್ಯವಾಗಲ್ಲ. ಹೀಗೆ ಪ್ರಶ್ನೆ ಕೇಳಿದರೆ 'ನಾವೇನು ಮಾಡೋಣ, ರಾಜ್ಯಗಳು ಸೆಸ್ ಹಾಕುತ್ತವೆ' ಎಂದು ಕೇಂದ್ರ ತಪ್ಪಿಸಿಕೊಳ್ಳೋಕೆ ಪ್ರಯತ್ನಪಡುತ್ತದೆ. ಆದರೆ ಜಿಎಸ್‌ಟಿ ಜಾರಿ ಮಾಡಿ ರಾಜ್ಯಗಳಿಗೆ ತೆರಿಗೆ ಪಾಲು ನೀಡುತ್ತಿರುವ ಕೇಂದ್ರ ಸರ್ಕಾರವು ಪೆಟ್ರೋಲ್, ಡೀಸೆಲ್‌ಗಳನ್ನೂ ಅದರ ವ್ಯಾಪ್ತಿಗೆ ತಂದು ರಾಜ್ಯಗಳಿಗೆ ನ್ಯಾಯಯುತ ಪರಿಹಾರ ನೀಡುವ ಬಗ್ಗೆ ಆಲೋಚಿಸುವುದಿಲ್ಲ. ಮನಸ್ಸು ಮಾಡಿದರೆ ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನೂ ನೀಡಬಹುದು. ಗ್ರಾಹಕರಿಗೆ ಒಂದೇ ರೀತಿಯ ಬೆಲೆಯನ್ನೂ ನಿಗದಿ ಮಾಡಬಹುದು. ಇಚ್ಛಾಶಕ್ತಿ ಬೇಕು ಅಷ್ಟೆ.

ಇಚ್ಛಾಶಕ್ತಿಯ ವಿಷಯಕ್ಕೆ ಬಂದರೆ ಎಲ್ಲ ರಾಜಕೀಯ ಪಕ್ಷಗಳ ನಾಯಕರೂ ಒಂದೇ ದೋಣಿಯ ಕಳ್ಳರು. ಇಂಧನ ಸಚಿವರಾಗಿದ್ದಾಗ ಜೆ.ಎಚ್.ಪಟೇಲರಿಗೆ 'ನಮ್ಮ ರಾಜ್ಯದಲ್ಲಿ ವಿದ್ಯುತ್ ಕೊರತೆ ಬಹಳ ಇದೆ. ಪಕ್ಕದ ತಮಿಳುನಾಡು, ಆಂಧ್ರಪ್ರದೇಶದಲ್ಲಿ ವಿದ್ಯುತ್ ಕಡಿತ ಇಲ್ಲ ಯಾಕೆ?' ಎಂದು ಕೇಳಿದಾಗ ಪಟೇಲರು 'ವಿದ್ಯುತ್ ಕೊರತೆ ವಿಷಯದಲ್ಲಿ ಎಲ್ಲ ರಾಜ್ಯಗಳೂ ಒಂದೆ. ನಾವು ಪುರಂದರ ದಾಸರಾದರೆ ಅವರು ಕನಕದಾಸರು ಅಷ್ಟೆ' ಎಂದು ಉತ್ತರಿಸಿದ್ದರು. ರೈತರ, ಗ್ರಾಹಕರ ಹಿತ ಕಾಯುವ ವಿಷಯದಲ್ಲಿ ಎಲ್ಲ ರಾಜಕೀಯ ಪಕ್ಷಗಳ ಮುಖಂಡರ ಕತೆಯೂ ಇದೇ ಆಗಿದೆ.

ಒಂದು ದೇಶ ಒಂದು ಚುನಾವಣೆಗಿಂತ ಮೊದಲು ಒಂದು ದೇಶ ಒಂದು ಶಿಕ್ಷಣ ಪದ್ಧತಿ, ಒಂದು ದೇಶ ಒಂದು ಆರೋಗ್ಯ ವ್ಯವಸ್ಥೆ ಬೇಡವೇ? ನಮ್ಮಲ್ಲಿ ಬಡವರ ಮಕ್ಕಳಿಗೆ ಒಂದು ರೀತಿಯ ಶಿಕ್ಷಣ, ಶ್ರೀಮಂತರ ಮಕ್ಕಳಿಗೆ ಒಂದು ರೀತಿಯ ಶಿಕ್ಷಣ ವ್ಯವಸ್ಥೆ ಇದೆ. ಅದೇ ರೀತಿ ಬಡವರಿಗೊಂದು, ಸಿರಿವಂತರಿಗೊಂದು ಆರೋಗ್ಯ ವ್ಯವಸ್ಥೆ ಇದೆ. ಇದು ತೊಲಗಿ ಸಮಾನ ಶಿಕ್ಷಣ, ಸಮಾನ ಆರೋಗ್ಯ ವ್ಯವಸ್ಥೆ ಜಾರಿಗೆ ಬರಬೇಕಾಗಿರುವುದು ಈಗಿನ ತುರ್ತು ಅಲ್ಲವೇ? ಬರೀ ಭಾವನಾತ್ಮಕ ರಾಜಕಾರಣ ಮಾಡಿದರೆ ದೇಶ ಉದ್ಧಾರವಾಗದು. ಸುಧಾರಣಾ ರಾಜಕೀಯದ ಬಗ್ಗೆ ಆಲೋಚನೆ ನಡೆಸದಿದ್ದರೆ ಕೆಡುಕು ಕಟ್ಟಿಟ್ಟಬುತ್ತಿ.

ಅದೆಲ್ಲಾ ಹೋಗಲಿ ಸ್ವಾಮಿ, ಒಂದು ದೇಶ ಒಂದು ಸಂವಿಧಾನ ಅನುಷ್ಠಾನ ಆದರೂ ಬೇಡವೇ? ಈಗ ಅದು ಆಗ್ತಾ ಇದೆಯಾ? ನೀವೇ ಹೇಳಿ.

ಚುರುಮುರಿ

ನೆಮ್ಮದಿಯ ಸುದ್ದಿ!

• ಸುಮಂಗಲಾ

'ಯಾವಾಗಲೂ ನಮ್ ನಿರ್ಮಲಕ್ಕಂಗೆ ಬೈತಿರತೀ. ಮಂದಿ ಬಗ್ಗೆ ಆಕಿ ಎಷ್ಟು ಕಾಳಜಿ ಮಾಡತಾಳ ಅಂತ ಈಗಾದ್ರೂ ತಿಳಕೋ...' ಎಂದು ಬೆಕ್ಕಣ್ಣ ಗುರುಗುಟ್ಟಿತು.

'ಹಂತಾಪರಿ ಕಲ್ಯಾಣ ಕಾರ್ಯಕ್ರಮ ಏನು ಮಾಡ್ಯಾಳಲೇ' ಎಂದೆ ಅಚ್ಚರಿಯಿಂದ.

'ಈ ಸಲ ಆದಾಯ ತೆರಿಗೆ ಮಿತಿಯನ್ನ ಹದಿನೈದು ಲಕ್ಷಕ್ಕೆ ಏರಿಸಬೌದು ಅಂತ ಸುದ್ದಿ ಐತಿ. ಮಧ್ಯಮ ವರ್ಗದವರಿಗೆ ಇನ್ನೇನು ಬೇಕು?' ಬೆಕ್ಕಣ್ಣ ವಾದಿಸಿತು.

'ಸುದ್ದಿ ಅಲ್ಲ, ಅದಿನ್ನೂ ಗಾಳಿಸುದ್ದಿ' ಎಂದೆ.

'ಒಲೆವಳಗೆ ಹೊಗೆಯಾಡಿತು ಅಂದ್ರ ಬೆಂಕಿ ಹತ್ತತೈತಿ. ಗಾಳಿಸುದ್ದಿನೇ ಆಮೇಲೆ ಖರೇಸುದ್ದಿ ಆಗೂದು' ಬೆಕ್ಕಣ್ಣ ನಕ್ಕಿತು.

'ಆದಾಯ ತೆರಿಗೆ ಮಿತಿ ಏರಿಸಿದರೆ, ಕಡಿಮೆ ತೆರಿಗೆ ಕೊಟ್ಟು, ಉಳಿಸಿದ ರೊಕ್ಕದಿಂದ ಮಂದಿ ಪಾಪ್‌ಕಾರ್ನ್ ತಿನ್ನತಾರೆ. ಆವಾಗ ಪಾಪ್‌ಕಾರ್ನ್ ಜಿಎಸ್‌ಟಿವಳಗೆ ಆ ರೊಕ್ಕ ವಸೂಲು ಮಾಡಬೌದಂತ ನಿರ್ಮಲಕ್ಕ ಪ್ಲಾನ್ ಮಾಡ್ಯಾರೆ' ಎಂದೆ.

'ಬಡವರು ತಿನ್ನೋ ಸಾದಾ ಪಾಪ್‌ಕಾರ್ನಿಗೆ 5 % ಜಿಎಸ್‌ಟಿ, ಮಧ್ಯಮವರ್ಗದವರು ತಿನ್ನೋ ಉಪ್ಪು ಮಸಾಲೆ ಹಚ್ಚಿ ಪ್ಯಾಕ್ ಮಾಡಿದ್ದಕ್ಕೆ 12 % ಜಿಎಸ್‌ಟಿ, ಮತ್ತೆ ರೊಕ್ಕ ಇದ್ದೋರು ತಿನ್ನೋ ಕ್ಯಾರಮಲ್ ಪಾಪ್‌ಕಾರ್ನಿಗೆ 18 % ಜಿಎಸ್‌ಟಿ. ಅಂದ್ರ ಜೇಬಿಗೆ ತಕ್ಕ ಜಿಎಸ್‌ಟಿ' ಎಂದು ಮರು ವಾದಿಸಿತು.

'ಒಂದು ದೇಶ, ಎಲ್ಲಾ ಒಂದೇ ಇರಬಕು ಅನ್ನೋರು ತಿನ್ನುವ ಒಂದು ಐಟಮ್ಮಿಗೆ ಮೂರು ಥರದ ಜಿಎಸ್‌ಟಿ ಹಾಕೂದು ಯಾವ ನ್ಯಾಯ?' ನಾನು ಪ್ರಶ್ನಿಸಿದೆ.

'ವೈವಿಧ್ಯತೆಯ ದೇಶ ನಮ್ಮದು... ಹಂಗಾಗಿ ವೈವಿಧ್ಯತೆಯ ಜಿಎಸ್‌ಟಿ! ಆದ್ರೂ ವರ್ಷದ ಕೊನೆಗೆ ನಿರ್ಮಲಕ್ಕ ತೆರಿಗೆ ಮಿತಿ ಹೆಚ್ಚಳದ ನೆಮ್ಮದಿಯ ಸುದ್ದಿ ಕೊಟ್ಟಾಳೆ' ಎಂದು ಮೀಸೆ ತಿರುವಿತು.

'ಡಾಲರ್ ಎದ್ರು ನಮ್ಮ ರೂಪಾಯಿ ಕುಸಿದು ಪಾತಾಳ ಕಂಡೈತಿ. ಯಾವ ನೆಮ್ಮದಿಯ ಮಾತಾಡ್ತಿ?'

'ನೀವು ಬಡವರು, ಮಧ್ಯಮವರ್ಗದವರು ಡಾಲರ್ ಕೊಳ್ಳಂಗಿಲ್ಲ! ನಿಮ್ಮ ವ್ಯಾಪಾರ ರೂಪಾಯಿವಳಗೆ ನಡೀತೈತೆ. ನಿಮಗ್ಯಾಕೆ ಚಿಂತೆ' ಎಂದು ಬೆಕ್ಕಣ್ಣ ಹುಂಬವಾದ ಮುಂದಿಟ್ಟಿತು.

ಸಂಗತ

ಸಂದೇಹ ನಿವಾರಿಸಿಕೊಳ್ಳುವ ಹೊತ್ತು

ಸಿದ್ಧತಾ ಪರೀಕ್ಷೆಗಳು ಸಮೀಪಿಸುತ್ತಿವೆ. ಸಂದೇಹ, ಪ್ರಶ್ನೆಗಳಿದ್ದರೆ ಗುರುಗಳನ್ನು ಕೇಳಿ ಪರಿಹರಿಸಿಕೊಳ್ಳಲು ವಿದ್ಯಾರ್ಥಿಗಳು ಹಿಂಜರಿಯಬಾರದು

• ಬಿ.ಎಸ್. ಭಗವಾನ್

ಶಾಲೆ, ಕಾಲೇಜುಗಳಲ್ಲಿ ಈಗ ವಿವಿಧ ವಿಷಯಗಳಲ್ಲಿ ಪಠ್ಯಕ್ರಮದ ಬೋಧನೆ ಬಹುತೇಕ ಮುಗಿದಿರುತ್ತದೆ. ಸಿದ್ಧತಾ ಪರೀಕ್ಷೆಗಳು ಸಮೀಪಿಸುತ್ತಿವೆ. ಬೋಧನೆಯಾದ ಅಧ್ಯಾಯಗಳಲ್ಲಿ ಸಂದೇಹ, ಪ್ರಶ್ನೆಗಳು ಕಾಡಿದರೆ ವಿದ್ಯಾರ್ಥಿಗಳು ಗುರುಗಳನ್ನು ಕೇಳಿ ಪರಿಹರಿಸಿಕೊಳ್ಳುವ ದಿನಗಳಿವು. ಬೋಧನೆಗಿಂತ ಹೆಚ್ಚು ಅಸ್ಥೆ ತೋರಿ ಗುರುಗಳು ಅವುಗಳನ್ನು ನಿರ್ವಹಿಸಬೇಕಾದುದು ಅಪೇಕ್ಷಣೀಯ.

ವಿದ್ಯಾರ್ಥಿಗಳಿಗೆ ಎದುರಾಗುವ ಜಿಜ್ಞಾಸೆಗಳು ಗುರುಗಳ ಅರಿವನ್ನು ಕೂಡ ಪುನಶ್ಚೇತನಗೊಳಿಸಬಲ್ಲವು. ಬೋಧಿಸುವಾಗ ಅದೆಷ್ಟು ಕಣ್ಣು, ಕಿವಿಗಳು ಸೂಕ್ಷ್ಮವಾಗಿ ಅಧ್ಯಾಪಕರನ್ನು ಗಮನಿಸುತ್ತಿರುತ್ತವೆ. ತರಗತಿಯಲ್ಲಿ ಒಂದು ಬಗೆಯಲ್ಲಿ ಗುರುವಿನ ಸತ್ವ ಪರೀಕ್ಷೆಯೇ ನಡೆಯುತ್ತದೆ.

ಮಕ್ಕಳು ಕಲಿಯಲು ಶಾಲೆಗೆ ಬರುತ್ತಾರೆ. ಆದರೆ ಶಿಕ್ಷಕರು ಅವರಿಂದಲೂ ಕಲಿತುಕೊಳ್ಳಬೇಕಾದ ಪಾಠ ಮಹತ್ತರವೇ ಆಗಿರುತ್ತದೆ. ಅಪಾರ ಪಾಂಡಿತ್ಯವಿರಲಿ, ಅನುಭವವಿರಲಿ ಶಿಕ್ಷಕರು ನಿತ್ಯ ವಿದ್ಯಾರ್ಥಿಗಳು. ಬೋಧನೆಯು ಹೆಚ್ಚು ಪಾಲು ಕಲಿಯುವುದೇ ಆಗಿರುತ್ತದೆ ಎಂಬುದು ಗಮನಿಸಬೇಕಾದ ಸೂಕ್ಷ್ಮ ಸಂಗತಿ.

ಶಿಕ್ಷಕ ವೃತ್ತಿ ಎಲ್ಲ ವೃತ್ತಿಗಳನ್ನೂ ಸೃಷ್ಟಿಸುವ ವೃತ್ತಿ. ಮಾದರಿ ಶಿಕ್ಷಕರೆಂದರೆ ಪ್ರತಿಯೊಬ್ಬ ವಿದ್ಯಾರ್ಥಿಯೂ ತನಗೊಬ್ಬನಿಗೆ ಮನನವಾಗುವಂತೆ ಕಲಿಸಿದರೆಂಬ ಭಾವ ಸೃಜಿಸುವುದು ಎಂಬ ನುಡಿಯಿದೆ. ಮಕ್ಕಳು ತ್ವರಿತವಾಗಿ ಕಲಿಯಬಲ್ಲರು. ಮರಳು ಬಗೆದು ಬಗೆ ಬಗೆಯ ಗೂಡು ರಚಿಸಲು ಅವರಿಗೆ ತರಬೇತಿ ಬೇಕೇ? ವಿವಿಧ ಚಿತ್ರಗಳಿರುವ ಹಾಳೆ ಕಂಡರಾಯಿತು, ತಮಗೆ ಇಷ್ಟವಾದ ಬಣ್ಣಗಳಿಂದ ತುಂಬಲು ಹವಣಿಸುತ್ತಾರೆ. ಸುತ್ತಮುತ್ತಲಿನ ವಾತಾವರಣ ಬದಲಾಗಬಹುದು, ತಂತ್ರಜ್ಞಾನ ಬದಲಾಗಬಹುದು. ಆದರೆ ಮಕ್ಕಳ ಸಹಜ ನೈಪುಣ್ಯ ಅಬಾಧಿತ. ಕೆಟ್ಟ ವಿದ್ಯಾರ್ಥಿಗಳೆಂದರೆ ಕೆಟ್ಟವರೆಂದಲ್ಲ, ಅರಿಯಲು ಅಣಿಯಾಗಿರುವರೆಂದೇ ಪರಿಗಣಿಸಬೇಕು. ಕ್ರಿಯಾಶೀಲ ವಿದ್ಯಾರ್ಥಿಗಳು ಶಿಕ್ಷಕರ ಬೋಧನಾ ವಿಧಾನ ಸುಧಾರಣೆಗೆ ಪ್ರೇರಣೆ ಆಗಬಲ್ಲರು.

ವಿದ್ಯಾರ್ಥಿಗಳ ಪ್ರಶ್ನೆಗಳು ಮೇಲ್ನೋಟಕ್ಕೆ ಒಂದೇ ತೆರನಾಗಿರುತ್ತವೆ. ಆದರೆ ಶಿಕ್ಷಕರ ಕೂಲಂಕಷ ಪರಿಶೀಲನೆಗೆ ಅವುಗಳ ಹಿಂದಿನ ನವನವೀನ ಹೊಳಹುಗಳು ಲಭಿಸುತ್ತವೆ. ತರಗತಿಯನ್ನು ವಾಸ್ತವ ಪ್ರಪಂಚಕ್ಕೆ ತರುವುದು ಶಿಕ್ಷಕರ ದೊಡ್ಡ ಹೊಣೆಗಾರಿಕೆ. ಪಠ್ಯದ ಸಂಗತಿಗಳು ಹೇಗೆ ದೈನಂದಿನ ಬದುಕಿನೊಂದಿಗೆ ಹೆಣೆದುಕೊಂಡಿರಬಲ್ಲವು ಎನ್ನುವುದರ ಗ್ರಹಿಕೆಯು ಶಿಕ್ಷಕ ಸಾಮರ್ಥ್ಯದ ಕೈಗನ್ನಡಿ. ಬೋಧಿಸಿದ ಪಾಠದಿಂದಾಚೆಗೂ ಪ್ರಶ್ನಿಸಲು ಸಾಮಾನ್ಯವಾಗಿ ವಿದ್ಯಾರ್ಥಿಗಳು ಹೆದರರು. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಒಂದೊಂದು ಪ್ರತಿಭೆ, ವಿಶೇಷ ಇರುತ್ತದೆ. ಅದನ್ನು ಗುರುತಿಸಿ, ಪ್ರೋತ್ಸಾಹ ನೀಡುವ ಕೆಲಸವು ಶಿಕ್ಷಕರು ಮತ್ತು ಪೋಷಕರಿಂದ ಆಗಬೇಕು.

'ಶಿಕ್ಷಕರು ಒಂದು ದೃಷ್ಟಿಯಿಂದ ಸಂಭಾವನೆ ಪಡೆಯುವ ವಿದ್ಯಾರ್ಥಿಗಳು' ಎಂದು ಗ್ರೀಕ್ ತತ್ವಜ್ಞಾನಿ ಸಾಕ್ರೆಟಿಸ್ ಹೇಳುತ್ತಿದ್ದರು. ಒಮ್ಮೆ ಒಂದು ಕಾಲೇಜಿನ ಅಂಗಳದಲ್ಲಿ ಭೂಗೋಳದ ಪ್ರೊಫೆಸರ್ ಆತುರ-ಕಾತರದಿಂದ ಓಡಾಡುತ್ತಿದ್ದರು. ಕಂಕುಳಲ್ಲಿ ಐದಾರು ಸುರುಳಿ ಸುತ್ತಿದ್ದ ಭೂಪಟಗಳು, ಕೈಯಲ್ಲಿ ಬಣ್ಣದ ಸೀಮೆಸುಣ್ಣಗಳ ಡಬ್ಬಿ. 'ಬನ್ನಿ ಸರ್, ಇಲ್ಲೇ ಆರನೇ ನಂಬರ್ ಕೊಠಡಿ...' ಎಂದು ಅವರನ್ನು ವಿದ್ಯಾರ್ಥಿಗಳ ಹಿಂಡು ಕೈ ಹಿಡಿದು ತರಗತಿಗೆ ಕರೆದೊಯ್ದಿತ್ತು. 'ಜಗತ್ತಿನ ದೇಶ, ಖಂಡಗಳನ್ನೆಲ್ಲ ತೋರಿಸಬೇಕೆಂದಿದ್ದ ನನಗೆ ಅಂತೂ ಒಳ್ಳೆಯ ಪಾಠವನ್ನೇ ಹೇಳಿದಿರಲ್ಲಪ್ಪ' ಎಂದರಂತೆ ಪ್ರೊಫೆಸರ್!

ಶಿಕ್ಷಕರಿಗೆ ಪ್ರತಿದಿನವೂ ವಿದ್ಯಾರ್ಥಿಗಳಿಂದ ಲಭಿಸುವ ಭಾವನಾತ್ಮಕ ಪ್ರತಿಫಲವು ಮೌಲಿಕ. ಶಿಕ್ಷಕರ ಸೇವೆಯ ಅತ್ಯುತ್ತಮ ವಲಯ ವಿದ್ಯಾರ್ಥಿಗಳೇ. ಒಂದೊಂದು ತರಗತಿಯೂ ಒಂದು ಜ್ಞಾನ ಯಾನ. ಗೌಜು, ತಂಟೆ, ಗದ್ದಲ ಇರುವುದು ನಿರೀಕ್ಷಿತವೆ. ವಿದ್ಯಾರ್ಥಿಗಳಿಂದ ಶಿಕ್ಷಕರಿಗೆ 'ನಮ್ಮನ್ನು ಎಲ್ಲರ ಎದುರಿಗೆ ಹೊಗಳಿ, ಆದರೆ ವೈಯಕ್ತಿಕವಾಗಿ ತಿದ್ದಿ' ಎಂಬ ಇಂಗಿತ ತಲುಪಿಯೇ ಇರುತ್ತದೆ. ಒಂದು ಮೊನಚಾದ ಪ್ರಸಂಗ ನೆನಪಾಗುತ್ತದೆ. ಹೋಮ್ ವರ್ಕ್‌ಗೆ ಕೊಟ್ಟಿದ್ದ ಪ್ರಬಂಧವನ್ನು ಮೌಲ್ಯಮಾಪನ ಮಾಡಿ ಕೊನೆಯಲ್ಲಿ 'ಅಕ್ಷರ ಸ್ಪಷ್ಟವಿಲ್ಲ' ಎಂಬ ಒಕ್ಕಣೆಯೇ ಓದಲಾಗದಿದ್ದರೆ! ಹಾಗಾಗಿ ಶಿಕ್ಷಕರ ಕೈಬರಹವೂ ವಿದ್ಯಾರ್ಥಿಗಳ ಪರಾಮರ್ಶೆಗೆ ಒಳಪಡಬಹುದು.

ವಿದ್ಯಾರ್ಥಿಗಳಿಗೆ ಅವರದೇ ಧ್ವನಿ, ವಿವರಣೆ ಮತ್ತು ಮೇಧಾಶಕ್ತಿಯನ್ನು ಒಳಗೊಂಡ ಪರಿಸರದಲ್ಲಿ ಕಲಿಯಲು ಆಸ್ಪದ ಕಲ್ಪಿಸಬೇಕು. ತಮ್ಮ ಬದುಕಿನಲ್ಲಿ ಏನೋ ಒಂದು ಸುಧಾರಣೆ ಆಗುತ್ತಿದೆಯೆಂದು ವಿದ್ಯಾರ್ಥಿಗಳು ನಿರೀಕ್ಷಿಸುತ್ತಾರೆ. ನೇರ, ನಿಸ್ಸಂಕೋಚದ ಅವರ ಪ್ರಶ್ನೆಗಳಲ್ಲಿ ಗಾಢವಾದ ಜ್ಞಾನ ಸಂಪತ್ತು ಸಾಂದ್ರಗೊಂಡಿರುತ್ತದೆ. ಹಾಗಾಗಿ ಶಿಕ್ಷಕರು ಅವನ್ನು ತೆರೆದ ಮನಸ್ಸಿನಿಂದ ಬರಮಾಡಿಕೊಳ್ಳಬೇಕು. 'ಕೂತ್ಕೊ, ಇಂಥವು ಪರೀಕ್ಷೆಗೆ ಬರುವುದಿಲ್ಲ' ಅಂತ ಹತ್ತಿಕ್ಕಿದರೆ ಅರಿವಿನ ತವನಿಧಿ ಕೈ ತಪ್ಪುವುದು.

ರಾಮಾನುಜನ್ ಅವರು 'ಸೊನ್ನೆಯನ್ನು ಸೊನ್ನೆಯಿಂದ ಭಾಗಿಸಿದರೆ ಬರುವ ಫಲವೇನು' ಎಂದು ಗುರುಗಳನ್ನು ಕೇಳಿದ್ದರು. ಗುರು ಮುನಿಯಲಿಲ್ಲ, ಆ ಕುರಿತ ವ್ಯಾಪಕ ಅಧ್ಯಯನಕ್ಕೆ ಶಿಷ್ಯನ ಪ್ರಶ್ನೆಯನ್ನು ಅಡಿಗಲ್ಲಾಗಿಸಿಕೊಂಡರು. ವಿದ್ಯಾರ್ಥಿಗಳು ಬೋಧಕರಿಗೆ ಅಸ್ಮಿತೆಯನ್ನು ಕಟ್ಟಿಕೊಡುವ ಇಂಥ ಪ್ರಸಂಗಗಳು ಒಂದಲ್ಲೊಂದು ರೂಪದಲ್ಲಿ ಜರುಗುತ್ತಲೇ ಇರುತ್ತವೆ. ಶ್ರೇಷ್ಠ ಕಲಿಕಾರ್ಥಿಗಳಿಂದ ಶ್ರೇಷ್ಠ ಶಿಕ್ಷಕರು ರೂಪುಗೊಳ್ಳುವ ಆಯಾಮ ಗಮನಾರ್ಹ. ತರಗತಿ ತುಂಬ ಗುರುಗಳೇ ಇದ್ದಾರು!

ವಾಚಕರ ವಾಣಿ

ಪೋಷಕರ ಪೊಳ್ಳು ಪ್ರತಿಷ್ಠೆಗೆ ಮಕ್ಕಳ ಬಾಲ್ಯ ನಲುಗಿದೆ

'ಅಕಾಲ ವಯಸ್ಕರಾಗಿಸುವ ಮಾಯಾಜಾಲ!' ಎಂಬ ಲೇಖನದಲ್ಲಿ (ಪ್ರ.ವಾ., ಡಿ. 24) ಅರವಿಂದ ಚೊಕ್ಕಾಡಿ ಅವರು ವಾಸ್ತವ ಚಿತ್ರಣವನ್ನು ಓದುಗರ ಎದುರು ತೆರೆದಿಟ್ಟಿದ್ದಾರೆ. ಈಗ ಬಹುತೇಕ ಟಿ.ವಿ. ಚಾನೆಲ್‌ಗಳಲ್ಲಿ ಮಕ್ಕಳ ರಿಯಾಲಿಟಿ ಷೋಗಳದ್ದೇ ಅಬ್ಬರ. ಅದಕ್ಕಾಗಿ ಪೋಷಕರ ನಡುವೆ ಪೈಪೋಟಿ. ಹೇಗಾದರೂ ಸರಿ ತಮ್ಮ ಮಕ್ಕಳು ಟಿ.ವಿ. ತೆರೆ ಮೇಲೆ ಕಾಣಿಸಬೇಕು, ಮನ್ನಣೆ ಸಿಗಬೇಕು ಎಂಬ ಹಂಬಲ. ಮಗುವಿಗೆ ಶ್ರುತಿ ಸೇರಿಸಲು, ಹೆಜ್ಜೆ ಹಾಕಲು ಬಾರದಿದ್ದರೂ ಅವರನ್ನು ಸಂಗೀತ, ನೃತ್ಯದ ಆಡಿಷನ್‌ಗೆ ಕರೆದುಕೊಂಡು ಹೋಗುತ್ತಾರೆ.

ಆಟ ಆಡುವ ವಯಸ್ಸಿನ ಮಕ್ಕಳ ಚಟುವಟಿಕೆ ಮೇಲೆ ನಿರ್ಬಂಧ ಹೇರಿ, ಅವರ ಬಾಲ್ಯವನ್ನು ಕಸಿಯುವ ಕೆಲಸ ಎಲ್ಲೆಡೆ ನಡೆದಿದೆ. ಪೊಳ್ಳು ಪ್ರತಿಷ್ಠೆಗಾಗಿ ಮಕ್ಕಳನ್ನು ಬಳಸಿಕೊಳ್ಳುತ್ತಿದ್ದಾರೆ. ಮಕ್ಕಳ ಸುಪ್ತ ಪ್ರತಿಭೆ ಅರಳಲು ನೀರೆರೆಯುವ ಬದಲು ಅವರನ್ನು ಎಳವೆಯಲ್ಲೇ ಒತ್ತಡಕ್ಕೆ ಸಿಲುಕಿಸುತ್ತಿದ್ದಾರೆ. ಟಿ.ವಿ. ವಾಹಿನಿಗಳ ದೃಷ್ಟಿ ಸದಾ ಟಿಆರ್‌ಪಿ ಮೇಲೆ ನೆಟ್ಟಿರುತ್ತದೆ. ಮುಗ್ಧ ಮಕ್ಕಳ ಮುಂದೆ ದ್ವಂದ್ವಾರ್ಥದ ಮಾತುಗಳನ್ನೂ ಆಡುವುದಿದೆ. ಇಂತಹ ಪ್ರಚಾರದ ಗೀಳಿನಿಂದ ಪೋಷಕರು ಹೊರಬರಬೇಕು.

ವೀಣಾ ಸುಬ್ರಹ್ಮಣ್ಯ, ಬೆಂಗಳೂರು

ಅನುತ್ತೀರ್ಣಕ್ಕೆ ಅವಕಾಶ: ಒಳ್ಳೆಯ ನಿರ್ಧಾರವಲ್ಲ

'ಪಾಸು-ಫೇಲು: ಯಾವುದು ಮೇಲು?' ಲೇಖನದಲ್ಲಿ (ಪ್ರ.ವಾ., ಡಿ. 27) ಎಚ್.ಬಿ.ಚಂದ್ರಶೇಖರ್ ಅವರು ಕೇಂದ್ರ ಶಿಕ್ಷಣ ಸಚಿವಾಲಯವು ತನ್ನ ಅಧೀನಕ್ಕೆ ಒಳಪಡುವ ಶಾಲೆಗಳಲ್ಲಿ 5 ಹಾಗೂ 8ನೇ ತರಗತಿಗಳಲ್ಲಿನ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸಲು ಅವಕಾಶ ಕಲ್ಪಿಸಿರುವ ನಿರ್ಧಾರದ ಸಾಧಕ-ಬಾಧಕಗಳನ್ನು ವಿವರಿಸಿದ್ದಾರೆ. ಈ ತರಗತಿಗಳಲ್ಲಿ ಓದುವಂತಹ ಒಬ್ಬ ವಿದ್ಯಾರ್ಥಿ ಫೇಲಾದರೆ ಅದು ಬರೀ ಆತನ ದೋಷವಲ್ಲ; ಅದು ಸಮಗ್ರ ವ್ಯವಸ್ಥೆಯ ದೋಷ. ಅನುತ್ತೀರ್ಣಕ್ಕೆ ಅನೇಕ ಕಾರಣಗಳಿರುತ್ತವೆ.

ಮಕ್ಕಳನ್ನು ಅನೇಕ ಬಗೆಯ ನ್ಯೂನತೆಗಳು ಕಾಡುತ್ತಿರಬಹುದು. ಅಪೌಷ್ಟಿಕತೆ, ದೃಷ್ಟಿದೋಷ, ಶ್ರವಣದೋಷ, ಆತಂಕದಂತಹ ಸಮಸ್ಯೆಗಳು ಇದ್ದಿರಬಹುದು. ಇವುಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆಯೇ? ಇವೆಲ್ಲವೂ ಸಹ ಮಕ್ಕಳ ಶೈಕ್ಷಣಿಕ ಕ್ಷಮತೆಯ ಮೇಲೆ ಗಾಢವಾದ ಪರಿಣಾಮ ಬೀರುತ್ತವೆ. ಇನ್ನು ಎಳೆಯ ಪ್ರಾಯದಲ್ಲಿ ಮಕ್ಕಳನ್ನು ಅನುತ್ತೀರ್ಣಗೊಳಿಸಿದರೆ ಅದು ಅವರ ಮನಸ್ಸಿನ ಮೇಲೆ ಹಾಗೂ ಭವಿಷ್ಯದ ಮೇಲೆ ಗಾಢವಾದ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ತಮ್ಮ ಶಾಲಾ ದಿನಗಳಲ್ಲಿ ಫೇಲಾದವರು ಮುಂದೊಂದು ದಿನ ಮಹಾನ್ ವಿಜ್ಞಾನಿಗಳಾಗಿದ್ದಾರೆ. ಇಂತಹ ನಿದರ್ಶನಗಳನ್ನು ನಾವು ಮರೆಯಬಾರದು.

ಗಾನಶ್ರುತಿ ಎಂ.ಕೆ., ಹುಲಸೂರು, ಬೀದರ್

ಮಿತಿಗಳ ನಡುವೆ ಒಳಿತೇ ಹೆಚ್ಚು

ಗಣ್ಯರೊಬ್ಬರು ತೀರಿಕೊಂಡಾಗ ಅವರ ಒಳ್ಳೆಯ ಗುಣ, ಕೊಡುಗೆಗಳನ್ನೇ ಹೆಚ್ಚು ಸ್ಮರಿಸುವುದು ಭಾರತೀಯ ಮಾನಸಿಕತೆಯ ಒಂದು ಭಾಗ. 'ಸಾಮಾನ್ಯನ ಬಲಪಡಿಸಿದ ಮನಮೋಹನ' ಹಾಗೂ 'ಜೀವನ ಹಸನು ಮಾಡಿದ ಸಜ್ಜನ' ಲೇಖನಗಳು (ಪ್ರ.ವಾ., ಡಿ.27) ಇದನ್ನೇ ಸೂಚಿಸುತ್ತವೆ. ವ್ಯಕ್ತಿಯಾಗಿ ಅವರನ್ನು ಟೀಕಿಸುವಂತಹ ಅಂಶಗಳು ಇಲ್ಲ. ಹಣಕಾಸು ಸಚಿವರಾಗಿ ಕಷ್ಟದ ಕಾಲಘಟ್ಟದಲ್ಲಿ ಭಾರತವನ್ನು ಮುನ್ನಡೆಸಿದರು. ಪ್ರಧಾನಿಯಾಗಿ ಮೊದಲ ಅವಧಿಯಲ್ಲಿ ಚೆನ್ನಾಗಿಯೇ ಕಾರ್ಯನಿರ್ವಹಿಸಿದರು. ಆದರೆ ಎರಡನೆಯ ಅವಧಿಯಲ್ಲಿ ಹಲವಾರು ವಿವಾದಗಳು ಉಂಟಾದವು, ದುರ್ಬಲ ಎನಿಸಿಕೊಂಡರು.

ಪಾಂಡಿತ್ಯವು ಪಿ.ವಿ.ನರಸಿಂಹ ರಾವ್ ಅವರಲ್ಲೂ ಇತ್ತು. ಪಾಂಡಿತ್ಯದ ಜತೆಗೆ ಬೇಕಾದ ರಾಜಕೀಯ ಅನುಭವ, ಚಾಣಾಕ್ಷತೆ ಹಾಗೂ ದೃಢತೆ ಸಿಂಗ್ ಅವರಲ್ಲಿ ಇರಲಿಲ್ಲ. ಸೌಮ್ಯ, ಮೃದು, ನಮ್ರ... ಈ ಬಗೆಯ ಸ್ವಭಾವಗಳು ರಾಜಕಾರಣದಲ್ಲಿ ದೌರ್ಬಲ್ಯ ಆಗಿಬಿಡುತ್ತವೆ. ಆರ್ಥಿಕತಜ್ಞರಾಗಿ ನೋಟು ರದ್ದತಿ ಬಗೆಗೆ ಅವರು ವ್ಯಕ್ತಪಡಿಸಿದ ಅಭಿಪ್ರಾಯ ಸರಿಯಾಗಿತ್ತು. ರಿಸರ್ವ್ ಬ್ಯಾಂಕ್ ಅನ್ನು ಆಗ ಪ್ರಧಾನಮಂತ್ರಿ ಕಚೇರಿಯು ರಿಮೋಟ್ ಕಂಟ್ರೋಲ್ ಮಾಡಿತ್ತು. ಆದರೆ, ಅದಕ್ಕೂ ಹಿಂದೆ ಪ್ರಧಾನಮಂತ್ರಿ ಕಚೇರಿಯೇ ಆ ಬಗೆಯ ನಿಯಂತ್ರಣಕ್ಕೊಳಗಾಗಿತ್ತು! ಒಟ್ಟಾರೆ ಸಿಂಗ್ ಅವರಿಂದ ದೇಶಕ್ಕೆ ಒಳಿತೇ ಹೆಚ್ಚು ಆಗಿದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಮಾರುಕಟ್ಟೆ ವಿಸ್ತರಣೆ ಸಂತಸದಾಯಕ

ಕೆಎಂಎಫ್ ಕಡೆಗೂ ಪ್ರೋಟೀನ್‌ಭರಿತವಾದ ಇಡ್ಲಿ ಮತ್ತು ದೋಸೆ ಹಿಟ್ಟನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು, ಸಂತೋಷದಾಯಕ ಸಂಗತಿ. ಇದರ ಬಗ್ಗೆ ಈ ಹಿಂದೆ ಮೂಡಿದ್ದ ಕೆಲವು ಗೊಂದಲಗಳಿಗೆ ಈಗ ತೆರೆಬಿದ್ದಿದೆ. ಈಗ ಪ್ರಾಯೋಗಿಕ ನೆಲೆಯಲ್ಲಿ ಬೆಂಗಳೂರಿನಲ್ಲಿ ಮಾರಾಟವಾಗಲಿರುವ ಈ ಉತ್ಪನ್ನಗಳು ಮುಂದೆ ರಾಜ್ಯದ ಎಲ್ಲೆಡೆ ಮಾರಾಟಕ್ಕೆ ಲಭ್ಯವಾಗಲಿವೆ ಎಂಬ ಮಾಹಿತಿ ಇದೆ. ಕೆಎಂಎಫ್ ಇತ್ತೀಚಿನ ವರ್ಷಗಳಲ್ಲಿ ವೈವಿಧ್ಯಮಯ ಉತ್ಪನ್ನಗಳ ತಯಾರಿಕೆ ಹಾಗೂ ಮಾರಾಟಕ್ಕೆ ಒತ್ತು ನೀಡುತ್ತಿರುವುದು ಗಮನಾರ್ಹ. ಹೊರರಾಜ್ಯ ಹಾಗೂ ಹೊರ ದೇಶಗಳಲ್ಲಿ ಕೂಡ ಮಾರುಕಟ್ಟೆ ವಿಸ್ತರಣೆಗೆ ಯೋಜನೆಗಳನ್ನು ರೂಪಿಸುತ್ತಿರುವುದು ಮೆಚ್ಚತಕ್ಕ ಅಂಶ. ನಂದಿನಿಯ ನಾಗಾಲೋಟ ಇದೇ ರೀತಿ ಮುಂದುವರಿಯಲಿ. ಜತೆಗೆ ಗುಣಮಟ್ಟವನ್ನೂ ಕಾಯ್ದುಕೊಳ್ಳಲಿ. ಈ ದಿಸೆಯಲ್ಲಿ ಆಡಳಿತ ಮಂಡಳಿಯು ಹೆಚ್ಚು ಮುತುವರ್ಜಿ ವಹಿಸಬೇಕು

ಕೆ.ವಿ.ವಾಸು, ಮೈಸೂರು

ವಿರಾಟ್: ಕೆಣಕಾಟ ಬೇಕಿತ್ತೇ?

ವಿರಾಟ್ ಕೊಹ್ಲಿ ಒಂದು ವೇಳೆ ಯಶಸ್ವಿ ಜೈಸ್ವಾಲ್ ಸಲುವಾಗಿ ತಮ್ಮ ವಿಕೆಟ್ ತ್ಯಾಗ ಮಾಡಿದ್ದಿದ್ದರೆ ಅವರು ಬಾಹುಬಲಿ ಆಗುತ್ತಿದ್ದರು... ಆಸ್ಟ್ರೇಲಿಯಾ ತಂಡದ ಬರೀ 19 ವರ್ಷ ವಯಸ್ಸಿನ ಹುಡುಗ ಸ್ಯಾಮ್ ಕಾನ್ಸಟೆಸ್‌ನನ್ನು ಕೆಣಕಲು ಹೋಗಿ ಸ್ವತಃ ಅವಮಾನಕ್ಕೆ ಈಡಾದರು. ರೋಹಿತ್ ಶರ್ಮ ಮತ್ತು ಕೊಹ್ಲಿ ಅವರು ಆಸ್ಟ್ರೇಲಿಯಾದವರಿಗೆ ಕ್ಯಾಚ್ ಅಭ್ಯಾಸ ಮಾಡಿಸುತ್ತಿದ್ದಾರೆ. ಬೀಸಿ ಛಾಟಿ!

ಎಸ್.ಕೆ. ಕುಮಾರ್, ಬೇಲೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೇಶದಲ್ಲಿ ಶೇ 72.54ರಷ್ಟು ಹೆಚ್ಚಳ; ಬೆಂಗಳೂರಿನಲ್ಲಿಯೂ ಗಂಭೀರ ಸಮಸ್ಯೆ

ಇ–ತ್ಯಾಜ್ಯ ಬೇಕಿದೆ ಪರಿಹಾರ

ಭಾರತದಲ್ಲಿ ಕಳೆದ ಐದು ವರ್ಷಗಳಲ್ಲಿ ಇ–ತ್ಯಾಜ್ಯದ ಸೃಷ್ಟಿ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಆದರೆ, ಅದಕ್ಕೆ ತಕ್ಕಂತೆ ಅದರ ವೈಜ್ಞಾನಿಕ ವಿಲೇವಾರಿ ಮತ್ತು ಸಂಸ್ಕರಣೆಯ ಕೆಲಸಗಳು ನಡೆಯುತ್ತಿಲ್ಲ. ಸಿಲಿಕಾನ್ ಸಿಟಿ ಎಂದೇ ಹೆಸರಾಗಿರುವ ಬೆಂಗಳೂರು, ದೇಶದಲ್ಲಿ ಅತಿ ಹೆಚ್ಚು ಇ–ತ್ಯಾಜ್ಯ ಸೃಷ್ಟಿಯಾಗುವ ನಗರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ

ಭಾರತದಲ್ಲಿ ಇ–ತ್ಯಾಜ್ಯ ಭಾರಿ ಪ್ರಮಾಣದಲ್ಲಿ ಸೃಷ್ಟಿಯಾಗುತ್ತಿದ್ದು, ಐದು ವರ್ಷಗಳಲ್ಲಿ ಶೇ 72.54ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಈ ಬಗ್ಗೆ ರಾಜ್ಯಸಭೆಯಲ್ಲಿ 2024ರ ಡಿ.16ರಂದು ಮಾಹಿತಿ ನೀಡಿರುವ ವಸತಿ ಮತ್ತು ನಗರ ವ್ಯವಹಾರಗಳ ರಾಜ್ಯ ಸಚಿವ ಟೋಖನ್ ಸಾಹು ಅವರು, 2019–20ರಲ್ಲಿ 10,14,961 ಟನ್‌ಗಳಷ್ಟಿದ್ದ (ಎಂಟಿ) ಇ–ತ್ಯಾಜ್ಯದ ಪ್ರಮಾಣ 2023–24ರ ಹೊತ್ತಿಗೆ 17,51,236 ಟನ್‌ಗಳಿಗೆ ಹೆಚ್ಚಳವಾಗಿದೆ ಎಂದಿದ್ದಾರೆ.

ಕೈಗಾರಿಕೀಕರಣ ಮತ್ತು ನಗರೀಕರಣದಿಂದ ದೇಶದಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆ ಹೆಚ್ಚಾಗಿದೆ. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ಬಳಕೆ ಹೆಚ್ಚಾದಂತೆ, ಇ–ತ್ಯಾಜ್ಯವೂ ಹೆಚ್ಚುತ್ತಿದೆ. ಗಮನಾರ್ಹ ವಿಚಾರವೆಂದರೆ, ಕೋವಿಡ್ ಸಂದರ್ಭದಲ್ಲಿ, ಅಂದರೆ, 2019ರಿಂದ 2021ರವರೆಗೆ, ಇ–ತ್ಯಾಜ್ಯವು ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ವರ್ಕ್ ಫ್ರಮ್ ಹೋಮ್, ಆನ್‌ಲೈನ್ ಪಾಠ, ಪ್ರವಚನಗಳು ಹೆಚ್ಚಾಗಿದ್ದೇ ಇದಕ್ಕೆ ಕಾರಣ. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಸಾಧನಗಳ (ಇಇಇ) ಸರಾಸರಿ ಆಯಸ್ಸು ಮತ್ತು ಅವುಗಳ ಉತ್ಪಾದಕರಿಂದ ಪಡೆದ ಮಾರಾಟದ ದತ್ತಾಂಶ ಆಧರಿಸಿ ರಾಷ್ಟ್ರೀಯ ಮಟ್ಟದಲ್ಲಿ ಇ–ತ್ಯಾಜ್ಯದ ಪ್ರಮಾಣವನ್ನು ಲೆಕ್ಕ ಹಾಕಲಾಗುತ್ತದೆ ಎಂದು ಸಚಿವರು ತಿಳಿಸಿದ್ದಾರೆ.

ಇ–ತ್ಯಾಜ್ಯವನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡಬೇಕು, ಸೂಕ್ತ ರೀತಿಯಲ್ಲಿ ಸಂಸ್ಕರಣೆ ಮಾಡಬೇಕು. ಇಲ್ಲದಿದ್ದರೆ ಅವುಗಳಲ್ಲಿರುವ ಸೀಸ, ಪಾದರಸ, ಕ್ಯಾಡ್ಮಿಯಂ, ಸಿಲಿಕಾನ್, ತಾಮ್ರ, ಕೋಬಾಲ್ಟ್, ಆರ್ಸೆನಿಕ್ ಮುಂತಾದ ಲೋಹಗಳು ಜಲಮೂಲ ಮತ್ತು ಮಣ್ಣು ಸೇರಿ ಮಾಲಿನ್ಯಕ್ಕೆ ಕಾರಣವಾಗುತ್ತವೆ. ಮನುಷ್ಯನ ಆರೋಗ್ಯದ ಮೇಲೆಯೂ ಇವು ಗಂಭೀರ ಪರಿಣಾಮ ಉಂಟುಮಾಡುತ್ತವೆ.

ಕೇಂದ್ರ ಸರ್ಕಾರವು 'ವಿಸ್ತರಿತ ಉತ್ಪಾದಕರ ಜವಾಬ್ದಾರಿ'ಯ (ಇಪಿಆರ್) ಮೂಲಕ ಇ–ತ್ಯಾಜ್ಯ ಸಂಗ್ರಹಣೆ ಮತ್ತು ಸಂಸ್ಕರಣೆಯ ಕಾರ್ಯದಲ್ಲಿ ಸಾಧನಗಳ ಉತ್ಪಾದಕರನ್ನೂ ಒಳಗೊಳ್ಳುತ್ತಿದೆ. ಭಾರತದಲ್ಲಿ ಇ–ತ್ಯಾಜ್ಯ ಸಂಗ್ರಹಣೆ ಮತ್ತು ಸಂಸ್ಕರಣೆ ಅಸಾಂಪ್ರದಾಯಿಕ ರೀತಿಯಲ್ಲಿಯೇ ಹೆಚ್ಚಾಗಿ ನಡೆಯುತ್ತಿದೆ. ಇದು ಕೂಡ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಹೀಗಾಗಿ ಅವುಗಳ ಸಂಸ್ಕರಣೆ ಮತ್ತು ಮರುಬಳಕೆಯ ಕಾರ್ಯದಲ್ಲಿ ಉತ್ಪಾದಕರು, ಮಾರಾಟಗಾರರ ನೋಂದಣಿ ಮುಂತಾದ ಕ್ರಮಗಳ ಮೂಲಕ ಇ–ತ್ಯಾಜ್ಯದ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಬಹುದು ಎನ್ನುವುದು ಕೇಂದ್ರದ ಲೆಕ್ಕಾಚಾರ.

ಹೆಚ್ಚಿನ ರಾಜ್ಯಗಳಲ್ಲಿ ಇ–ತ್ಯಾಜ್ಯ ಸಂಸ್ಕರಣೆಯ ವ್ಯವಸ್ಥೆ ಇದೆ. 2019–20ರಲ್ಲಿ ಶೇ 22ರಷ್ಟು ಇದ್ದ ಇ–ತ್ಯಾಜ್ಯ ಸಂಸ್ಕರಣೆಯ ಪ್ರಮಾಣವು 2023–24ರ ಹೊತ್ತಿಗೆ ಶೇ 43ಕ್ಕೆ ಏರಿಕೆಯಾಗಿದೆ. ಇಷ್ಟಾದರೂ ಶೇ 53ರಷ್ಟು ಪ್ರಮಾಣ ಸಂಸ್ಕರಣೆಯಾಗದೆಯೇ ಉಳಿಯುತ್ತಿದೆ. ಇ–ತ್ಯಾಜ್ಯ ಸೃಷ್ಟಿ ಆಗುತ್ತಿರುವ ಪ್ರಮಾಣ ಮತ್ತು ಸಂಸ್ಕರಣೆ ಆಗುತ್ತಿರುವ ಪ್ರಮಾಣದ ನಡುವೆ ಭಾರಿ ಅಂತರವಿರುವ ಬಗ್ಗೆ ಕಳವಳ ವ್ಯಕ್ತವಾಗಿದೆ.

ರಾಷ್ಟ್ರೀಯ ಮಟ್ಟದಲ್ಲಿ ಇ–ತ್ಯಾಜ್ಯದ ಪ್ರಮಾಣವನ್ನು ಅಳೆಯಲಾಗುತ್ತಿದ್ದು, ರಾಜ್ಯಗಳ ಮಟ್ಟದಲ್ಲಿ ಅದರ ಪ್ರಮಾಣ ಎಷ್ಟಿದೆ ಎನ್ನುವುದರ ಇತ್ತೀಚಿನ ಮಾಹಿತಿ ಲಭ್ಯವಿಲ್ಲ ಎಂದು ಕೇಂದ್ರವು ತಿಳಿಸಿದೆ. ಆದರೆ, ಈ ಬಗ್ಗೆ ಹಿಂದೆ ಕೇಂದ್ರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ಪ್ರಕಟಿಸಿದ್ದ ದತ್ತಾಂಶವನ್ನು ಗಮನಿಸಿದರೆ, ದೇಶದ ಇ–ತ್ಯಾಜ್ಯ ಸೃಷ್ಟಿಯ ಒಂದು ಅಂದಾಜು ಸಿಗುತ್ತದೆ.

ಮೂರನೇ ಸ್ಥಾನದಲ್ಲಿ ಬೆಂಗಳೂರು...

ರಾಷ್ಟ್ರೀಯ ಮಟ್ಟದಲ್ಲಿ ಇ–ತ್ಯಾಜ್ಯದ ಸೃಷ್ಟಿಯಲ್ಲಿ ಕರ್ನಾಟಕ ಏಳನೇ ಸ್ಥಾನ ಪಡೆದಿದೆ. ಆದರೆ, ಐಟಿ ರಾಜಧಾನಿ ಎಂದೇ ಹೆಸರಾಗಿರುವ ಬೆಂಗಳೂರು ದೇಶದ ನಗರಗಳ ಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆದಿದೆ. ದೇಶದ ಇ–ತ್ಯಾಜ್ಯದಲ್ಲಿ ಸಿಲಿಕಾನ್ ಸಿಟಿ ಶೇ 10.1ರಷ್ಟು ಪಾಲು ಪಡೆದಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಇ–ತ್ಯಾಜ್ಯ ವಿಲೇವಾರಿಗಾಗಿ ನಗರದ ವಿವಿಧ ಭಾಗಗಳಲ್ಲಿ 20 ಇ–ತ್ಯಾಜ್ಯ ಕೇಂದ್ರಗಳನ್ನು ಸ್ಥಾಪಿಸಿದೆ. ಆದರೆ, ರಾಜ್ಯ ರಾಜಧಾನಿಯಲ್ಲಿ ಇ–ತ್ಯಾಜ್ಯದ ಸಂಗ್ರಹ ಮತ್ತು ವಿಲೇವಾರಿ ಅಸಾಂಪ್ರದಾಯಿಕ ರೀತಿಯಲ್ಲಿಯೇ ಹೆಚ್ಚಾಗಿ ನಡೆಯುತ್ತಿದೆ. ಸುಸ್ಥಿರ ಅಭಿವೃದ್ಧಿ ಕೇಂದ್ರವು 2022ರಲ್ಲಿ ನಡೆಸಿದ ಅಧ್ಯಯನದಲ್ಲಿ, ನಗರದ ಶೇ 75ಕ್ಕೂ ಹೆಚ್ಚು ಮಂದಿ ಇ–ತ್ಯಾಜ್ಯವನ್ನು ಸಮರ್ಪಕ ರೀತಿಯಲ್ಲಿ ವಿಲೇವಾರಿ ಮಾಡುತ್ತಿಲ್ಲ ಎನ್ನುವುದು ಕಂಡುಬಂದಿತ್ತು. ಮನೆಗಳಿಂದ ಹಸಿ ಕಸ ಮತ್ತು ಒಣ ಕಸದಂತೆ ಎಲೆಕ್ಟ್ರಾನಿಕ್ ಕಸವನ್ನೂ ಸಂಗ್ರಹಿಸಬೇಕು. ಆದರೆ, ಬಹುತೇಕರು ಒಣಕಸದಲ್ಲಿಯೇ ಇ–ತ್ಯಾಜ್ಯವನ್ನೂ ಸೇರಿಸಿ ವಿಲೇವಾರಿ ಮಾಡುತ್ತಿದ್ದಾರೆ. ನಗರದಲ್ಲಿ ಸಂಗ್ರಹವಾಗುತ್ತಿರುವ ಘನ ತ್ಯಾಜ್ಯದಲ್ಲಿ ಶೇ 2ರಷ್ಟು ಪ್ರಮಾಣವು ಇ–ತ್ಯಾಜ್ಯ ಎಂದು ಅಧ್ಯಯನ ತಿಳಿಸಿತ್ತು. ಸಾಹಸ್, ರಾಶಿ ಸೇರಿದಂತೆ ಹಲವು ಸಂಸ್ಥೆಗಳೂ ಕೂಡ ಇ–ತ್ಯಾಜ್ಯ ನಿರ್ವಹಣೆ ಕಾರ್ಯದಲ್ಲಿ ತೊಡಗಿವೆ.

ಆಧಾರ: ಡೌನ್ ಟು ಅರ್ಥ್, ರಾಜ್ಯಸಭೆಯಲ್ಲಿ ಸಚಿವರ ಉತ್ತರ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ, ವಿಶ್ವ ಆರೋಗ್ಯ ಸಂಸ್ಥೆ

ದೇಶದಲ್ಲಿ ಇ–ತ್ಯಾಜ್ಯ ಉತ್ಪಾದನೆಯ ಪ್ರಮಾಣ



ಇ–ತ್ಯಾಜ್ಯ ಪಟ್ಟಿಯಲ್ಲಿವೆ 106 ಸಾಧನಗಳು

ಟಿವಿ, ಮೊಬೈಲ್, ಫ್ರಿಜ್, ವಾಷಿಂಗ್ ಮಷೀನ್, ಕಂಪ್ಯೂಟರ್, ಲ್ಯಾಪ್‌ಟಾಪ್, ಪ್ರಿಂಟರ್, ಏರ್‌ಕಂಡೀಷನರ್ ಮುಂತಾದ ಹಾಳಾದ, ಮುರಿದ ಇಇಇ ಸಾಧನಗಳ ಭಾಗಗಳು ಇ–ತ್ಯಾಜ್ಯ ಎನಿಸಿಕೊಳ್ಳುತ್ತವೆ. ಇಇಇ ಸಾಧನಗಳು ಹಾಳಾದರೆ, ಮುರಿದುಹೋದರೆ, ನಿರುಪಯುಕ್ತವಾದರೆ, ಅವನ್ನು ತ್ಯಾಜ್ಯವೆಂದು ವಿಲೇವಾರಿ ಮಾಡುತ್ತಾರೆ. ಇ–ತ್ಯಾಜ್ಯ (ನಿರ್ವಹಣೆ) ನಿಯಮ–2016ರ ಪ್ರಕಾರ, 21 ಇಇಇ ಸಾಧನಗಳನ್ನು ಮಾತ್ರ ಇ–ತ್ಯಾಜ್ಯದ ಪಟ್ಟಿಯಲ್ಲಿ ಸೇರಿಸಲಾಗಿತ್ತು. ಇ–ತ್ಯಾಜ್ಯ (ನಿರ್ವಹಣೆ) ನಿಯಮ–2022ರ ಪ್ರಕಾರ, ಪಟ್ಟಿಯನ್ನು ವಿಸ್ತರಿಸಲಾಗಿದೆ. ಏ. 1, 2023ರಿಂದ ಈ ಪಟ್ಟಿಯನ್ನು ವಿಸ್ತರಿಸಲಾಗಿದ್ದು, 106 ಇಇಇ ಸಾಧನಗಳನ್ನು ಅದರಲ್ಲಿ ಸೇರಿಸಲಾಗಿದೆ. ಹೀಗಾಗಿ ದೇಶದಲ್ಲಿ ಇನ್ನು ಮುಂದೆ ಇ–ತ್ಯಾಜ್ಯದ ಪ್ರಮಾಣ ಇನ್ನೂ ಹೆಚ್ಚಳವಾಗುವ ಸಾಧ್ಯತೆ ಇದೆ.

ಜಾಗತಿಕ ಮಟ್ಟದ ಸಮಸ್ಯೆ

- ಜಾಗತಿಕವಾಗಿ 6.2 ಕೋಟಿ ಟನ್ (2022ರಲ್ಲಿ) ಇ–ತ್ಯಾಜ್ಯ ಸೃಷ್ಟಿ
- ಶೇ 22.3ರಷ್ಟು ಮಾತ್ರ ಸಂಗ್ರಹಣೆ ಮತ್ತು ಮರುಬಳಕೆ
- ಇ–ತ್ಯಾಜ್ಯ ಸಂಸ್ಕರಿಸಿದಾಗ ಹೆಚ್ಚಿನ ಸಂದರ್ಭಗಳಲ್ಲಿ ಹೊರಬರುವ ಲೋಹ: ಸೀಸ
- ಅಸಾಂಪ್ರದಾಯಿಕ ಇ–ತ್ಯಾಜ್ಯ ಸಂಸ್ಕರಣೆಯಿಂದ ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ
- ಮಹಿಳೆಯರು, ಮಕ್ಕಳ ಆರೋಗ್ಯದ ಮೇಲೆ ಇ–ತ್ಯಾಜ್ಯದಿಂದ ಹೆಚ್ಚು ಪರಿಣಾಮ



ಪ್ರಮುಖ ರಾಜ್ಯಗಳಲ್ಲಿ ವಾರ್ಷಿಕ ಇ-ತ್ಯಾಜ್ಯ ಸೃಷ್ಟಿ
(ಟನ್‌ಗಳಲ್ಲಿ)



ಪ್ರಮುಖ ನಗರಗಳಲ್ಲಿ ವಾರ್ಷಿಕ ಇ-ತ್ಯಾಜ್ಯ ಸೃಷ್ಟಿ
(ಟನ್‌ಗಳಲ್ಲಿ)



ಮಕ್ಕಳ ರಕ್ಷಣೆಗೆ ಡಬ್ಲ್ಯುಎಚ್‌ಒ ಕರೆ

2021ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಇ–ತ್ಯಾಜ್ಯ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ತನ್ನ ಮೊದಲ ಜಾಗತಿಕ ವರದಿಯನ್ನು ಬಿಡುಗಡೆಗೊಳಿಸಿತ್ತು. ತ್ಯಾಜ್ಯ ಶೇಖರಣೆಯ ಕೆಲಸದಲ್ಲಿ ಹೆಚ್ಚಾಗಿ ಮಕ್ಕಳೇ ತೊಡಗುವುದರಿಂದ ಅವರಿಗೆ ಗಂಭೀರ ಪರಿಣಾಮಗಳ ಅಪಾಯ ಇದೆ ಎಂದು ಎಚ್ಚರಿಸಿತ್ತು. ಮಾಹಿತಿ ತಂತ್ರಜ್ಞಾನ ಕ್ಷೇತ್ರ ಬೆಳೆದಂತೆ ಹೆಚ್ಚಾಗುತ್ತಿರುವ ಇ–ತ್ಯಾಜ್ಯ ಸಮಸ್ಯೆಯಿಂದ ಮಕ್ಕಳನ್ನು ರಕ್ಷಿಸಲು ಸೂಕ್ತ ಕಾರ್ಯಯೋಜನೆ ರೂಪಿಸುವ ಅಗತ್ಯವಿದೆ ಎಂದಿತ್ತು. ಈ ದಿಸೆಯಲ್ಲಿ ಆರೋಗ್ಯ ಕ್ಷೇತ್ರದ ಕಾರ್ಯಕರ್ತರಿಗೆ, ಆರೋಗ್ಯ ಸೇವೆ ಒದಗಿಸುವವರಿಗೆ ಡಬ್ಲ್ಯುಎಚ್‌ಒ ತರಬೇತಿ ಸಾಧನಗಳನ್ನೂ ರೂಪಿಸಿತ್ತು.

ಇ–ತ್ಯಾಜ್ಯ ವಿಲೇವಾರಿಯನ್ನು ಬಹಳ ಕಡೆ ಅಸಾಂಪ್ರದಾಯಿಕವಾಗಿ, ಅವೈಜ್ಞಾನಿಕವಾಗಿ ಮಾಡಲಾಗುತ್ತಿದೆ; ಅದರಿಂದ ವಾಯು ಮಾಲಿನ್ಯ ಮತ್ತು ಜಲ ಮಾಲಿನ್ಯ ಕೂಡ ಹೆಚ್ಚುತ್ತಿದೆ ಎಂದು ಡಬ್ಲ್ಯುಎಚ್‌ಒ ಕಳವಳ ವ್ಯಕ್ತಪಡಿಸಿತ್ತು. ಈ ದಿಸೆಯಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಯೋಜನೆಗಳನ್ನು ಹಮ್ಮಿಕೊಳ್ಳುವಂತೆ ಕರೆ ನೀಡಿತ್ತು.

ಸಿನಿ ಬಿಟ್ಸ್

'ತಲ್ವಾರ್' ಹಿಡಿದ ಧರ್ಮ ಕೀರ್ತಿರಾಜ್

ಧರ್ಮ ಕೀರ್ತಿರಾಜ್

ನಟ ಧರ್ಮ ಕೀರ್ತಿರಾಜ್ ಮಾಸ್ ಪಾತ್ರದಲ್ಲಿ ಕಾಣಿಸಿಕೊಂಡಿರುವ 'ತಲ್ವಾರ್' ಚಿತ್ರದ ಮೊದಲ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಹಿಂದೆ 'ಮಮ್ತಾಜ್' ಚಿತ್ರ ನಿರ್ದೇಶಿಸಿದ್ದ ಮುರಳಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಇದೊಂದು ಆ್ಯಕ್ಷನ್ ಹಾಗೂ ಮದರ್ ಸೆಂಟಿಮೆಂಟ್ ಹೊಂದಿರುವ ಚಿತ್ರ. ಇದರಲ್ಲಿ ನನ್ನ ಪಾತ್ರ ವಿಭಿನ್ನವಾಗಿದೆ. ನನಗಿದು ವಿಶೇಷ ಸಿನಿಮಾ ಎನ್ನಬಹುದು. ದುಡ್ಡಿಗಾಗಿ ಏನನ್ನಾದರೂ ಮಾಡಲು ಸಿದ್ಧವಾಗಿರುವ ಹುಡುಗನ ಪಾತ್ರ ನನ್ನದು. ತನ್ನ ಬದುಕಿನ ಕುರಿತು ಪಶ್ಚಾತ್ತಾಪಪಡುವ ಆ ಹುಡುಗ ಮುಂದೇನು ಮಾಡುತ್ತಾನೆ ಎಂಬುದನ್ನು ಈ ಸಿನಿಮಾ ಮೂಲಕ ಹೇಳಿದ್ದೇವೆ' ಎಂದರು ಧರ್ಮ ಕೀರ್ತಿರಾಜ್.

ಟಚ್‌ಸ್ಟೋನ್ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಛಾಯಾಚಿತ್ರಗ್ರಾಹಕ ಸುರೇಶ್ ಭೈರಸಂದ್ರ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. 'ರೌಡಿಸಂ ಹಾಗೂ ಸಂಬಂಧಗಳ ಸುತ್ತ ನಡೆವ ಕಥೆ. ನಿರ್ದೇಶಕನಾಗಿ ನನಗೆ ಮೂರನೇ ಚಿತ್ರ. ನಾನು ಹಾಸ್ಟೆಲ್‌ನಲ್ಲಿದ್ದಾಗ ನಡೆದ ನೈಜಘಟನೆ ಇಟ್ಟುಕೊಂಡು ಈ ಕಥೆ ಮಾಡಿದ್ದೇನೆ. ಚಿತ್ರ ಬಿಡುಗಡೆಗೆ ಸಿದ್ಧವಿದ್ದು ಶೀಘ್ರದಲ್ಲಿ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ಪ್ರವೀಣ್ ಕೆ.ಬಿ ಸಂಗೀತವಿದೆ. ನಾಯಕಿಯಾಗಿ ಅದಿತಿ ಕಾಣಿಸಿಕೊಂಡಿದ್ದಾರೆ. ಜೆಕೆ, ಅವಿನಾಶ್, ಶರತ್ ಲೋಹಿತಾಶ್ವ ಮುಂತಾದವರು ಚಿತ್ರದಲ್ಲಿದ್ದಾರೆ.

'ಕುಡ್ಲ ನಮ್ದು ಊರು' ಎಂದ ಹೊಸಬರು

ಬಹುತೇಕ ಹೊಸಬರೇ ಸೇರಿ ನಿರ್ಮಿಸಿರುವ 'ಕುಡ್ಲ ನಮ್ದು ಊರು' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ದುರ್ಗಾಪ್ರಸಾದ್ ಚಿತ್ರವನ್ನು ನಿರ್ದೇಶಿಸುವುದರ ಜೊತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

'ಶೀರ್ಷಿಕೆಯೇ ಹೇಳುವಂತೆ ದಕ್ಷಿಣ ಕನ್ನಡದ ಕಡಲತಡಿಯ ಕಥೆಯಿದು. ಕರಾವಳಿ ಭಾಗದಲ್ಲಿ ನಡೆದ ಒಂದಷ್ಟು ನೈಜ ಘಟನೆಗಳನ್ನು ಆಧಾರವಾಗಿಟ್ಟುಕೊಂಡು, ಅದನ್ನು ಸಿನಿಮಾ ರೂಪದಲ್ಲಿ ತೆರೆಗೆ ತರುತ್ತಿದ್ದೇವೆ. 1990ರ ದಶಕದ ಹುಡುಗರ ಬಾಲ್ಯ, ಅವರ ಅನುಭವವನ್ನು ಈ ಚಿತ್ರ ನೆನಪಿಸುತ್ತದೆ. ಬಹುತೇಕ ಕರಾವಳಿ ಭಾಗದ ಸ್ಥಳೀಯ ಕಲಾವಿದರೇ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ರಮೇಶ್, ಪ್ರಕಾಶ್ ತುಮ್ಮಿನಾಡು, ಸ್ವರಾಜ್ ಶೆಟ್ಟಿ, ಶ್ರೇಯಾ ಶೆಟ್ಟಿ, ಅನಿಕಾ ಶೆಟ್ಟಿ ಮುಂತಾದವರು ತಾರಾಗಣದಲ್ಲಿದ್ದಾರೆ. ಮೂರು ಹಾಡುಗಳಿದ್ದು, ನಿತಿನ್ ಶಿವರಾಮ್ ಸಂಗೀತ ಸಂಯೋಜಿಸಿದ್ದಾರೆ. ಮಯೂರ್ ಆರ್.ಶೆಟ್ಟಿ ಛಾಯಾ-ಚಿತ್ರಗ್ರಹಣ, ನಿಶಿತ್ ಪೂಜಾರಿ ಸಂಕಲನವಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಸುತ್ತಮುತ್ತ ಚಿತ್ರೀಕರಣಗೊಂಡಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಇಸ್ರೇಲ್ ನಿಯಂತ್ರಣದ ಗೋಲನ್ ಹೈಟ್ಸ್‌ನಲ್ಲಿ ಕಾರ್ಯಾಚರಿಸುತ್ತಿರುವ, ಇಸ್ರೇಲ್ ಮತ್ತು ಸಿರಿಯಾ ನಡುವೆ ಕದನ ವಿರಾಮ ಕಾಯ್ದುಕೊಳ್ಳುವ ಉದ್ದೇಶದ ವಿಶ್ವಸಂಸ್ಥೆಯ ವೀಕ್ಷಕ ಪಡೆಯ ಹಂಗಾಮಿ ಕಮಾಂಡರ್ ಆಗಿದ್ದ ಭಾರತದ ಬ್ರಿಗೇಡಿಯರ್ ಜನರಲ್ ಅಮಿತಾಭ್ ಝಾ ಅವನ್ನು ಇಸ್ರೇಲ್ ಪಡೆಗಳು ಹತ್ಯೆ ಮಾಡಿವೆ ಎಂಬ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ ಇದು ಸುಳ್ಳು.

ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ, ಹಲವರು ಈ ಪೋಸ್ಟ್ ಅನ್ನು ಹಂಚಿಕೊಂಡಿರುವುದು ಕಂಡು ಬಂತು. ಇನ್ನಷ್ಟು ಜಾಲಾಡಿದಾಗ ಬ್ರಿಗೇಡಿಯರ್ ಝಾ ಅವರು ವೈದ್ಯಕೀಯ ಕಾರಣಗಳಿಂದ ಮೃತಪಟ್ಟಿದ್ದಾರೆ ಎಂದು ಭಾರತದ ಸೇನಾ ಅಧಿಕಾರಿಗಳ ಹೇಳಿಕೆಯನ್ನು ಉಲ್ಲೇಖಿಸಿ ಇಂಡಿಯಾ ಟುಡೇ ಮಾಡಿದ್ದ ವರದಿ ಸಿಕ್ಕಿತು. ಅಲ್ಲದೇ ಈ ಬಗ್ಗೆ ಭಾರತೀಯ ಸೇನೆ ಕೂಡ ತನ್ನ 'ಎಕ್ಸ್' ಖಾತೆಯಲ್ಲಿ ಟ್ವೀಟ್ ಮಾಡಿದೆ. ವೈದ್ಯಕೀಯ ಕಾರಣಗಳಿಂದಾಗಿ ಬ್ರಿಗೇಡಿಯರ್ ಅವರು ಮೃತಪಟ್ಟಿದ್ದಾರೆ ಎಂದು ಅದು ಸ್ಪಷ್ಟಪಡಿಸಿದೆ. ಹಾಗಾಗಿ, ಭಾರತೀಯ ಸೇನಾ ಅಧಿಕಾರಿಯನ್ನು ಇಸ್ರೇಲ್ ಸೇನೆ ಹತ್ಯೆ ಮಾಡಿದೆ ಎನ್ನುವುದು ಸುಳ್ಳು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

98

ವಿಸ್ಮಯ ವಿಶ್ವ!

ಈ ವಿಶ್ವವನ್ನು ಅರಿಯುವುದು ಕಷ್ಟ. ಇಂದ್ರಿಯಗಳಿಂದ ಅದನ್ನು ಅರಿಯಲಾಗದು. ಯಾಕೆಂದರ ನಮ್ಮ ಇಂದ್ರಿಯಗಳಿಗೆ ಮಿತಿಗಳಿವೆ. ಮನಸ್ಸಿನಿಂದಲೂ ಇದನ್ನು ಅರಿಯಲು ಆಗಲ್ಲ. ಯಾಕೆಂದರ ಈ ವಿಶ್ವ ಮನಸ್ಸಿಗೆ ಅತೀತವಾದದ್ದು. ಈ ವಿಶ್ವದಲ್ಲಿ ಯಾವುದು ಕಾಣುತ್ತಿದೆಯೋ ಅದು ಒಂದು ದಿನ ಇಲ್ಲವಾಗುತ್ತೈತಿ. ಯಾವುದು ಕಾಣುವುದಿಲ್ಲವೋ ಅದು ಸದಾ ಇರುತ್ತೈತಿ. ಇದು ಈ ಸೃಷ್ಟಿಯ ವಿಸ್ಮಯ. ಇಲ್ಲಿ ಯಾವುದಕ್ಕೆ ಸತ್ಯ ಎಂದು ಹೇಳಬೇಕು, ಯಾವುದಕ್ಕೆ ಅಸತ್ಯ ಎಂದು ಹೇಳಬೇಕು?

ಕಾಣುವುದೆಲ್ಲ ಸತ್ಯ ಅಲ್ಲ. ಕಾಣದೇ ಇರುವುದು ಅಸತ್ಯವಲ್ಲ. ನಿರ್ಧಾರ ಮಾಡುವುದು ಕಷ್ಟ. ಸತ್ಯ ಅಂದರ ಏನು? ಅಸತ್ಯ ಅಂದರ ಏನು? ಅಸತ್ಯ ಅಂದರ, ಯಾವುದು ಮೂರೂ ಕಾಲದಲ್ಲಿ ಇಲ್ಲವೋ ಅದಕ್ಕೆ ಅಸತ್ಯ ಎಂದು ಕರೀತೀವಿ. ಯಾವುದು ವರ್ತಮಾನ, ಭೂತ, ಭವಿಷ್ಯತ್ ಕಾಲದಲ್ಲಿ ಇಲ್ಲವೋ ಅದು ಅಸತ್ಯ. ಅಂದರ ಅದು ಅಸ್ತಿತ್ವದಲ್ಲೇ ಇಲ್ಲ. ಉದಾಹರಣೆಗೆ ಮೊಲದ ಕೋಡು. ಮೊಲಕ್ಕೆ ಕೋಡು ಎಂದಾದರೂ ನೋಡಿದ್ದೀರೇನು? ಇಲ್ಲ. ಈಗಲೂ ಇಲ್ಲ. ಮುಂದೂ ಇರೋದಿಲ್ಲ. ಅಂದರೆ ಕೇವಲ ಶಬ್ದ ಮಾತ್ರದಲ್ಲಿ ಇದ್ದು ನಿಜವಾಗಿ ಅಸ್ತಿತ್ವದಲ್ಲಿ ಇರೋದಿಲ್ಲ. ಸತ್ಯ ಎಂದರೆ ವರ್ತಮಾನ, ಭೂತ, ಭವಿಷ್ಯತ್ ಎಂಬ ಮೂರೂ ಕಾಲದಲ್ಲಿ ಇರುತ್ತದೆ.

ಈಗ ನಮ್ಮ ಮುಂದೆ ಒಂದು ಗಿಡ ಐತಿ. ಅದನ್ನು ಸತ್ಯ ಅಂತ ಕರಿಯಬೇಕೋ ಅಥವಾ ಅಸತ್ಯ ಎಂದು ಕರೆಯಬೇಕೋ? ಈ ಗಿಡ ಹಿಂದೆ ಇರಲಿಲ್ಲ. ಈಗ ಐತಿ. ಮುಂದೆ ಬಾಡಿ ಮಾಯವಾಗುತ್ತೈತಿ. ಇದಕ್ಕೆ ಅಸತ್ಯ ಅಂತ ಹೇಳೋಣ ಅಂದರ ಕಣ್ಣಿಗೆ ಕಾಣತೈತಿ. ಕಣ್ಣಿಗೆ ಕಾಣೋದನ್ನು ಅಸತ್ಯ ಅಂತ ಹೇಳೋದು ಹ್ಯಾಂಗ? ಈ ಜಗತ್ತು ಸತ್ಯವೋ ಅಸತ್ಯವೋ ಎಂದು ತಿಳಿಯುವುದಿಲ್ಲ. ವಚನದಿಂದ ನಿರ್ವಚನ ಮಾಡಲು ಸಾಧ್ಯವಾಗದೇ ಇರುವುದರಿಂದ ದೊಡ್ಡವರು ಇದನ್ನು ಅನಿರ್ವಚನೀಯ ಎಂದು ಕರೆದರು.

ನಮ್ಮ ಮನೆಯ ಮುಂದೆ ಕಾಲು ತೊಳೆದುಕೊಂಡ ನೀರು ಹರಿಯುವ ಜಾಗದಲ್ಲಿ ಒಂದು ಗಿಡ ನೆಟ್ಟಿರ್ತೇವಿ. ಆ ಗಿಡದಲ್ಲಿ ಒಂದು ಮೊಗ್ಗು ಕಾಣಿಸಿಕೊಂಡಾಗ, 'ಇದು ನಮ್ಮ ಮನೆಯ ಅಂಗಳದಲ್ಲಿ ಬೆಳೆದ ಮೊಗ್ಗು' ಅಂತ ನೀವು ಅದನ್ನು ಅರಳಿಸಲು ಹೋದರೆ ಪಕಳೆಗಳು ಉದುರುತ್ತವೆಯೇ ವಿನಾ ಮೊಗ್ಗು ಅರಳುವುದಿಲ್ಲ. ಆದರೆ 14. 71 ಕೋಟಿ ಕಿಮೀ ದೂರದಲ್ಲಿ ಇರುವ ಸೂರ್ಯ ಉದಯವಾದ ತಕ್ಷಣ ಅದು ತನ್ನಷ್ಟಕ್ಕೆ ತಾನೇ ಅರಳುತ್ತದೆ. ಸೂರ್ಯ ಆ ಮೊಗ್ಗನ್ನು ಮುಟ್ಟಿಲ್ಲ. ಎಲ್ಲೋ ದೂರದಲ್ಲಿ ಆಕಾಶದಲ್ಲಿ ಕಾಣಿಸಿಕೊಂಡಿದ್ದಾನೆ ಅಷ್ಟೇ. ಹಾಂಗ್ ಕಾಣಿಸಿಕೊಂಡಿದ್ದಕ್ಕೇ ಮೊಗ್ಗು ಹೂವಾಗಿ ಅರಳುತ್ತಿದೆ. ಇದು ನಿಸರ್ಗದ ವೈಶಿಷ್ಟ್ಯ. ಸೃಷ್ಟಿ ಎಷ್ಟು ಸಂವೇದನಾಶೀಲವಾಗಿ ಐತಿ. ನೋಡಿ ಕಲೀಬೇಕಲ್ಲ ಮನುಷ್ಯ.

ವಿದ್ಯುತ್ ಹುಟ್ಟಿದ್ದು ನೀರಲ್ಲಿ. ಅಂದರ ನೀರಲ್ಲಿ ವಿದ್ಯುತ್ ಐತಿ. ಆದರೆ ನೀರು ಕುಡಿದರೆ ವಿದ್ಯುತ್ ಶಾಕ್ ಹೊಡೆಯುವುದಿಲ್ಲ ಇದು ಏನು ವಿಚಿತ್ರ. ಇಂತಹ ನಿಸರ್ಗದ ಬೆರಕೆಯ ಕಂಡು ಬೆರಗಾದೆ ಕಾಣಾ ರಾಮನಾಥ ಅಂತಾರೆ ಶರಣರು. ಅತ್ಯಂತ ವಿಸ್ಮಯ ಈ ವಿಶ್ವ. ನಿಸರ್ಗದ ಅಡಿಯಲ್ಲಿ ಏನೇನು ಐತಿ ಎನ್ನುವುದನ್ನು ಸಂಪೂರ್ಣವಾಗಿ ಅರಿಯಲು ಇನ್ನೂ ಯಾರಿಗೂ ಸಾಧ್ಯವಾಗಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ಡಿಸೆಂಬರ್ 30, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಅಮಾವಾಸ್ಯೆ ಗಂ. 27-57 **ನಕ್ಷತ್ರ:** ಮೂಲ ಗಂ. 23-58 **ಯೋಗ:** ವೃದ್ಧಿ ಗಂ. 20-32 **ಕರಣ:** ಚತುಷ್ಪಾದ ಗಂ. 16-03, ಧನು ಮಾಸದ 14 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 1.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 06-56 **ಸೂರ್ಯಾಸ್ತ:** 06-10
ಮುಸ್ಲಿಂ ದಿನಾಂಕ: 27 ಜುಮಾದುಸ್ಸಾನಿ
ದಿನ ವಿಶೇಷ: ಎಳ್ಳಮಾವಾಸ್ಯೆ, ಅದೃಷ್ಟ ಸಂಖ್ಯೆ: 2, 8

ಮೇಷ: ಸಂಘ ಸಂಸ್ಥೆಗಳ ವಿಚಾರವನ್ನು ಮುಕ್ತವಾಗಿ ಚರ್ಚಿಸಿ ನಂತರದಲ್ಲಿ ಕೆಲಸಗಳನ್ನು ಕಾರ್ಯರೂಪಕ್ಕೆ ತರುವುದು ಉತ್ತಮ. ಕೋರ್ಟಿನ ವ್ಯವಹಾರಗಳು ಸಿಹಿ-ಕಹಿಯ ಮಿಶ್ರಫಲದಲ್ಲಿ ಇತ್ಯರ್ಥವಾಗಲಿವೆ. ನೇಕಾರರಿಗೆ ಉತ್ತಮ ದಿನ.

ವೃಷಭ: ಯಂತ್ರೋಪಕರಣಗಳ ಮಾರಾಟದಿಂದ ಮತ್ತು ಅದರ ಸೇವೆಯಿಂದ ಲಾಭ ಪಡೆಯುವಿರಿ. ಆಂಜನೇಯಸಹಿತನಾದ ಶ್ರೀರಾಮಚಂದ್ರನನ್ನು ಪೂಜಿಸಿಕೊಂಡು ಕೆಲಸ ಮುಂದುವರಿಸಿ ಫಲಕಾರಿಯಾಗುವುದು.

ಮಿಥುನ: ಸ್ನೇಹಪರ ವರ್ತನೆಯಿಂದ ಅಕ್ಕ ಪಕ್ಕದವರಲ್ಲಿ ಬಾಂಧವ್ಯ ಬೆಳೆಯಲಿದೆ. ದಿನಸಿ ವ್ಯವಹಾರಗಳಲ್ಲಿ ಹೂಡಿಕೆಯಿಂದ ಲಾಭವಾಗುವುದು. ಕುಟುಂಬದಲ್ಲಿ ಪರಿಸ್ಥಿತಿಯನ್ನು ಸುಲಭವಾಗಿ ನಿಭಾಯಿಸುವಿರಿ.

ಕರ್ಕಾಟಕ: ಅಗಾಧ ಅನುಭವ, ಪ್ರಯತ್ನ ಬಲ, ಆತ್ಮವಿಶ್ವಾಸದಿಂದ ರಂಗಕಲೆಯಲ್ಲಿ ಹೆಸರು ಮಾಡುವಂತಾಗಲಿದೆ. ಮಕ್ಕಳ ಭವಿಷ್ಯ ನಿರ್ಮಾಣಕ್ಕೆ ಗಮನಹರಿಸಬೇಕಾಗುತ್ತದೆ. ಇಲ್ಲವಾದರೆ ಸಮಸ್ಯೆ ಎದುರಾಗುವುದು.

ಸಿಂಹ: ನಿಶ್ಚಿತ ರೂಪದಲ್ಲಿ ಮತ್ತು ನಿಶ್ಚಿತ ಸಮಯಕ್ಕೆ ಸರಿಯಾಗಿ ಕೆಲಸಗಳು ಜರುಗಲಿವೆ. ನಾಯಕತ್ವದ ಹೊಣೆ ನಿಭಾಯಿಸುವುದು ಅನಿವಾರ್ಯ ಸೃಜನಶೀಲ ಯೋಜನೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವಿರಿ.

ಕನ್ಯಾ: ಆರ್ಥಿಕ ಸ್ಥಿತಿಯು ನಾನಾ ರೀತಿಯಲ್ಲಿ ಅವನತಿಯ ಹಂತವನ್ನು ಹೊಂದುವ ಪರಿಸ್ಥಿತಿ ಗೋಚರಕ್ಕೆ ಬರಬಹುದು, ಜಾಗ್ರತೆವಹಿಸಿ. ದಾಂಪತ್ಯದಲ್ಲಿ ಸಮಸ್ಯೆಗಳು ತೋರಿಬಂದರೂ ಮುಂದಿನ ದಿನಗಳಲ್ಲಿ ಸಂತಸವಿದೆ.

ತುಲಾ: ಕೈಗೊಂಡ ಪೂರ್ವನಿಯೋಜಿತ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆಯಲಿವೆ. ಪತ್ರಿಕಾ ವರದಿಗಾರರಿಗೆ ಕೆಲಸದಲ್ಲಿನ ದಕ್ಷತೆಯಿಂದ ಹೆಚ್ಚಿನ ಯಶಸ್ಸು ಕಾಣುವರು. ರೇಷ್ಮೆ ಬೆಳೆಗಾರರಿಗೆ ಹೆಚ್ಚಿನ ಕೆಲಸ ಇರಲಿದೆ.

ವೃಶ್ಚಿಕ: ಕಾಫಿ, ಕಾಳುಮೆಣಸು ಹಾಗೂ ಏಲಕ್ಕಿ ಬೆಳೆಗಾರರು ಉತ್ತಮ ಫಸಲನ್ನು ಎದುರು ನೋಡಬಹುದು. ಕ್ರೀಡಾಪಟುಗಳಿಗೆ ಸಂತಸದ ದಿನ. ಸಾಂಸಾರಿಕ ಜೀವನದಲ್ಲಿ ನೆಮ್ಮದಿ ಇರುವುದು. ಭೂ ವ್ಯವಹಾರಗಳು ಕೈಗೂಡುವುದು.

ಧನು: ಅಧಿಕಾರಿ ವರ್ಗದವರಲ್ಲಿ ಹಾಗೂ ಸಹಚರರಲ್ಲಿ ವೈಮನಸ್ಸು ದೂರಪಡಿಸಿಕೊಂಡು ಕೆಲಸಗಳನ್ನು ಮಾಡುವಲ್ಲಿ ಮುಂದಾಗುವಿರಿ. ಗೃಹ ನಿರ್ಮಾಣದ ಕೆಲಸವನ್ನು ಆರಂಭಿಸಲು ಸೂಕ್ತ ಸಮಯ ತಿಳಿದುಕೊಳ್ಳುವಿರಿ.

ಮಕರ: ಸಂಚಾರದ ವೃತ್ತಿಯಲ್ಲಿ ಅಧಿಕ ಶ್ರಮ ಮತ್ತು ಜವಾಬ್ದಾರಿಗಳಿದ್ದರೂ ಪ್ರತಿಫಲವನ್ನು ಹೊಂದುವಿರಿ. ಶಸ್ತ್ರ ವೈದ್ಯ ವೃತ್ತಿಯವರಿಗೆ ಸವಾಲು ಎನ್ನಿಸುವ ಪರಿಸ್ಥಿತಿಯನ್ನು ಎದುರಿಸಬೇಕಾಗುವುದು.

ಕುಂಭ: ಉದ್ಯೋಗದಲ್ಲಿ ಬದಲಾವಣೆ ನಿರೀಕ್ಷಿಸುವವರಿಗೆ ಪ್ರಭಾವಿ ವ್ಯಕ್ತಿಗಳ ಪರಿಚಯದಿಂದ ನೂತನ ಕೆಲಸ ಸಿಗಲಿದೆ. ಗುರಿ ಸಾಧನೆಗಳ ಬಗ್ಗೆ ಲಕ್ಷ್ಯವಿರಿಸಲು ಮಕ್ಕಳಿಗೆ ಬುದ್ಧಿವಾದ ಹೇಳುವುದು ಒಳ್ಳೆಯದು.

ಮೀನ: ರೈತಾಪಿವರ್ಗದವರು ವೃತ್ತಿಯಲ್ಲಿ ಹೊಸ ತಂತ್ರಜ್ಞಾನವನ್ನು ಅಳವ-ಡಿಸಿಕೊಳ್ಳುವುದರಿಂದ ಅಭಿವೃದ್ಧಿ ನೋಡಬಹುದು. ಹಲವು ಅಪರೂಪದ ಅವಕಾಶಗಳಿಂದ ವರ್ಚಸ್ಸನ್ನು ಬೆಳೆಸಿಕೊಳ್ಳುವಿರಿ.

ಪದಬಂಧ 5907

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸರ್ಕಾರದಿಂದ ಸಿದ್ಧಪಡಿಸಿದ ವೆಚ್ಚ ಹಾಗೂ ಜಮೆಗಳ ಅಂದಾಜಿನ ವಾರ್ಷಿಕ ವಿತ್ತ ತಃಖ್ತೆ (4)
3.ಹಸುಬೆಗೆ ಹಾಯಿಸಿದ ಆವಿ (2)
6.ರಜದಲ್ಲಿ ಖರೀದಿಸಿದ ಬೆಳ್ಳಿ (3)
7.ವಾದವನ್ನು ಮಂಡಿಸುವ ಕ್ರಮ (5)
9.ಕೆಸರಲ್ಲಿರುವ ಎಕ್ಕಡ (2)
10.ಜಾಗರೂಕತೆಯಿಂದ ಕಾದಿರಿಸಿದ ಸ್ಥಳ (2)
11.ಒಂದೇ ಕಾಲಕ್ಕೆ ಸೇರಿದ ವ್ಯಕ್ತಿ (5)
12.ಮೋಡದಿಂದ ತುಂತುರಾಗಿ ಬೀಳುವ ನೀರು (2)
13.ರಂಧ್ರ ಇಲ್ಲಿ ಕಾಣುತ್ತಿದೆ (2)
15.ಪ್ರತ್ಯುತ್ತರವಿದು (5)
17.ನಮ್ಮ ಹೆಮ್ಮೆಯ ಭಾಷೆ (3)
18.ಎಳೆಗಂದಿಯ ಹಾಲಿನಿಂದ ತಯಾರಿಸುವ ಸಿಹಿ (2)
19.ಕರ್ನಾಟಕದ ರಾಜಧಾನಿ (4)

ಮೇಲಿಂದ ಕೆಳಕ್ಕೆ
1.ಕಿರುಬೆರಳ ಪಕ್ಕದ ಕೈ ಬೆರಳು (4)
2.ಉತ್ತರ ಮತ್ತು ಪಶ್ಚಿಮ ದಿಕ್ಕುಗಳ ನಡುವಣ ದಿಕ್ಕು ಉಲ್ಟಾ ಕಾಣುತ್ತಿದೆ (3)
4.ತಟ್ಟಿ ಒಣಗಿಸಿದ ಸಗಣಿ (3)
5.ಬಹಿರಂಗದ ವಿರುದ್ಧ ಪದ (4)
8.ಅತಿ ಎಚ್ಚರಿಕೆಯಿಂದ ಕಾಯುವ ಕಾವಲು (5)
12.ಹೆಣ್ಣುದುಂಬಿ ಇಲ್ಲಿದೆ (4)
14.ಕಲ್ಪತರು ನಾಡು ಎಂದು ಹೆಸರಾಗಿರುವ ಊರು (4)
15.ಮರಗೆಲಸವನ್ನು ಮಾಡುವವನು (3)
16.ಆತುರದಿಂದ ಓಡುತ್ತಿರುವ ಕುದುರೆ (3)



5906ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕರ್ಣಾಕರ್ಣಿಕೆ 2.ಬಯಕೆ 4.ಕಳ್ಳ 5.ಪದವಿ 7.ಅಳು 8.ಪ್ರಜಾಪ್ರತಿನಿಧಿ 10.ಸ್ವಂತ 12.ಕವೆ 13.ಬಸವಕಲ್ಯಾಣ 16.ಕುಲ 17.ಗಾಯಕ 19.ವನ 20.ಮಸೂರ 21.ನವೀಕರಣ

ಮೇಲಿಂದ ಕೆಳಕ್ಕೆ:
1.ಕಲಾಪ 2.ಬಳ್ಳ 3.ಕೆರಳು 4.ಕಸೂತಿ 6.ವಿಪ್ರ 7.ಅಧಿಕ 9.ಪ್ರತೀಕ 11.ತಬಲ 14. ವಸನ 15.ಣಗಾ 16.ಕುಗ್ರಾಮ 18.ಕಲ್ಯಾಣ 19.ವರ

ಸುಡೊಕು 6292

2		9			7	1		4
	6			3			5	
5		7	4		6	2		3
					5			1
	5	1		8			2	7
3			9					
		2		1			9	
			7		8			2
	8			2		4		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6291 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಇಂಧನದ ಮೇಲಿನ ಅಬಕಾರಿ ಸುಂಕ ಇಳಿಸಿ: ಸಿಐಐ ಒತ್ತಾಯ

ನವದೆಹಲಿ (ಪಿಟಿಐ): 'ಪ್ರಸ್ತುತ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಶೇ 20ರಷ್ಟು ಅಬಕಾರಿ ಸುಂಕ ವಿಧಿಸಲಾಗುತ್ತಿದೆ. ಇದನ್ನು ಕಡಿಮೆ ಮಾಡಲು 2025–26ನೇ ಸಾಲಿನ ಬಜೆಟ್‌ನಲ್ಲಿ ಕ್ರಮಕೈಗೊಳ್ಳಬೇಕು' ಎಂದು ಕೇಂದ್ರ ಸರ್ಕಾರಕ್ಕೆ, ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಒತ್ತಾಯಿಸಿದೆ.

ಇಂಧನ ಬೆಲೆ ಹೆಚ್ಚಳವು ಹಣದುಬ್ಬರದ ಏರಿಕೆಗೆ ಕಾರಣವಾಗಲಿದೆ. ಅಬಕಾರಿ ಸುಂಕ ಕಡಿಮೆ ವಿಧಿಸಿದರೆ ಹಣದುಬ್ಬರವು ನಿಯಂತ್ರಣಕ್ಕೆ ಬರಲಿದೆ. ಇದರಿಂದ ಜನರ ಆದಾಯವೂ ಹೆಚ್ಚಳವಾಗಲಿದೆ ಎಂದು ಹೇಳಿದೆ.

ಚಿಲ್ಲರೆ ಮಾರಾಟದ ಪೆಟ್ರೋಲ್ ಮೇಲೆ ಶೇ 21ರಷ್ಟು ಹಾಗೂ ಡೀಸೆಲ್ ಮೇಲೆ ಶೇ 18ರಷ್ಟು ಕೇಂದ್ರ ಅಬಕಾರಿ ಸುಂಕ ವಿಧಿಸಲಾಗುತ್ತಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಶೇ 40ರಷ್ಟು ಇಳಿಕೆಯಾಗಿದೆ. ಆದರೂ 2022ರ ಮೇ ತಿಂಗಳಿನಿಂದ ಇಂಧನ ಬೆಲೆಯನ್ನು ಇಳಿಕೆ ಮಾಡಿಲ್ಲ ಎಂದು ಹೇಳಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಪಿಎಂ–ಕಿಸಾನ್ ಹಾಗೂ ಪ್ರಧಾನ ಮಂತ್ರಿ ಆವಾಸ್ ಯೋಜನೆಗೆ ಹೆಚ್ಚಿನ ಅನುದಾನವನ್ನು ಮೀಸಲಿಡಬೇಕು ಎಂದು ಒತ್ತಾಯಿಸಿದೆ.

2017ರಲ್ಲಿ ಪರಿಣತರ ಸಮಿತಿಯು ಕನಿಷ್ಠ ಕೂಲಿಯನ್ನು ₹267ರಿಂದ ₹375ಕ್ಕೆ ಹೆಚ್ಚಿಸುವಂತೆ ಶಿಫಾರಸು ಮಾಡಿದೆ. ಕೂಲಿ ದರ ಹೆಚ್ಚಿಸಲು ಯೋಜನೆಗೆ ಹೆಚ್ಚುವರಿಯಾಗಿ ₹42 ಸಾವಿರ ಕೋಟಿ ಮೀಸಲಿಡಬೇಕು ಎಂದು ಮನವಿ ಮಾಡಿದೆ.

ಪಿಎಂ–ಕಿಸಾನ್ ಯೋಜನೆಯಡಿ ರೈತರಿಗೆ ವಾರ್ಷಿಕ ₹6 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತಿದೆ. ಇದನ್ನು ₹8 ಸಾವಿರಕ್ಕೆ ಹೆಚ್ಚಿಸಬೇಕು. ಇದಕ್ಕಾಗಿ ಹೆಚ್ಚುವರಿಯಾಗಿ ₹20 ಸಾವಿರ ಕೋಟಿ ಮೀಸಲಿಡಬೇಕು ಎಂದು ಕೋರಿದೆ. ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯಡಿ ಅಮೌಖಿಕ ಮೌಲ್ಯಮಾಪನ (ಫೇಸ್‌ಲೆಸ್ ಅಸೆಸ್‌ಮೆಂಟ್) ವ್ಯವಸ್ಥೆಯನ್ನು ಪರಿಚಯಿಸಬೇಕು ಎಂದು ಒತ್ತಾಯಿಸಿದೆ.

'ಸರಕು ಮತ್ತು ಸೇವೆಯ ಬಳಕೆ ವೆಚ್ಚವು ಆರ್ಥಿಕ ಬೆಳವಣಿಗೆಗೆ ನಿರ್ಣಾಯಕವಾಗಿದೆ. ಆದರೆ, ಹೆಚ್ಚುತ್ತಿರುವ ಹಣದುಬ್ಬರವು ಗ್ರಾಹಕರ ಖರೀದಿ ಸಾಮರ್ಥ್ಯವನ್ನು ಕುಗ್ಗಿಸಿದೆ. ಸರ್ಕಾರವು ಮಧ್ಯಪ್ರವೇಶಿಸುವ ಮೂಲಕ ಜನರ ಆದಾಯ ಹೆಚ್ಚಳಕ್ಕೆ ಪೂರಕ ಕ್ರಮಕೈಗೊಳ್ಳಬೇಕು. ಆ ಮೂಲಕ ಸುಸ್ಥಿರ ಆರ್ಥಿಕ ಬೆಳವಣಿಗೆಗೆ ಒತ್ತು ನೀಡಬೇಕು' ಎಂದು ಸಿಐಐ ಮಹಾನಿರ್ದೇಶಕ ಚಂದ್ರಜಿತ್ ಬ್ಯಾನರ್ಜಿ ತಿಳಿಸಿದ್ದಾರೆ.

'ಜಿಡಿಪಿ ಶೇ 6.8ರಷ್ಟು ಪ್ರಗತಿ'

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆಯು ಶೇ 6.5ರಿಂದ ಶೇ 6.8ರಷ್ಟು ಪ್ರಗತಿ ಕಾಣುವ ನಿರೀಕ್ಷೆ ಇದೆ ಎಂದು ಡೆಲಾಯ್ಟ್ ಕಂಪನಿಯ ವರದಿ ಭಾನುವಾರ ತಿಳಿಸಿದೆ.

ಜನರಲ್ಲಿ ಸರಕು ಮತ್ತು ಸೇವೆ ಗಳನ್ನು ಖರೀದಿಸುವ ಸಾಮರ್ಥ್ಯ ಹೆಚ್ಚಳ ವಾಗಿದೆ. ಇದು ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲಿದೆ. ಇದರಿಂದಾಗಿ 2025–26ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 6.7ರಿಂದ ಶೇ 7.3ರಷ್ಟು ದಾಖಲಾಗುವ ನಿರೀಕ್ಷೆಯಿದೆ ಎಂದು ಹೇಳಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪ್ರಸಕ್ತ ಆರ್ಥಿಕ ವರ್ಷದ ಜಿಡಿಪಿ ಬೆಳವಣಿಗೆಯನ್ನು ಶೇ 7.2ರಿಂದ ಶೇ 6.6ಕ್ಕೆ ತಗ್ಗಿಸಿದೆ.

'ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಜಿಡಿಪಿ ಬೆಳವಣಿಗೆಯು ನಿರೀಕ್ಷೆ ಮಾಡಿದ್ದಕ್ಕಿಂತಲೂ ಕಡಿಮೆ ದಾಖಲಾಗಿದೆ. ಲೋಕಸಭಾ ಚುನಾವಣೆ ಫಲಿತಾಂಶದ ಅನಿಶ್ಚಿತತೆ, ನಿರೀಕ್ಷೆಗೂ ಮೀರಿ ಸುರಿದ ಅಧಿಕ ಮಳೆ ಹಾಗೂ ಜಾಗತಿಕ ಬಿಕ್ಕಟ್ಟು ಇದಕ್ಕೆ ಕಾರಣವಾಗಿವೆ. ಇದು ದೇಶೀಯ ಬೇಡಿಕೆ ಹಾಗೂ ರಫ್ತು ಚಟುವಟಿಕೆ ಮೇಲೂ ಪರಿಣಾಮ ಬೀರಿವೆ' ಎಂದು ಡೆಲಾಯ್ಟ್ ಇಂಡಿಯಾದ ಅರ್ಥಶಾಸ್ತ್ರಜ್ಞೆ ರುಮ್ಕಿ ಮಜುಂದಾರ್ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹580
12 ಕ್ಕೆ	₹80
ಮೈಸೂರು	
100ಕ್ಕೆ	₹580

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹334-628

ದ್ವಿತಳಿ (ಬಿ.ವಿ) ₹253-728

ಸಂಚಾರ ದಟ್ಟಣೆ ಹಿಮ ಸುರಿಯುತ್ತಿರುವ ಬೆನ್ನಲ್ಲೇ ಪ್ರವಾಸಿಗರ ಸಂಖ್ಯೆ ಹೆಚ್ಚಿದ್ದು, ಹಿಮಾಚಲ ಪ್ರದೇಶದ ಸೋಲಾಂಗ್ ನಾಲಾ ಬಳಿಯ ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು –ಪಿಟಿಐ ಚಿತ್ರ

ಕಂಪನಿ ಷೇರಿನ ಮೇಲೆ ಹೂಡಿಕೆ ಹೇಗೆ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ನೀವು ಕಂಪನಿಯೊಂದರ ಷೇರಿನ ಮೇಲೆ ಹೂಡಿಕೆ ಮಾಡಬೇಕೋ, ಬೇಡವೋ ಎಂದು ತೀರ್ಮಾನ ಮಾಡಬೇಕಾದರೆ ಆ ಕಂಪನಿಯ ವಾರ್ಷಿಕ ವರದಿಯನ್ನು ನೋಡಬೇಕಾಗುತ್ತದೆ.

ನಿರ್ದಿಷ್ಟ ವರ್ಷದಲ್ಲಿ ಕಂಪನಿಯ ಕಾರ್ಯಕ್ಷಮತೆ, ಭವಿಷ್ಯದ ಯೋಜನೆಗಳು ಮತ್ತು ಹಣಕಾಸಿನ ಸ್ಥಿತಿಗತಿಯ ವಿವರ ಸೇರಿ ಸಮಗ್ರ ಮಾಹಿತಿಯು ಆ ದಾಖಲೆಯಲ್ಲಿ ಅಡಕವಾಗಿರುತ್ತದೆ. ಷೇರು ಮಾರುಕಟ್ಟೆಗೆ ಸೇರ್ಪಡೆಗೊಂಡಿರುವ ಪ್ರತಿ ಕಂಪನಿಯೂ ಕಡ್ಡಾಯವಾಗಿ 200ರಿಂದ 300 ಪುಟಗಳಷ್ಟು ವಿವರವಾದ ವಾರ್ಷಿಕ ವರದಿ ಪ್ರಕಟಿಸಬೇಕಾಗುತ್ತದೆ. ಆದರೆ, ಅಂಕಿ-ಸಂಖ್ಯೆ ಮತ್ತು ಚಾರ್ಟ್‌ಗಳನ್ನು ಒಳಗೊಂಡಿರುವ ಈ ಪುಟಗಳ ದಾಖಲೆಯನ್ನು ಓದಿ ಮನನ ಮಾಡಿಕೊಳ್ಳಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ.

ಹಾಗಾದರೆ ಕಂಪನಿಯ ವಾರ್ಷಿಕ ವರದಿಯನ್ನು ಒಬ್ಬ ಸಾಮಾನ್ಯ ಹೂಡಿಕೆದಾರ ಅರ್ಥೈಸಿಕೊಳ್ಳುವುದು ಹೇಗೆ? ಯಾವ ಅಂಶಗಳ ಬಗ್ಗೆ ಹೆಚ್ಚು ಒತ್ತು ನೀಡಿದರೆ ಸಾಕಾಗುತ್ತದೆ? ಬನ್ನಿ, ಈ ಲೇಖನದಲ್ಲಿ ವಿವರವಾಗಿ ತಿಳಿಯೋಣ.

● **ಕಂಪನಿಯ ಮುಖ್ಯಸ್ಥರು/ ಅಧ್ಯಕ್ಷರು / ಕಾರ್ಯನಿರ್ವಹಣಾಧಿಕಾರಿಯ ಸಂದೇಶ:** ಕಂಪನಿಯ ವಾರ್ಷಿಕ ವರದಿಯಲ್ಲಿ ನೀವು ಮೊದಲನೆಯದಾಗಿ ಗಮನಿಸಿಕೊಳ್ಳಬೇಕಿರುವುದು ಕಂಪನಿಯ ಅಧ್ಯಕ್ಷರು/ ಕಾರ್ಯನಿರ್ವಹಣಾಧಿಕಾರಿ ನೀಡಿರುವ ಸಂದೇಶ. ಕಂಪನಿಯ ಭವಿಷ್ಯದ ಬಗ್ಗೆ ಅದನ್ನು ಮುನ್ನಡೆಸುತ್ತಿರುವ ಅಧಿಕಾರಿ ಹೇಗೆ ಆಲೋಚನೆ ಮಾಡುತ್ತಿದ್ದಾರೆ ಎನ್ನುವ ಚಿತ್ರಣವನ್ನು ಇದು ಕಟ್ಟಿಕೊಡುತ್ತದೆ.

ಕಂಪನಿಯ ಒಟ್ಟಾರೆ ಬೆಳವಣಿಗೆ ಬಗ್ಗೆ ಅಧ್ಯಕ್ಷರ ಸಂದೇಶ ಒಂದು ಪಕ್ಷಿನೋಟವನ್ನು ಒದಗಿಸುತ್ತದೆ. ನಿರ್ದಿಷ್ಟ ವರ್ಷದಲ್ಲಿ ಕಂಪನಿ ಮಾಡಿರುವ ಸಾಧನೆಗಳು ಮತ್ತು ಎದುರಿಸಿದ ಸವಾಲುಗಳು ಸೇರಿ ಭವಿಷ್ಯದ ಯೋಜನೆಗಳ ಬಗ್ಗೆ ಒಂದು ಮೇಲ್ನೋಟವು ಇಲ್ಲಿ ಸಿಗುತ್ತದೆ. ಒಂದರ್ಥದಲ್ಲಿ ಅಧ್ಯಕ್ಷರ ಸಂದೇಶವನ್ನು ಷೇರು ಹೂಡಿಕೆದಾರಿಗೆ ಆ ಕಂಪನಿಯ ಮುಖ್ಯಸ್ಥ ಬರೆದ ಪತ್ರ ಎಂದೇ ಪರಿಗಣಿಸಬಹುದು.

ಉದಾಹರಣೆಗೆ ಹಿಂದುಸ್ತಾನ್ ಯೂನಿಲಿವರ್ ಅಧ್ಯಕ್ಷ ನಿತಿನ್ ಪರಾಂಜಪೆ ಅವರು 2023-24ರ ವಾರ್ಷಿಕ ವರದಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಗ್ರಾಹಕರ ಖರೀದಿ ಸಾಮರ್ಥ್ಯ ಕುಗ್ಗಿದ ಪರಿಣಾಮ ಬ್ಯುಸಿನೆಸ್‌ಗೆ ಹೊಡೆತ ಬಿದ್ದಿತು. ಹೀಗಿದ್ದರೂ ಕಂಪನಿ ಉತ್ತಮ ಸಾಮರ್ಥ್ಯ ಪ್ರದರ್ಶಿಸಿದೆ ಎಂದು ಹೇಳಿದ್ದಾರೆ.

ಭವಿಷ್ಯದಲ್ಲಿ ಇನ್ನಷ್ಟು ಉತ್ತಮ ಜನಪ್ರಿಯ ಉತ್ಪನ್ನಗಳನ್ನು ತರಲು ಡಿಜಿಟಲ್ ತಂತ್ರಜ್ಞಾನ ಮತ್ತು ಸಂಶೋಧನೆಗೆ ಒತ್ತು ನೀಡುವುದಾಗಿ ಉಲ್ಲೇಖಿಸಿದ್ದಾರೆ. ಹೊಸ ಉತ್ಪನ್ನಗಳನ್ನು ಕೇಂದ್ರೀಕರಿಸಿ ಮಾರುಕಟ್ಟೆ ಸೃಷ್ಟಿಸಿಕೊಳ್ಳುವ ಸಲುವಾಗಿ 2024ರ ಏಪ್ರಿಲ್‌ನಿಂದ ವೈಯಕ್ತಿಕ ಆರೈಕೆ ಉದ್ಯಮ (ಪರ್ಸನಲ್ ಕೇರ್ ಬ್ಯುಸಿನೆಸ್) ಮತ್ತು ಸೌಂದರ್ಯ ಮತ್ತು ಶುಶ್ರೂಷೆ ಉದ್ಯಮ (ಬ್ಯುಟಿ ಆ್ಯಂಡ್ ವೆಲ್ ಬೀಯಿಂಗ್ ಬ್ಯುಸಿನೆಸ್) ಘಟಕಗಳನ್ನು ಸ್ಥಾಪಿಸುವುದಾಗಿ ತಿಳಿಸಿದ್ದಾರೆ.

ಇವೆಲ್ಲಾ ಚಿಂತನೆಗಳು ಕಂಪನಿ ಭವಿಷ್ಯದಲ್ಲಿ ಮತ್ತಷ್ಟು ಸಕಾರಾತ್ಮಕವಾಗಿ ಬೆಳವಣಿಗೆ ಸಾಧಿಸಲಿದೆ ಎನ್ನುವ ಭರವಸೆ ನೀಡುತ್ತವೆ.

● **ಆಡಳಿತ ಮಂಡಳಿ ಚರ್ಚೆ ಮತ್ತು ವಿಶ್ಲೇಷಣೆ:** ವಾರ್ಷಿಕ ವರದಿಯಲ್ಲಿ ಪ್ರಮುಖವಾಗಿ ಗಮನಿಸಬೇಕಿರುವ ಅಂಶ ಅಂದರೆ ಆಡಳಿತ ಮಂಡಳಿಯ ಚರ್ಚೆ ಮತ್ತು ವಿಶ್ಲೇಷಣೆ. ಇದನ್ನು ವಾರ್ಷಿಕ ವರದಿಯ 'ಹೃದಯ ಭಾಗ' ಎಂದೇ ಪರಿಗಣಿಸಲಾಗುತ್ತದೆ. ಕಂಪನಿ ಒಂದು ರೀತಿಯಲ್ಲಿ ನೇರವಾಗಿ ಇಲ್ಲಿ ಷೇರುದಾರನೊಂದಿಗೆ ಮಾತನಾಡುತ್ತದೆ.

ಉದ್ಯಮದ ನಿರ್ವಹಣೆ, ಒಟ್ಟಾರೆ ದಿಕ್ಕು, ಭವಿಷ್ಯದ ಯೋಜನೆಗಳ ಬಗ್ಗೆ ಇಲ್ಲಿ ಪ್ರಸ್ತಾಪಿಸಲಾಗುತ್ತದೆ. ಒಂದು ಕಂಪನಿಯ ನಿರ್ದಿಷ್ಟ ಭವಿಷ್ಯದ ಮುನ್ನೋಟ ತಿಳಿಯಬೇಕಾದರೆ ಆ ವಲಯದ ನಾಲ್ಕೈದು ಕಂಪನಿಗಳ ಆಡಳಿತ ಮಂಡಳಿಯ ಚರ್ಚೆ ಮತ್ತು ವಿಶ್ಲೇಷಣೆ ವಿಭಾಗವನ್ನು ನೋಡಬೇಕಾಗುತ್ತದೆ. ಹೀಗೆ ಮಾಡಿದಾಗ ಆ ವಲಯದ ಉದ್ಯಮ ಒಟ್ಟಾರೆ ಯಾವ ದಿಕ್ಕಿನತ್ತ ಸಾಗುತ್ತಿದೆ ಎನ್ನುವುದು ಅರಿವಿಗೆ ಬರುತ್ತದೆ.

ಜೊತೆಗೆ, ಆ ಕ್ಷೇತ್ರದಲ್ಲಿ ಪ್ರತಿಸ್ಪರ್ಧಿಗಳು ಯಾರು, ಮುಂದೆ ಇರುವ ರಿಸ್ಕ್ ಮತ್ತು ಅವಕಾಶಗಳೇನು ಎಂಬ ಬಗ್ಗೆ ತಿಳಿಯಲು ಸಾಧ್ಯವಾಗುತ್ತದೆ. ವಾರ್ಷಿಕ ವರದಿಯ ಈ ವಿಭಾಗ ಕಂಪನಿಯ ಉದ್ಯಮ ತಂತ್ರಗಾರಿಕೆ ಬಗ್ಗೆಯೂ ತಿಳಿಸಿ ಕೊಡುತ್ತದೆ. ಭವಿಷ್ಯದಲ್ಲಿ ಹೊಸ ಉತ್ಪನ್ನಗಳು ಮತ್ತು ಹೊಸ ಪ್ರದೇಶಗಳಿಗೆ ಮಾರುಕಟ್ಟೆ ವಿಸ್ತರಣೆ ಮಾಡುವರೇ ಎನ್ನುವ ಮಾಹಿತಿ ಇರುತ್ತದೆ.

ಉದಾಹರಣೆಗೆ ಹಿಂದುಸ್ತಾನ್ ಯೂನಿಲಿವರ್ ಉನ್ನತ ಶ್ರೇಣಿಯ ಉತ್ಪನ್ನಗಳನ್ನು ಹೊರತರಲು ಬೇರೆ ಬೇರೆ ಕಂಪನಿಗಳೊಂದಿಗೆ ಸಹಭಾಗಿತ್ವ ಸಾಧಿಸುತ್ತಿದೆ. ಡಿಜಿಟಲ್ ವಲಯದಲ್ಲಿ ಪ್ರಭಾವಿಯಾಗಲು ಈ ಇಮ್ಯಾಜಿನ್ ಎಚ್‌ಯುಎಲ್ ಎನ್ನುವ ಅಭಿಯಾನ ಶುರು ಮಾಡಿದೆ. ಆರೋಗ್ಯಕ್ಕೆ ಪೂರಕವಾದ ಉತ್ಪನ್ನಗಳನ್ನು ಸೃಷ್ಟಿಸಲು ಓಜಿವಾ ಮತ್ತು ವೆಲ್ ಬೀಯಿಂಗ್ ನ್ಯೂಟ್ರೀಷನ್ ಜೊತೆ ಪಾಲುದಾರಿಕೆ ಮಾಡಿಕೊಂಡಿದೆ. ಹೀಗೆ ಕಂಪನಿಯ ಮುಂದಿನ ನಡೆಯನ್ನು ಇದು ತಿಳಿಸುತ್ತದೆ. ಅಲ್ಲದೆ, ಇದೇ ವಿಭಾಗದಲ್ಲಿ ಕಂಪನಿಗಿರುವ ರಿಸ್ಕ್ ಮತ್ತು ಅವಕಾಶಗಳ ಬಗ್ಗೆಯೂ ವಿವರವಾದ ಮಾಹಿತಿ ಇರುತ್ತದೆ. ಅದನ್ನು ಸೂಕ್ಷ್ಮವಾಗಿ ಗಮನಿಸಿಕೊಳ್ಳಬೇಕಾಗುತ್ತದೆ.

● **ಕಂಪನಿಯ ಹಣಕಾಸು ವರದಿ:** ಕಂಪನಿಯ ಹಣಕಾಸು ವರದಿಗಳು ಎರಡು ರೀತಿಯಲ್ಲಿ ಬರುತ್ತವೆ. ಒಂದನೆಯದ್ದು ಕ್ರೋಡೀಕರಿಸಲಾದ ಹಣಕಾಸು ವರದಿ (ಕನ್ಸಾಲಿಡೇಟೆಡ್). ಮತ್ತೊಂದು ಸ್ವತಂತ್ರ ಹಣಕಾಸು ವರದಿ (ಸ್ಟ್ಯಾಂಡ್ ಅಲೋನ್). ಕ್ರೋಡೀಕರಿಸಲಾದ ಹಣಕಾಸು ವರದಿಯಲ್ಲಿ ಮಾತೃಸಂಸ್ಥೆ ಮತ್ತು ಅದರ ಸಹವರ್ತಿ ಸಂಸ್ಥೆಗಳ ವಿವರ ಇರುತ್ತದೆ.

ಆದರೆ, ಸ್ಟ್ಯಾಂಡ್ ಅಲೋನ್ ವರದಿಯಲ್ಲಿ ಒಂದು ಕಂಪನಿಯ ವರದಿ ಮಾತ್ರ ಉಲ್ಲೇಖವಾಗಿರುತ್ತದೆ. ಕಂಪನಿಯ ಹಣಕಾಸು ವರದಿಯಲ್ಲಿ ಪ್ರಾಫಿಟ್ ಆ್ಯಂಡ್ ಲಾಸ್ ಸ್ಟೇಟ್‌ಮೆಂಟ್, ಬ್ಯಾಲೆನ್ಸ್‌ಶೀಟ್ ಮತ್ತು ಕ್ಯಾಷ್ ಫ್ಲೋ ಸ್ಟೇಟ್‌ಮೆಂಟ್ ಎಂಬ ಮೂರು ಭಾಗಗಳಿರುತ್ತವೆ. ಪ್ರಾಫಿಟ್ ಆ್ಯಂಡ್ ಲಾಸ್ ಸ್ಟೇಟ್‌ಮೆಂಟ್ ಉದ್ಯಮದ ಖರ್ಚು- ವೆಚ್ಚ, ಮಾರಾಟ ಮಾಹಿತಿ ಮತ್ತು ಲಾಭ- ನಷ್ಟದ ವಿವರ ಒಳಗೊಂಡಿರುತ್ತದೆ.

ಉದಾಹರಣೆಗೆ ಹಿಂದುಸ್ತಾನ್ ಯೂನಿಲಿವರ್ 2023-24ರಲ್ಲಿ ₹10,114 ಕೋಟಿ ಲಾಭ ಗಳಿಸಿದೆ. 2022-23ರಲ್ಲಿ ಅದು ₹9,926 ಕೋಟಿ ಲಾಭ ದಾಖಲಿಸಿತ್ತು. ಇನ್ನು ಬ್ಯಾಲೆನ್ಸ್ ಶೀಟ್ ಕಂಪನಿಯ ಆಸ್ತಿ ಮತ್ತು ಸಾಲಗಳ ವಿವರವನ್ನು ಒದಗಿಸುತ್ತದೆ. ಕೊನೆಯದಾಗಿ ಕ್ಯಾಷ್ ಫ್ಲೋ ಸ್ಟೇಟ್‌ಮೆಂಟ್ ಕಂಪನಿಗೆ ಹಣದ ಒಳಹರಿವು ಮತ್ತು ಹೊರಹರಿವಿನ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ತಿಳಿಸುತ್ತದೆ. ಕಂಪನಿ ತನ್ನ ಉದ್ಯಮದಿಂದ ನಿಯಮಿತವಾಗಿ ಹಣದ ಒಳ ಹರಿವು ಹೆಚ್ಚಿಸಿಕೊಳ್ಳದಿದ್ದರೆ ಅದು ಹೂಡಿಕೆಗೆ ಅಷ್ಟು ಸೂಕ್ತ ಆಯ್ಕೆಯಲ್ಲ ಎಂದು ಪರಿಗಣಿಸಬೇಕಾಗುತ್ತದೆ.

● **ಕಾರ್ಪೊರೇಟ್ ಗವರ್ನೆನ್ಸ್ ವರದಿ:** ಕಂಪನಿಯೊಂದರ ಆಡಳಿತ ಎಷ್ಟು ಉತ್ತಮವಾಗಿದೆ ಎನ್ನುವುದನ್ನು ಕಾರ್ಪೊರೇಟ್ ಗವರ್ನೆನ್ಸ್ ವರದಿ ತಿಳಿಸುತ್ತದೆ. ಕಂಪನಿಯ ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ, ಸಭೆಗಳು ಸರಿಯಾಗಿ ನಡೆಯುತ್ತಿವೆಯೇ, ಉಪ ಸಮಿತಿಯಲ್ಲಿ ಸರಿಯಾದ ಸಂಖ್ಯೆ ಇದೆಯೇ, ಖಾಲಿಯಾದ ನಿರ್ದೇಶಕರ ಹುದ್ದೆಗಳಿಗೆ ಮರುನೇಮಕ ಆಗಿದೆಯೇ ಹೀಗೆ ಪ್ರಮುಖ ಮಾಹಿತಿ ಪಡೆದುಕೊಳ್ಳಿ. ಏಕೆಂದರೆ ಉತ್ತಮ ಆಡಳಿತ ಕಂಪನಿಯ ಸಕಾರಾತ್ಮಕ ಬೆಳವಣಿಗೆಗೆ ಪೂರಕವಾಗಿರುತ್ತದೆ.

ಮತ್ತೆ ಮತ್ತೆ ಆಡಿಟರ್‌ಗಳನ್ನು ಬದಲಿಸುವುದು, ಆಡಳಿತ ಮಂಡಳಿ ಸಭೆಗೆ ಹಾಜರಾತಿ ಕೊರತೆ ಯಂತಹ ಅಂಶಗಳು ಕಂಡು ಬಂದಿದ್ದರೆ ಅಂತಹ ಕಂಪನಿಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು.

● **ಕಂಪನಿಯ ಸಾಧನೆಯ ನೋಟ:** ಕಂಪನಿಯ ವಾರ್ಷಿಕ ವರದಿಯಲ್ಲಿ ಮೇಲೆ ಸೂಚಿಸಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿ ನೋಡಲು ಕಷ್ಟವಾಗುತ್ತದೆ ಎನ್ನುವವರು ಕಂಪನಿಯ ಸಾಧನೆಯ ನೋಟ (ಕಂಪನಿ ಫರ್ಫಾರ್ಮೆನ್ಸ್ ಓವರ್ ವೀವ್) ವಿಭಾಗವನ್ನು ನೋಡಬಹುದು.

ಇದರಲ್ಲಿ ಕಂಪನಿಯ ಆಲೋಚನೆ, ಭವಿಷ್ಯದ ಮುನ್ನೋಟ, ಸಾಧನೆ, ಸವಾಲು, ಹಣಕಾಸಿನ ಸ್ಥಿತಿಗತಿ ಸೇರಿ ಎಲ್ಲ ಪ್ರಮುಖ ಅಂಶಗಳು ಒಳಗೊಂಡಿರುತ್ತವೆ. ಉದಾಹರಣೆಗೆ ಹಿಂದುಸ್ತಾನ್ ಯೂನಿಲಿವರ್‌ನ 2023-24ನೇ ಸಾಲಿನ ವಾರ್ಷಿಕ ವರದಿಯಲ್ಲಿ 25 ಪುಟಗಳ ವಿವರಣೆ ಇದೆ. ಇದನ್ನು ಗಮನಿಸಿದರೆ ಕಂಪನಿ ಯಾವ ದಿಕ್ಕಿನಲ್ಲಿ ಸಾಗಿದೆ ಎನ್ನುವುದರ ಬಗ್ಗೆ ಸ್ಪಷ್ಟತೆ ಸಿಗುತ್ತದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಅಲ್ಪ ಮೊತ್ತದ ಗಳಿಕೆ ದಾಖಲಿಸಿದ ಷೇರುಪೇಟೆ

ಡಿಸೆಂಬರ್ 27ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಮೊತ್ತದ ಗಳಿಕೆ ದಾಖಲಿಸಿವೆ. 78,699 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.84ರಷ್ಟು ಗಳಿಸಿಕೊಂಡಿದೆ. 23,813 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.96ರಷ್ಟು ಗಳಿಸಿಕೊಂಡಿದೆ.

ಏಷ್ಯನ್ ಮತ್ತು ಯುರೋಪಿಯನ್ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ ಕಾರಣದಿಂದಾಗಿ ಮಾರುಕಟ್ಟೆ ಒಂದಷ್ಟು ಚೇತರಿಕೆ ಕಂಡಿದೆ. ಆದರೆ, ವಿದೇಶಿ ಹೂಡಿಕೆದಾರರು ಇನ್ನೂ ಇತ್ತ ಮುಖ ಮಾಡದಿರುರುವುದು ಮಾರುಕಟ್ಟೆಯಲ್ಲಿ ಅನಿಶ್ಚಿತ ವಾತಾವರಣ ಇರಲಿದೆ ಎನ್ನುವುದನ್ನು ಸೂಚಿಸುತ್ತಿದೆ.

ವಲಯವಾರು ಸೂಚ್ಯಂಕಗಳ ಪ್ರಗತಿಯಲ್ಲಿ ನಿಫ್ಟಿ ಆಟೊ ಶೇ 2.3, ಫಾರ್ಮಾ ಶೇ 2.25, ಎಫ್‌ಎಂಸಿಜಿ ಶೇ 1.52, ಬ್ಯಾಂಕ್ ಶೇ 1.09, ರಿಯಲ್ ಎಸ್ಟೇಟ್ ಶೇ 1.06, ಫೈನಾನ್ಸ್ ಶೇ 0.83, ಅನಿಲ ಮತ್ತು ತೈಲ ಶೇ 0.71, ಎನರ್ಜಿ ಶೇ 0.37ರಷ್ಟು ಗಳಿಸಿಕೊಂಡಿವೆ. ನಿಫ್ಟಿ ಮಾಧ್ಯಮ ಶೇ 1.81, ಲೋಹ ಶೇ 1.05, ಮಾಹಿತಿ ತಂತ್ರಜ್ಞಾನ ಶೇ 0.11 ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 0.07ರಷ್ಟು ಕುಸಿದಿವೆ.

ಇಳಿಕೆ–ಏರಿಕೆ: ಹೀರೊ ಮೋಟೊಕಾರ್ಪ್ ಶೇ 2.31, ಪವರ್ ಗ್ರಿಡ್ ಕಾರ್ಪೊರೇಷನ್ ಶೇ 1.96, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶೇ 1.59, ಟೈಟನ್ ಶೇ 1.57, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 1.48, ಟಾಟಾ ಸ್ಟೀಲ್ ಶೇ 1.35, ಹಿಂಡಾಲ್ಕೊ ಇಂಡಸ್ಟ್ರೀಸ್ ಶೇ 0.92, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 0.58, ಕೋಲ್ ಇಂಡಿಯಾ ಶೇ 0.55, ಲಾರ್ಸೆನ್ ಆ್ಯಂಡ್ ಟೊಬ್ರೊ ಶೇ 0.54, ಅಲ್ಟ್ರಾ ಟೆಕ್ ಸಿಮೆಂಟ್ ಶೇ 0.51 ಮತ್ತು ಏಷ್ಯನ್ ಪೇಂಟ್ಸ್ ಶೇ 0.4ರಷ್ಟು ಕುಸಿದಿವೆ.

ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 4.94, ಅದಾನಿ ಪೋರ್ಟ್ಸ್ ಶೇ 4.29, ಟ್ರೆಂಟ್ ಶೇ 4.24, ಟಾಟಾ ಮೋಟರ್ಸ್ ಶೇ 3.67, ಡಾ.ರೆಡ್ಡೀಸ್ ಲ್ಯಾಬ್ಸ್ ಶೇ 3.64, ಐಟಿಸಿ ಶೇ 3.08, ಸನ್‌ಫಾರ್ಮಾ ಶೇ 2.94, ಐಷರ್ ಮೋಟರ್ಸ್ ಶೇ 2.77, ಅದಾನಿ ಎಂಟರ್ ಪ್ರೈಸಸ್ ಶೇ 2.74, ಇಂಡಸ್ ಇಂಡ್ ಬ್ಯಾಂಕ್ ಶೇ 2.53 , ಸಿಪ್ಲಾ ಶೇ 2.34 ಮತ್ತು ಬಜಾಜ್ ಆಟೊ ಶೇ 1.82ರಷ್ಟು ಏರಿಕೆ ಕಂಡಿವೆ.

ಮುನ್ನೋಟ: ಆರ್ಥಿಕ ಬೆಳವಣಿಗೆ ದರ ಕುಂಠಿತ, ಅಮೆರಿಕ ಫೆಡರಲ್ ಬ್ಯಾಂಕ್ ಬಡ್ಡಿದರ ಇಳಿಕೆಯಲ್ಲಿ ನಿಧಾನಗತಿಯ ಧೋರಣೆ ತಳೆಯಲಿದೆ ಎಂಬ ಲೆಕ್ಕಾಚಾರ, ರೂಪಾಯಿ ಮೌಲ್ಯ ಕುಸಿತ ಸೇರಿ ಹಲವು ಅಂಶಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ. ಜನವರಿಯಲ್ಲಿ ಕಂಪನಿಗಳು ಮೂರನೇ ತ್ರೈಮಾಸಿಕ ಅವಧಿಯ ಫಲಿತಾಂಶಗಳನ್ನು ಪ್ರಕಟಿಸಲಿದ್ದು, ಅದು ಕೂಡ ಮಾರುಕಟ್ಟೆಯ ಸ್ಥಿತಿಯನ್ನು ನಿರ್ಧರಿಸಲಿದೆ.

ಆರ್ಥಿಕ ಬೆಳವಣಿಗೆ ದರ ಮಂದಗತಿ ಕಾರಣ: ತಜ್ಞರ ಹೇಳಿಕೆ

ರೂಪಾಯಿ ಮೌಲ್ಯ ಶೇ 3ರಷ್ಟು ಕುಸಿತ

ಮುಂಬೈ (ಪಿಟಿಐ): ಪ್ರಸಕ್ತ ವರ್ಷದಲ್ಲಿ ಅಮೆರಿಕದ ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯವು ಶೇ 3ರಷ್ಟು ಕುಸಿದಿದೆ. ದೇಶದ ಆರ್ಥಿಕ ಬೆಳವಣಿಗೆ ಮಂದಗತಿಯಲ್ಲಿ ಇರುವುದು ಹಾಗೂ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಬಲಗೊಂಡಿರುವುದೇ ಇದಕ್ಕೆ ಕಾರಣ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಆದರೆ, ಇತರೆ ದೇಶಗಳ ಕರೆನ್ಸಿಗೆ ಹೋಲಿಸಿದರೆ ರೂಪಾಯಿ ಮೌಲ್ಯದ ಕುಸಿತ ಕಡಿಮೆಯಿದೆ. ಮುಂದಿನ ವರ್ಷವೂ ಅಲ್ಪ ಪ್ರಮಾಣದಲ್ಲಿ ಕುಸಿತ ಮುಂದುವರಿಯುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಇನ್ನೂ ನಿಂತಿಲ್ಲ. ಪಶ್ಚಿಮ ಏಷ್ಯಾ ಬಿಕ್ಕಟ್ಟು ಕೂಡ ಮುಂದುವರಿದಿದೆ. ಇದು ಕೆಂಪು ಸಮುದ್ರದಲ್ಲಿನ ಸರಕು ಸಾಗಣೆ ಮೇಲೆ ಪರಿಣಾಮ ಬೀರಿದೆ. ಅಲ್ಲದೆ, ಅಮೆರಿಕ ಸೇರಿ ಪ್ರಮುಖ ದೇಶಗಳಲ್ಲಿ ನಡೆದ ಚುನಾವಣೆಗಳು ಕೂಡ ರೂಪಾಯಿ ಮೌಲ್ಯ ಕುಸಿತದ ಮೇಲೆ ಪರಿಣಾಮ ಬೀರಿವೆ.

ಇಂಗ್ಲೆಂಡ್, ಜಪಾನ್ ಸೇರಿ ಪ್ರಮುಖ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಹಣಕಾಸು ನೀತಿಗೆ ಸಂಬಂಧಿಸಿದಂತೆ ಕೈಗೊಂಡ ನಿಲುವು ರೂಪಾಯಿ ಮತ್ತು ಡಾಲರ್ ಮೇಲಷ್ಟೇ ಪರಿಣಾಮ ಬೀರಿಲ್ಲ. ಹಲವು ದೇಶಗಳ ಕರೆನ್ಸಿ ವಿನಿಮಯ ದರಕ್ಕೂ ಸವಾಲೊಡ್ಡಿವೆ ಎಂದು ಹೇಳಿದ್ದಾರೆ.

ಡಾಲರ್ ಎದುರು ಯೂರೊ ಹಾಗೂ ಜಪಾನ್‌ನ ಯೆನ್ ಮೌಲ್ಯದ ಕುಸಿತಕ್ಕೆ ಹೋಲಿಸಿದರೆ ರೂಪಾಯಿ ಮೌಲ್ಯದ ಕುಸಿತ ಕಡಿಮೆಯಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯದ ಸ್ಥಿರತೆ ಕಾಯ್ದುಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕ್ ಹಲವು ಕ್ರಮಗಳನ್ನು ಕೈಗೊಂಡಿದೆ. ಕಚ್ಚಾ ತೈಲದ ಆಮದು ಹಾಗೂ ಹಿಗ್ಗುತ್ತಿರುವ ವಿದೇಶಿ ವ್ಯಾಪಾರದ ಕೊರತೆ ತಗ್ಗಿಸಲು ಡಾಲರ್ ಅತ್ಯಗತ್ಯವಾಗಿದೆ. ಹಾಗಾಗಿ, ಡಾಲರ್ ಖರೀದಿ ಮೂಲಕ ರೂಪಾಯಿಯ ಮೌಲ್ಯ ತಡೆಯಲು ಮುಂದಾಗಿದೆ.

'ಆರ್‌ಬಿಐ ನಾನ್-ಡೆಲಿವರೇಬಲ್ ಫಾರ್ವರ್ಡ್ (ಎನ್‌ಡಿಎಫ್) ಮಾರುಕಟ್ಟೆಯನ್ನು ಪ್ರವೇಶಿಸಿದೆ. ಎನ್‌ಡಿಎಫ್ ಎಂದರೆ ಬದಲಿಸಲಾಗದ ವಿದೇಶಿ ಕರೆನ್ಸಿಗಳ ಅಲ್ಪಕಾಲದ ವಾಯಿದಾ ಪೇಟೆ ವಹಿವಾಟು ಎಂದರ್ಥ. ಇಲ್ಲಿ ಕರೆನ್ಸಿಗಳ ವಿತರಣೆ ಇರುವುದಿಲ್ಲ. ಭವಿಷ್ಯದ ನಿರ್ದಿಷ್ಟ ದಿನಕ್ಕೆ ಅನ್ವಯಿಸುವಂತೆ ಒಪ್ಪಿಕೊಂಡ ಕರೆನ್ಸಿ ವಿನಿಮಯ ದರ ಮತ್ತು ನೈಜ ದರದ ನಡುವಿನ ವ್ಯತ್ಯಾಸವನ್ನು ಪಾವತಿಸಲು ಒಪ್ಪಂದ ಮಾಡಿಕೊಳ್ಳಲು ಅವಕಾಶವಿದೆ. ಇದು ರೂಪಾಯಿ ಮೌಲ್ಯ ಕುಸಿತ ತಡೆಯಲು ನೆರವಾಗಲಿದೆ' ಎಂದು ಬ್ರೋಕರೇಜ್ ಸಂಸ್ಥೆಯಾದ ಆನಂದ ರಾಠಿ ನಿರ್ದೇಶಕ (ಸರಕು ಮತ್ತು ಕರೆನ್ಸಿ) ನವೀನ್ ಮಾಥೂರ್ ಹೇಳುತ್ತಾರೆ.

ಮೌಲ್ಯ ಎಷ್ಟಿತ್ತು?

ಪ್ರಸಕ್ತ ವರ್ಷದ ಜನವರಿ 1ರಂದು ಡಾಲರ್ ಎದುರು ರೂಪಾಯಿ ಮೌಲ್ಯವು ₹83.19ಕ್ಕೆ ಕುಸಿದಿತ್ತು. ಡಿಸೆಂಬರ್ 27ರಂದು ₹85.59ಕ್ಕೆ ತಲುಪಿದೆ.

ಕಳೆದ ಎರಡು ತಿಂಗಳಲ್ಲಿ ಶೇ 2ರಷ್ಟು ಕುಸಿತ ಕಂಡಿದೆ. ರೂಪಾಯಿ ಮೌಲ್ಯವು ಡಾಲರ್ ಎದುರು ಕುಸಿತ ಕಂಡರೂ ಯೆನ್ ವಿರುದ್ಧ ಶೇ 8.7ರಷ್ಟು ಹಾಗೂ ಯೂರೊ ವಿರುದ್ಧ ಶೇ 5ಕ್ಕೂ ಹೆಚ್ಚು ಗಳಿಕೆ ಕಂಡಿದೆ.

ಅನಿಲ ಸೋರಿಕೆ 4 ಕಾರ್ಮಿಕರ ಸಾವು

ಭರೂಚ್ (ಗುಜರಾತ್) (ಪಿಟಿಐ): ಇಲ್ಲಿನ ದಹೇಜ್ ಪ್ರದೇಶದಲ್ಲಿರುವ 'ಗುಜರಾತ್ ಫ್ಲೋರೊಕೆಮಿಕಲ್ ಲಿಮಿಟೆಡ್‌ನ' (ಜಿಎಫ್‌ಎಲ್) ಘಟಕದಲ್ಲಿ ವಿಷಕಾರಿ ಅನಿಲ ಸೋರಿಕೆಯಾಗಿದ್ದು, ನಾಲ್ವರು ಕಾರ್ಮಿಕರು ಮೃತಪಟ್ಟಿದ್ದಾರೆ.

'ಶನಿವಾರ ರಾತ್ರಿ 8ರ ಸುಮಾರಿಗೆ ಅನಿಲ ಸೋರಿಕೆಯಾಗಿದೆ. ತಕ್ಷಣವೇ ತಜ್ಞರ ತಂಡವು ಸೋರಿಕೆಯನ್ನು ತಡೆದಿದೆ. ಪ್ರಜ್ಞೆ ತಪ್ಪಿದ್ದ ನಾಲ್ವರು ಕಾರ್ಮಿಕರಿಗೆ ನಮ್ಮ ಘಟಕದಲ್ಲಿರುವ ಆರೋಗ್ಯ ಕೇಂದ್ರದಲ್ಲಿಯೇ ಪ್ರಥಮ ಚಿಕಿತ್ಸೆಯನ್ನೂ ನೀಡಲಾಯಿತು. ಬಳಿಕ ಭರೂಚ್‌ನ ಆಸ್ಪತ್ರೆಗೆ ಕೊಂಡೊಯ್ಯಲಾಯಿತು' ಎಂದು ಕಂಪನಿ ವಿವರಿಸಿದೆ.

'ನಮ್ಮ ಎಲ್ಲ ಪ್ರಯತ್ನಗಳ ಬಳಿಕವೂ ಕಾರ್ಮಿಕರು ಮೃತಪಟ್ಟರು. ಮೃತರ ಕುಟುಂಬಗಳಿಗೆ ₹30 ಲಕ್ಷ ಪರಿಹಾರ ನೀಡುತ್ತೇವೆ' ಎಂದು ಕಂಪನಿ ಹೇಳಿದೆ. ಮೃತ ನಾಲ್ವರು ಕಾರ್ಮಿಕರ ಪೈಕಿ ಮೂವರು ಬೇರೆ ರಾಜ್ಯದವರಾಗಿದ್ದಾರೆ.

ಶಬರಿಮಲೆ: ಅಯ್ಯಪ್ಪ ದರ್ಶನ ಇಂದಿನಿಂದ

ಶಬರಿಮಲೆ (ಪಿಟಿಐ): ಮಕರವಿಳಕ್ಕು ಉತ್ಸವಕ್ಕಾಗಿ ಶಬರಿಮಲೆ ಅಯ್ಯಪ್ಪ ದೇವಾಲಯ ಸೋಮವಾರ ಮತ್ತೆ ತೆರೆಯಲಿದ್ದು, ಭಕ್ತರಿಗೆ ದರ್ಶನ ಸಿಗಲಿದೆ.

ದೇಗುಲದ ಪ್ರಧಾನ ಅರ್ಚಕ ಎಸ್. ಅರುಣ್‌ಕುಮಾರ್ ನಂಬೂದಿರಿ, ತಂತ್ರಿ ಕಂಡರಾರು ರಾಜೀವರ ಸಮ್ಮುಖದಲ್ಲಿ ಸಂಜೆ 4 ಗಂಟೆಗೆ ದೇಗುಲದ ಬಾಗಿಲು ತೆರೆಯಲಿದೆ. ಯಾತ್ರಿಗಳು ಅಯ್ಯಪ್ಪ ಸ್ವಾಮಿಯ ದರ್ಶನಕ್ಕಾಗಿ ಪವಿತ್ರ 18 ಮೆಟ್ಟಿಲುಗಳನ್ನು ಏರಬಹುದು ಎಂದು ದೇಗುಲದ ಅಧಿಕಾರಿಗಳು ತಿಳಿಸಿದ್ದಾರೆ.

ಮಂಡಲ ಪೂಜೆಯ ನಂತರ 'ಹರಿವರಾಸನಂ' ಪಠಣದೊಂದಿಗೆ ದೇಗುಲದ ಬಾಗಿಲನ್ನು ಡಿ. 26ರಂದು ಮುಚ್ಚಲಾಗಿತ್ತು.

ಚೀನಾದಿಂದ ಎರಡು ಕೌಂಟಿ ರಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ಸಾಯ್ ಚಿನ್‌ನಲ್ಲಿ ಅಕ್ರಮವಾಗಿ ವಶಪಡಿಸಿಕೊಂಡಿರುವ ಭಾರತದ ಭೂಪ್ರದೇಶದ ಹೆಚ್ಚಿನ ಭಾಗವನ್ನು ಸೇರಿಸಿಕೊಂಡು ಚೀನಾ, ಎರಡು ಹೊಸ ಕೌಂಟಿಗಳನ್ನು (ಆಡಳಿತ ಪ್ರಾಂತ) ರಚಿಸಿದೆ.

ಅಕ್ಸಾಯ್ ಚಿನ್ ಪ್ರದೇಶದ ಮೇಲೆ ಹಕ್ಕು ಸಾಧಿಸಲು ಚೀನಾ, ಕಳೆದ ಕೆಲ ವರ್ಷಗಳಿಂದ ವಿವಿಧ ರೀತಿಯ ಕ್ರಮಗಳನ್ನು ಅನುಸರಿಸುತ್ತಾ ಬಂದಿದೆ. ಆದರೆ, ಗಡಿ ವಿವಾದಕ್ಕೆ ಸಂಬಂಧಿಸಿದ ಮಾತುಕತೆಯನ್ನು ಉಭಯ ದೇಶಗಳು ಪುನರಾರಂಭಿಸಿದ 10 ದಿನಗಳ ಬಳಿಕ ಈ ಹೊಸ ಬೆಳವಣಿಗೆ ನಡೆದಿದೆ.

ವಾಯವ್ಯ ಚೀನಾದ ಕ್ಸಿನ್‌ಜಿಯಾಂಗ್ ಉಯ್ಗುರ್ ಸ್ವಾಯತ್ತ ಪ್ರದೇಶದ ಸ್ಥಳೀಯ ಸರ್ಕಾರವು 'ಹೆಯಾನ್' ಮತ್ತು 'ಹೆಕಾಂಗ್' ಹೆಸರಿನ ಎರಡು ಹೊಸ ಕೌಂಟಿಗಳನ್ನು ಸ್ಥಾಪಿಸಿರುವುದಾಗಿ ಘೋಷಿಸಿದೆ ಎಂದು ಸರ್ಕಾರಿ ಸ್ವಾಮ್ಯದ ಕ್ಸಿನ್‌ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ.

'ಹೋಟಾನ್ ಪ್ರಾಂತ್ಯದಿಂದ ನಿಯಂತ್ರಿಸಲ್ಪಡುವ ಎರಡು ಕೌಂಟಿಗಳ ಸ್ಥಾಪನೆಯನ್ನು ಚೀನಾದ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿ ಮತ್ತು ಸ್ಟೇಟ್ ಕೌನ್ಸಿಲ್ ಅನುಮೋದಿಸಿದೆ' ಎಂದು ವರದಿ ತಿಳಿಸಿದೆ.

ಹಾಂಗ್‌ಲಿಯು ಮತ್ತು ಕ್ಸೆಯಿಡುಲಾ ಟೌನ್‌ಷಿಪ್‌ಗಳನ್ನು ಕ್ರಮವಾಗಿ ಹೆಯಾನ್ ಹಾಗೂ ಹೆಕಾಂಗ್ ಕೌಂಟಿಗಳ 'ಕೌಂಟಿ ಸೀಟ್' (ಆಡಳಿತದ ಕೇಂದ್ರ ಕಚೇರಿ) ಆಗಿ ಹೆಸರಿಸಲಾಗಿದೆ.

ಅಕ್ಸಾಯ್ ಚಿನ್‌ನಲ್ಲಿ ಚೀನಾ ಅಕ್ರಮವಾಗಿ ವಶಪಡಿಸಿಕೊಂಡಿದೆ ಎಂದು ಭಾರತ ಆರೋಪಿಸಿರುವ ಪ್ರದೇಶದ ಸುಮಾರು 38 ಸಾವಿರ ಚದರ ಕಿ.ಮೀ.ನಷ್ಟು ದೊಡ್ಡ ಭಾಗವನ್ನು ಹೆಯಾನ್ ಕೌಂಟಿ ಒಳಗೊಂಡಿದೆ.

ಅಕ್ರಮವಾಗಿ ವಶಪಡಿಸಿಕೊಂಡಿರುವ ತನ್ನ ಭೂಪ್ರದೇಶದಲ್ಲಿ ಚೀನಾ ಎರಡು ಕೌಂಟಿಗಳನ್ನು ರಚಿಸಿರುವುದು ಭಾರತದ ಗಮನಕ್ಕೆ ಬಂದಿದೆಯಾದರೂ, ಈ ಬಗ್ಗೆ ಇನ್ನೂ ಅಧಿಕೃತವಾಗಿ ಪ್ರತಿಕ್ರಿಯಿಸಿಲ್ಲ. ಚೀನಾದ ಇಂತಹ ಏಕಪಕ್ಷೀಯ ನಡೆಗಳು ಗಡಿ ವಿವಾದವನ್ನು ಪರಿಹರಿಸುವ ನಿಟ್ಟಿನಲ್ಲಿ ಆರಂಭಿಸಲಾಗಿರುವ ದ್ವಿಪಕ್ಷೀಯ ಮಾತುಕತೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

'ರಷ್ಯಾ ಮೌನ ವಹಿಸಿದ್ದು ಸರಿಯಲ್ಲ'

ಇಲಹಂ ಅಲಿಯವ್

ಮಾಸ್ಕೊ (ಎಪಿ): 'ರಷ್ಯಾವು ಉದ್ದೇಶ ಪೂರ್ವಕವಾಗಿ ದಾಳಿ ಮಾಡಿಲ್ಲ. ಆದರೆ, ಘಟನೆ ನಡೆದು ಹಲವು ದಿನಗಳವರೆಗೆ ಮೌನ ವಹಿಸಿದ್ದು ಮಾತ್ರ ಸರಿಯಲ್ಲ' ಎಂದು ಅಜರ್‌ಬೈಜಾನ್ ಅಧ್ಯಕ್ಷ ಇಲಹಂ ಅಲಿಯವ್ ಭಾನುವಾರ ಹೇಳಿದರು.

ಅಜರ್‌ಬೈಜಾನ್‌ನ ಸುದ್ದಿ ವಾಹಿನಿಯೊಂದರ ಜೊತೆ ಮಾತನಾಡಿದ ಇಲಹಂ ಅಲಿಯವ್, 'ರಷ್ಯಾದ ಕಾರಣದಿಂದಲೇ ವಿಮಾನ ಪತನವಾಗಿದೆಯಾದರೂ ಅದು ಉದ್ದೇಶಪೂರ್ವಕ ದಾಳಿಯಾಗಿರಲಿಲ್ಲ. ಉಕ್ರೇನ್ ನಡೆಸಿದ ದಾಳಿಗೆ ರಷ್ಯಾವು ಪ್ರತಿದಾಳಿ ನಡೆಸುವ ವೇಳೆ ಈ ದುರ್ಘಟನೆ ನಡೆದಿದೆ. ಇದು ಯಾರ ನಿಯಂತ್ರಣದಲ್ಲಿಯೂ ಇಲ್ಲವಾಗಿತ್ತು' ಎಂದರು.

ಅಜರ್‌ಬೈಜಾನ್‌ನ ವಿಮಾನವೊಂದು ಕಜಕಿಸ್ತಾನದಲ್ಲಿ ಬುಧವಾರ ಪತನಗೊಂಡು 67 ಪ್ರಯಾಣಿಕರ ಪೈಕಿ 38 ಮಂದಿ ಮೃತಪಟ್ಟಿದ್ದರು. ಈ ಘಟನೆ ಕುರಿತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಕ್ಷಮೆ ಕೇಳಿದ್ದಾರೆ.

ಶ್ರೀಲಂಕಾ: ನಿರಾಶ್ರಿತರ ಭೇಟಿಗೆ ನಿರಾಕರಣೆ

ಕೊಲಂಬೊ (ಪಿಟಿಐ): ಸೇನಾ ಶಿಬಿರದಲ್ಲಿರುವ ರೋಹಿಂಗ್ಯಾ ಸಮುದಾಯದ ನಿರಾಶ್ರಿತರನ್ನು ಭೇಟಿ ಮಾಡಲು ಅನುಮತಿ ನಿರಾಕರಿಸಲಾಗಿದೆ ಎಂದು ದೂರಿ ಶ್ರೀಲಂಕಾದ ಮಾನವ ಹಕ್ಕುಗಳ ಆಯೋಗವು ಅಧ್ಯಕ್ಷ ಅನುರ ಕುಮಾರ ದಿಸ್ಸನಾಯಿಕೆ ಅವರಿಗೆ ಪತ್ರ ಬರೆದಿದೆ.

ಉತ್ತರ ಪ್ರಾಂತ್ಯದ ಮುಲ್ಲೈತೀವುನಲ್ಲಿರುವ ವಾಯುಪಡೆಯ ಶಿಬಿರದಲ್ಲಿ ಆಶ್ರಯ ಪಡೆದಿರುವ ನಿರಾಶ್ರಿತರ ಪರಿಸ್ಥಿತಿಯನ್ನು ಪರಿಶೀಲಿಸಲು ಆಯೋಗದ ತಂಡವು ಡಿ. 26ರಂದು ಪ್ರಯತ್ನಿಸಿದಾಗ, ಅಧಿಕಾರಿಗಳು ಪ್ರವೇಶ ನಿರಾಕರಿಸಿದ್ದಾರೆ ಎಂದು ಪತ್ರದಲ್ಲಿ ಉಲ್ಲೇಖಿಸಿದೆ.

ದ್ವೀಪದ ಈಶಾನ್ಯ ಕರಾವಳಿಯ ಸಮುದ್ರದಲ್ಲಿ ಸಂಕಷ್ಟದ ಸ್ಥಿತಿಯಲ್ಲಿದ್ದ ಮ್ಯಾನ್ಮಾರ್‌ನ 100ಕ್ಕೂ ಹೆಚ್ಚು ರೋಹಿಂಗ್ಯಾ ಸಮುದಾಯದವರನ್ನು ರಕ್ಷಿಸಲಾಗಿದೆ ಎಂದು ನೌಕಾಪಡೆಯು ಡಿ. 20ರಂದು ತಿಳಿಸಿತ್ತು.

ಧನಂಜಯ ಮುಂಡೆ ಕೈಬಿಡಲು ಹೆಚ್ಚಿದ ಒತ್ತಡ

ಪ್ರಜಾವಾಣಿ ವಾರ್ತೆ

ಮುಂಬೈ: ಭೀಡ್ ಜಿಲ್ಲೆಯ ಗ್ರಾಮವೊಂದರ ಸರಪಂಚ ಸಂತೋಷ್ ದೇಶಮುಖ್ ಅವರ ಹತ್ಯೆ ಪ್ರಕರಣದಲ್ಲಿ ವಾಲ್ಮೀಕ್ ಕರಾಡ್ ಅವರ ಹೆಸರು ಕೇಳಿ ಬಂದ ನಂತರದಲ್ಲಿ ಎನ್‌ಸಿಪಿಯ ಧನಂಜಯ ಮುಂಡೆ ಅವರನ್ನು ಮಹಾರಾಷ್ಟ್ರ ಸಂಪುಟದಿಂದ ಕೈಬಿಡಬೇಕು ಎಂಬ ಆಗ್ರಹ ಬಲಗೊಳ್ಳುತ್ತಿದೆ.

ಈ ಪ್ರಕರಣವನ್ನು ನಿಭಾಯಿಸುವಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ದೊಡ್ಡ ರಾಜಕೀಯ ಸವಾಲೊಂದನ್ನು ಎದುರಿಸುತ್ತಿದ್ದಾರೆ.

ಈ ಪ್ರಕರಣದ ತನಿಖೆಯನ್ನು ಅಪರಾಧ ತನಿಖಾ ಇಲಾಖೆಯ ಅಧಿಕಾರಿಗಳು ಚುರುಕುಗೊಳಿಸಿದ್ದಾರೆ. ಸಚಿವ ಧನಂಜಯ ಮುಂಡೆ ಅವರು ಕರಾಡ್ ಜೊತೆ ನಂಟು ಹೊಂದಿದ್ದಾರೆ. ಹತ್ಯೆ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಕರಾಡ್ ಅವರ ಹೆಸರು ಕೇಳಿ ಬಂದಿದೆ.

ಧನಂಜಯ ಮುಂಡೆ ಅವರನ್ನು ಸಂಪುಟದಿಂದ ಕೈಬಿಡುವ ಬಗ್ಗೆ ಫಡಣವೀಸ್ ಅವರೇ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಬಿಜೆಪಿಯ ಹಿರಿಯ ಮುಖಂಡರೊಬ್ಬರು ಹೇಳಿದ್ದಾರೆ.

ಪಿಎಂ ಇಂಟರ್ನ್‌ಶಿಪ್ 6.21 ಲಕ್ಷ ಅರ್ಜಿ ಸಲ್ಲಿಕೆ

ನವದೆಹಲಿ (ಪಿಟಿಐ): ಪಿಎಂ ಇಂಟರ್ನ್‌ಶಿಪ್ ಯೋಜನೆಯಡಿ 6.21 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಅರ್ಹ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಮುಂದುವರಿದಿದೆ ಎಂದು ಕೇಂದ್ರ ಸರ್ಕಾರ ಭಾನುವಾರ ತಿಳಿಸಿದೆ.

2024–25ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರವು ಈ ಯೋಜನೆ ಘೋಷಿಸಿತ್ತು. ಇದರಡಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ 1.25 ಲಕ್ಷ ಯುವಜನರಿಗೆ ವಿವಿಧ ವೃತ್ತಿ ತರಬೇತಿ ನೀಡಲು ನಿರ್ಧರಿಸಲಾಗಿದೆ.

ದೇಶದ ಪ್ರಮುಖ 500ಕ್ಕೂ ಹೆಚ್ಚು ಕಂಪನಿಗಳ ಮೂಲಕ ಯುವಜನರಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ. ಕಂಪನಿಗಳ ನೋಂದಣಿ ಅನ್ವಯ ಸದ್ಯ 1.27 ಲಕ್ಷ ಮಂದಿಗೆ ತರಬೇತಿ ನೀಡಬಹುದಾಗಿದೆ. ಸಲ್ಲಿಕೆಯಾಗಿರುವ ಅರ್ಜಿಗಳ ಪೈಕಿ 4.87 ಲಕ್ಷ ಅಭ್ಯರ್ಥಿಗಳು ಪೋರ್ಟಲ್ ಮೂಲಕ ಕೆವೈಸಿ ಪೂರ್ಣಗೊಳಿಸಿದ್ದಾರೆ ಎಂದು ತಿಳಿಸಿದೆ.

ಆಯ್ಕೆಯಾದವರಿಗೆ 12 ತಿಂಗಳು ತರಬೇತಿ ಜೊತೆಗೆ ಮಾಸಿಕ ₹5 ಸಾವಿರ ಭತ್ಯೆ ನೀಡಲಾಗುತ್ತದೆ. ಅಲ್ಲದೆ, ಸರ್ಕಾರವು ಒಂದು ಬಾರಿಗೆ ₹6 ಸಾವಿರ ಆರ್ಥಿಕ ನೆರವು ನೀಡಲಿದೆ. ಈ ಯೋಜನೆಯಡಿ ಮುಂದಿನ ಐದು ವರ್ಷದಲ್ಲಿ ಒಂದು ಕೋಟಿ ಯುವಜನರಿಗೆ ವೃತ್ತಿ ತರಬೇತಿ ನೀಡುವುದು ಸರ್ಕಾರದ ಗುರಿಯಾಗಿದೆ.

ವೀಸಾ ವಿವಾದ: ಮಸ್ಕ್ ಪರ ನಿಂತ ಟ್ರಂಪ್



ವೆಸ್ಟ್ ಪಾಲ್ಮ್ ಬೀಚ್(ಅಮೆರಿಕ) (ಎಪಿ): ವಲಸೆ ವೀಸಾದ ಕುರಿತಾಗಿ ಚರ್ಚೆ ನಡೆಯುತ್ತಿದ್ದು, ಅಮೆರಿಕದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಡೊನಾಲ್ಡ್ ಟ್ರಂಪ್ ಅವರು ಎಲಾನ್ ಮಸ್ಕ್ ಮತ್ತು ಇತರ ಟೆಕ್ ಉದ್ಯಮಿಗಳ ಪರವಾಗಿ ಮಾತನಾಡಿದ್ದಾರೆ.

ವಲಸೆ ಮತ್ತು ವೀಸಾದ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ನಡೆದ ಚರ್ಚೆಯಲ್ಲಿ ತಂತ್ರಜ್ಞಾನ ಉದ್ಯಮಗಳ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಟ್ರಂಪ್ ಬೆಂಬಲಿಗರು ಎಲಾನ್ ಮಸ್ಕ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಈ ನಡುವೆ ಟ್ರಂಪ್ ಹೇಳಿಕೆಯು ಮಹತ್ವ ಪಡೆದುಕೊಂಡಿದೆ.

'ನ್ಯೂಯಾರ್ಕ್ ಪೋಸ್ಟ್'ಗೆ ಶನಿವಾರ ಸಂದರ್ಶನ ನೀಡಿದ ಟ್ರಂಪ್, 'ಪ್ರತಿಭಾವಂತ ವಿದೇಶಿಯರನ್ನು ಅಮೆರಿಕಕ್ಕೆ ಕರೆತರಲು ವೀಸಾ ನೆರವಾಗಿದೆ' ಎಂದು ಶ್ಲಾಘಿಸಿದ್ದಾರೆ.

'ನಾನು ಯಾವಾಗಲೂ ವೀಸಾ ನೀಡುವ ಕ್ರಮವನ್ನು ಮೆಚ್ಚಿಕೊಳ್ಳುತ್ತೇನೆ, ಅದರ ಪರವಾಗಿ ಇರುತ್ತೇನೆ' ಎಂದು ಹೇಳಿದ್ದಾರೆ.

ವಾಸ್ತವವಾಗಿ, ಟ್ರಂಪ್ ಈ ಹಿಂದೆ ಎಚ್–1ಬಿ ವೀಸಾವನ್ನು ಕಟುವಾಗಿ ಟೀಕಿಸಿದ್ದರು. ಅಮೆರಿಕದ ಉದ್ಯೋಗಿಗಳ ಪಾಲಿಗೆ ಅದು ತುಂಬಾ ಕೆಟ್ಟದ್ದು ಮತ್ತು ನ್ಯಾಯಯುತವಲ್ಲದ್ದು ಎಂದು ಹೇಳಿದ್ದರು.

ಅಮೆರಿಕಕ್ಕೆ ವಲಸೆ ಬಂದು ಅಕ್ರಮವಾಗಿ ನೆಲಸಿರುವವರನ್ನು ಟ್ರಂಪ್ ವಿರೋಧಿಸುತ್ತಿದ್ದರು. ಈ ವಿಚಾರವು ಅವರ ಚುನಾವಣಾ ಪ್ರಚಾರದ ಪ್ರಮುಖ ಅಂಶಗಳಲ್ಲಿ ಒಂದಾಗಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9900859248

Domestic Helpers / Housekeeping

ಬೆಂಗಳೂರಿನ ಕಲ್ಯಾಣ ನಗರದಲ್ಲಿರುವ ಆಸ್ಪತ್ರೆಗೆ ಅರ್ಜೆಂಟಾಗಿ ಹೌಸ್ ಕೀಪಿಂಗ್ ಬಾಯ್ಸ್ ಬೇಕಾಗಿದ್ದಾರೆ. ಸಂಬಳ: 19300/-. ಸಂಪರ್ಕಿಸಿ: ಹೇಮಾವತಿ: 9945779607, ಸಂದೀಪ: 9108946691, ಮಿಥುನ್: 9112959375.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ

Astrology

★||ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್||★ ಕೇರಳ_ಅಘೋರಿ_ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ_ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು`ನಿಜ_ನಂಬಿ`ಕರೆಮಾಡಿ. ಪಂಡಿತ್. ಅಮರ್‌ನಾಥ್‌ಭಟ್. 9972407122

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಶಿಕ್ಷಣ
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ಮನಮೋಹನ ಸಿಂಗ್ ಸ್ಮಾರಕ ವಿವಾದ: ಕಾಂಗ್ರೆಸ್ ಆರೋಪ • ಲೋಪಗಳ ಬಗ್ಗೆ ಚರ್ಚೆಗೆ ಆಗ್ರಹ

‘ಕೇಂದ್ರ ಸರ್ಕಾರದ ರಹಸ್ಯ ಕಾರ್ಯಸೂಚಿ’

ವೇಣುಗೋಪಾಲ್

ಅಳಪ್ಪುಳ (ಕೇರಳ) (ಪಿಟಿಐ): ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಅಂತ್ಯಕ್ರಿಯೆಗೆ ಕೇಂದ್ರ ಸರ್ಕಾರವು ಸೂಕ್ತ ಜಾಗ ಗುರುತಿಸದಿರುವುದರ ಹಿಂದೆ ‘ರಹಸ್ಯ ಕಾರ್ಯಸೂಚಿ’ ಇದೆ ಎಂದು ಕಾಂಗ್ರೆಸ್ ಆರೋಪಿಸಿದೆ.

‘ಅಂತ್ಯಕ್ರಿಯೆ ನಡೆದ ಸ್ಥಳದಲ್ಲೇ ಸ್ಮಾರಕ ನಿರ್ಮಿಸುವುದು ಪದ್ಧತಿ. ಆದರೆ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಪರಿಸ್ಥಿತಿಯನ್ನು ಕೆಳಮಟ್ಟಕ್ಕೆ ತೆಗೆದುಕೊಂಡು ಹೋಗಿದೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಸುದ್ದಿಗಾರರಿಗೆ ಹೇಳಿದ್ದಾರೆ.

‘ಕಾಂಗ್ರೆಸ್ ಮಾತ್ರವಲ್ಲದೆ ಶಿರೋಮಣಿ ಅಕಾಲಿ ದಳವು ಕೇಂದ್ರ ಸರ್ಕಾರದ ನಡೆಯನ್ನು ತೀವ್ರವಾಗಿ ಖಂಡಿಸಿದೆ. ಪ್ರಧಾನಿ ಹುದ್ದೆಗೇರಿದ ಸಿಖ್ ಸಮುದಾಯದ ಏಕೈಕ ನಾಯಕನಿಗೆ ಕೇಂದ್ರ ಸರ್ಕಾರ ಯಾಕೆ ಅಗೌರವ ತೋರುತ್ತಿದೆ’ ಎಂದು ಪ್ರಶ್ನಿಸಿರುವ ವೇಣುಗೋಪಾಲ್, ಕೇಂದ್ರದ ಹೀನ ವರ್ತನೆ ಮತ್ತು ಲೋಪಗಳ ಬಗ್ಗೆ ಚರ್ಚೆಯ ಅಗತ್ಯವಿದೆ ಎಂದಿದ್ದಾರೆ.

‘ಅಂತಿಮ ವಿಧಿವಿಧಾನಗಳ ಬಗ್ಗೆ ಸಿಂಗ್ ಕುಟುಂಬಸ್ಥರೊಂದಿಗೆ ಸಮಾಲೋಚನೆ ನಡೆಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಸಿಂಗ್ ಹತ್ತಿರದ ಸಂಬಂಧಿಗಳಿಗೂ ಆಸನದ ವ್ಯವಸ್ಥೆ ಮಾಡಿರಲಿಲ್ಲ. ಅಂತ್ಯಕ್ರಿಯೆಗೆ ಸೂಕ್ತ ವ್ಯವಸ್ಥೆಗಳನ್ನು ಮಾಡದೇ ಕೇಂದ್ರವು ಮಾಜಿ ಪ್ರಧಾನಿಯೊಬ್ಬರ ಕೀರ್ತಿಗೆ ಮಸಿ ಬಳಿದಿದೆ’ ಎಂದು ಟೀಕಿಸಿದ್ದಾರೆ.

ರಾಷ್ಟ್ರಪತಿಗೆ ಸಿಧು ಪತ್ರ

ಚಂಡೀಗಢ (ಪಿಟಿಐ): ನವದೆಹಲಿಯ ರಾಜಘಾಟ್ ಸಂಕೀರ್ಣದಲ್ಲಿ ಮನಮೋಹನ ಸಿಂಗ್ ಅವರ ಸ್ಮಾರಕಕ್ಕೆ ಸ್ಥಳ ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಬೇಕೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಕಾಂಗ್ರೆಸ್ ಮುಖಂಡ ನವಜೋತ್ ಸಿಂಗ್ ಸಿಧು ಪತ್ರ ಬರೆದಿದ್ದಾರೆ. ‘ಪ್ರಜಾಪ್ರಭುತ್ವಕ್ಕೆ ಕೊಡುಗೆ ಸಲ್ಲಿಸಿದವರ ವಿಷಯದಲ್ಲಿ ರಾಜಕೀಯ ಸಲ್ಲದು. ಮನಮೋಹನ ಸಿಂಗ್ ಅವರಿಗೆ ಸಲ್ಲಬೇಕಾದ ಗೌರವ ದಕ್ಕಲಿ’ ಎಂಬ ಒಕ್ಕಣೆಯೊಂದಿಗೆ ಅವರು ಪತ್ರವನ್ನು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮುಖ್ಯಮಂತ್ರಿ ಹಿಮಂತ ಬೇಸರ

ಗುವಾಹಟಿ (ಪಿಟಿಐ): ಮನಮೋಹನ ಸಿಂಗ್ ಅವರ ಅಂತ್ಯಸಂಸ್ಕಾರ ವಿಷಯದಲ್ಲೂ ಕಾಂಗ್ರೆಸ್ ವಿವಾದ ಸೃಷ್ಟಿಸಲು ಪ್ರಯತ್ನಿಸುತ್ತಿರುವುದು ನೋವು ಉಂಟುಮಾಡಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಭಾನುವಾರ ಹೇಳಿದ್ದಾರೆ.

ಯಮುನಾ ನದಿಯಲ್ಲಿ ಸಿಂಗ್ ಅಸ್ಥಿ ವಿಸರ್ಜನೆ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಅಸ್ಥಿಯನ್ನು ‘ಮಜ್‌ನೂ ಕಾ ತಿಲಾ’ ಗುರುದ್ವಾರದ ಬಳಿಯ ಯಮುನಾ ನದಿಯಲ್ಲಿ ಭಾನುವಾರ ವಿಸರ್ಜನೆ ಮಾಡಲಾಯಿತು.

ಸಿಂಗ್ ಅವರ ಅಂತ್ಯಕ್ರಿಯೆ ನಡೆದಿದ್ದ ನಿಗಮ್ ಬೋಧ್ ಘಾಟ್‌ನಿಂದ ಭಾನುವಾರ ಬೆಳಿಗ್ಗೆ ಅಸ್ಥಿಯನ್ನು ಸಂಗ್ರಹಿಸಿದ ಅವರ ಕುಟುಂಬಸ್ಥರು, ಬಳಿಕ ಅದನ್ನು ಯಮುನಾ ನದಿ ದಂಡೆಯಲ್ಲಿನ ‘ಅಸ್ಥ್ ಘಾಟ್’ಗೆ ತಂದರು. ನಂತರ ಸಿಖ್ ಧರ್ಮದ ಪ್ರಕಾರ ವಿಧಿವಿಧಾನಗಳನ್ನು ನೆರವೇರಿಸಿ, ಚಿತಾಭಸ್ಮವನ್ನು ವಿಸರ್ಜಿಸಲಾಯಿತು.

ಅಸ್ಥಿ ವಿಸರ್ಜನೆ ವೇಳೆ ಸಿಂಗ್ ಅವರ ಪತ್ನಿ ಗುರುಶರಣ್ ಕೌರ್ ಮತ್ತು ಪುತ್ರಿಯರಾದ ಉಪಿಂದರ್ ಸಿಂಗ್, ದಮನ್ ಸಿಂಗ್ ಮತ್ತು ಅಮೃತ್ ಸಿಂಗ್ ಅವರು ಉಪಸ್ಥಿತರಿದ್ದರು.

ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಅಸ್ಥಿಯನ್ನು ಯಮುನಾ ನದಿಯಲ್ಲಿ ಭಾನುವಾರ ವಿಸರ್ಜಿಸಲಾಯಿತು – ಪಿಟಿಐ ಚಿತ್ರ

ಮೋತಿಲಾಲ್ ನೆಹರೂ ಮಾರ್ಗದಲ್ಲಿರುವ ತಮ್ಮ ಅಧಿಕೃತ ನಿವಾಸದಲ್ಲಿ ಸಿಂಗ್ ಕುಟುಂಬಸ್ಥರು, ಸಿಖ್ ವಿಧಿವಿಧಾನಗಳ ಅನ್ವಯ ಜನವರಿ 1ರಂದು ‘ಅಖಂಡ ಪಥ್’ ನಡೆಸಲಿದ್ದಾರೆ. ಸಂಸತ್ತಿನ ಬಳಿಯಿರುವ ರಖಬ್ ಗಂಜ್ ಗುರುದ್ವಾರದ ಬಳಿ ಜನವರಿ 3ರಂದು ‘ಭೋಗ್’ ಕಾರ್ಯಕ್ರಮ, ‘ಅಂತಿಮ್ ಅರ್ದಾಸ್’ ಮತ್ತು ‘ಕೀರ್ತನ್’ ನಡೆಯಲಿವೆ.

92 ವರ್ಷದ ಸಿಂಗ್ ಅವರು ಅನಾರೋಗ್ಯದಿಂದಾಗಿ ಡಿ.26ರಂದು ನಿಧನ ಹೊಂದಿದ್ದರು. ದೆಹಲಿಯ ನಿಗಮ್ ಬೋಧ್ ಘಾಟ್‌ನಲ್ಲಿ ಶನಿವಾರ ಅವರ ಅಂತ್ಯಕ್ರಿಯೆ ನಡೆಯಿತು.

‘ದಿಕ್ಸೂಚಿ ಬೆಳಕು ಸಂವಿಧಾನ’



ನರೇಂದ್ರ ಮೋದಿ

ನವದೆಹಲಿ (ಪಿಟಿಐ): ‘ಸಂವಿಧಾನವು ಪ್ರತಿ ಸಂಕಷ್ಟದ ಸಮಯದಲ್ಲಿಯೂ ನಮ್ಮ ನೆರವಿಗೆ ನಿಂತಿದೆ. ನಮ್ಮ ಪಾಲಿಗೆ ಅದು ದಿಕ್ಸೂಚಿ ಬೆಳಕಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಬಣ್ಣಿಸಿದರು.

‘ಮನದ ಮಾತು’ ತಿಂಗಳ ರೇಡಿಯೊ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2025ರ ಜನವರಿ 26ರಂದು ನಮ್ಮ ಸಂವಿಧಾನವು 75 ವರ್ಷಗಳನ್ನು ಪೂರೈಸುತ್ತಿದೆ. ಇದು ನಮಗೆಲ್ಲರಿಗೂ ಹೆಮ್ಮೆಯ ವಿಷಯ. ಸಂವಿಧಾನದಿಂದಲೇ ನಾನು ಇಂದು ಈ ಸ್ಥಾನ ತಲುಪಲು ಸಾಧ್ಯವಾಯಿತು’ ಎಂದು ಹೇಳಿದರು.

75 ವರ್ಷಗಳ ಸ್ಮರಣಾರ್ಥ constitution75.com ವೆಬ್‌ಸೈಟ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಈ ಮೂಲಕ ಸಂವಿಧಾನದ ಪ್ರಸ್ತಾವನೆಯನ್ನು ಓದಲು ಮತ್ತು ವಿಡಿಯೊಗಳನ್ನು ಹಂಚಿಕೊಳ್ಳಲು ನಾಗರಿಕರಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಏಕತೆಯ ಕುಂಭ ಮೇಳ: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಜನವರಿ 13ರಿಂದ ಆರಂಭವಾಗಲಿರುವ ‘ಮಹಾ ಕುಭಮೇಳ’ವನ್ನು ‘ಏಕತೆಯ ಮಹಾ ಕುಂಭ’ ಎಂದು ನರೇಂದ್ರ ಮೋದಿ ಬಣ್ಣಿಸಿದರು.

ಮಹಾ ಕುಂಭಮೇಳಕ್ಕೆ ಭೇಟಿ ನೀಡುವ ವಿವಿಧ ಜನರನ್ನು ಉಲ್ಲೇಖಿಸಿ, ‘ವಿವಿಧತೆಯಲ್ಲಿ ಏಕತೆಯನ್ನು ಸಾರುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ. ಕುಂಭಮೇಳದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಚಾಟ್‌ಬೋಟ್ ಬಳಸಲಾಗುತ್ತಿದ್ದು, ಮೇಳಕ್ಕೆ ಸಂಬಂಧಿಸಿದ ಮಾಹಿತಿಯು ಎಐ ಚಾಟ್‌ಬೋಟ್ ಮೂಲಕ 11 ಭಾರತೀಯ ಭಾಷೆಗಳಲ್ಲಿ ಲಭ್ಯವಿರುತ್ತದೆ ಎಂದು ತಿಳಿಸಿದರು.

ಒಡಿಶಾದ ಕಲಾಹಾಂಡಿ ಜಿಲ್ಲೆಯ ಗೋಲಾಮುಂಡದ ರೈತರು ತಮ್ಮ ಪ್ರದೇಶದಲ್ಲಿ ಮಾಡಿದ ‘ತರಕಾರಿ ಕ್ರಾಂತಿ’ಯನ್ನು ಮೋದಿ ಅವರು ಶ್ಲಾಘಿಸಿದರು.

ಬಡತನ ಮತ್ತು ವಲಸೆಗೆ ಹೆಸರಾಗಿದ್ದ ನೆಲದಲ್ಲಿ, 10 ಮಂದಿ ರೈತರ ಗುಂಪು ಕೃಷಿ ಉತ್ಪನ್ನ ಸಂಸ್ಥೆ ಸ್ಥಾಪಿಸಿತು. ತರಕಾರಿ ಕ್ರಾಂತಿಗಾಗಿ ಆಧುನಿಕ ತಂತ್ರಜ್ಞಾನವನ್ನು ಬಳಸಿತು. ರೈತರು ಸ್ಥಾಪಿಸಿದ ಸಂಸ್ಥೆಯು ಇಂದು ವಾರ್ಷಿಕ ಕೋಟ್ಯಂತರ ರೂಪಾಯಿ ವ್ಯವಹಾರ ಮಾಡುತ್ತಿದೆ ಎಂದು ಹೇಳಿದರು.

ಭಾರತವು ಇದೇ ಮೊದಲ ಬಾರಿಗೆ ಮುಂದಿನ ವರ್ಷ ಫೆಬ್ರುವರಿಯಲ್ಲಿ ವಿಶ್ವ ಆಡಿಯೊ ವಿಶುವಲ್ ಎಂಟರ್‌ಟೈನ್‌ಮೆಂಟ್ ಸಮಾವೇಶವನ್ನು (ಡಬ್ಲ್ಯುಎವಿಇಎಸ್) ಆಯೋಜಿಸುತ್ತಿದೆ ಎಂದು ಪ್ರಧಾನಿ ಮೋದಿ ತಿಳಿಸಿದರು.

‘ಕಾಂಗ್ರೆಸ್ ಕೊಳೆಯುತ್ತಿದೆ’

ಶರ್ಮಿಷ್ಠಾ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ಕೊಳೆಯಲು ಆರಂಭಿಸಿದೆ, ಪಕ್ಷದ ದುರದೃಷ್ಟಕರ ಪರಿಸ್ಥಿತಿಯ ಬಗ್ಗೆ ಗಂಭೀರವಾದ ಆತ್ಮಾವಲೋಕನದ ಅಗತ್ಯ ಇದೆ ಎಂದು ಮಾಜಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರ ಮಗಳು ಶರ್ಮಿಷ್ಠಾ ಮುಖರ್ಜಿ ಹೇಳಿದ್ದಾರೆ.

ಪ್ರಮುಖ ನಾಯಕರಲ್ಲಿ ಸೈದ್ಧಾಂತಿಕ ಕೊರತೆ ಇರುವ ಕಾರಣಕ್ಕೆ ಹಾಗೂ ಪಕ್ಷದ ಇಂದಿನ ಸ್ಥಿತಿಯ ಕಾರಣಕ್ಕೆ ಪಕ್ಷದ ಹಳೆಯ ಕಾರ್ಯಕರ್ತರ ಪೈಕಿ ಹಲವರಲ್ಲಿ ಪರಕೀಯ ಭಾವನೆ ಮೂಡಿದೆ ಎಂದು ಹೇಳಿದ್ದಾರೆ. ತಮ್ಮ ತಂದೆ ಪ್ರಣವ್ ಅವರು ಮೃತಪಟ್ಟಾಗ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ (ಸಿಡಬ್ಲ್ಯುಸಿ) ಸಭೆಯನ್ನು ಏಕೆ ಕರೆದಿರಲಿಲ್ಲ, ನಿರ್ಣಯವನ್ನು ಏಕೆ ಅಂಗೀಕರಿಸಲಿಲ್ಲ ಎಂದು ಪ್ರಶ್ನಿಸಿದ್ದಾರೆ.

‘ಇದಕ್ಕೆ ಕಾಂಗ್ರೆಸ್ ಉತ್ತರ ನೀಡಬೇಕು... ಕಾಂಗ್ರೆಸ್ಸಿನ ಸಾಂಸ್ಥಿಕ ನೆನಪುಗಳು ಮರೆಯಾಗಿದ್ದರೆ, ರಾಹುಲ್ ಗಾಂಧಿ ಮತ್ತು ಅವರ ಸುತ್ತ ಇರುವವರಿಗೆ ಈ ಹಿಂದಿನ ಇಂತಹ ಸಂದರ್ಭಗಳಲ್ಲಿ ಪಕ್ಷ ಹೇಗೆ ವರ್ತಿಸಿತ್ತು ಎಂಬುದು ಗೊತ್ತಿಲ್ಲ ಎಂದಾದರೆ, ಪಕ್ಷದಲ್ಲಿನ ದುರದೃಷ್ಟಕರ ಪರಿಸ್ಥಿತಿಯನ್ನು ಅದೇ ಹೇಳುತ್ತದೆ’ ಎಂದು ಶರ್ಮಿಷ್ಠಾ ಅವರು ‘ಪಿಟಿಐ ವಿಡಿಯೊಸ್’ಗೆ ಹೇಳಿದ್ದಾರೆ.

ಕಾಂಗ್ರೆಸ್ಸಿನಲ್ಲಿ ನಿರ್ದಿಷ್ಟ ಕುಟುಂಬಕ್ಕೆ ಸೇರಿರದೇ ಇರುವ ನಾಯಕರ ಕೊಡುಗೆಗಳನ್ನು ಗುರುತಿಸುವುದಕ್ಕೆ ಸಂಬಂಧಿಸಿದ ಪ್ರಶ್ನೆಗೆ ಶರ್ಮಿಷ್ಠಾ ಅವರು, ‘ಪಿ.ವಿ. ನರಸಿಂಹ ರಾವ್ ಅವರಿಗೆ ಏನು ಮಾಡಲಾಯಿತು ಎಂಬುದನ್ನು ನಾವು ಮರೆಯಬಾರದು’ ಎಂದರು.

‘ಪ್ರಣವ್ ಮೃತಪಟ್ಟಾಗ ಸಂತಾಪ ಸೂಚಿಸಲು ಸಿಡಬ್ಲ್ಯುಸಿ ಸಭೆ ಯನ್ನು ಕಾಂಗ್ರೆಸ್ ಕರೆಯಲಿಲ್ಲ. ರಾಷ್ಟ್ರಪತಿ ಸ್ಥಾನದಲ್ಲಿದ್ದವರು ಮೃತಪಟ್ಟಾಗ ಸಿಡಬ್ಲ್ಯುಸಿ ಸಭೆ ಕರೆಯುವುದಿಲ್ಲ ಎಂದು ಹಿರಿಯ ನಾಯಕರೊಬ್ಬರು ನನಗೆ ಹೇಳಿದರು. ಅದು ಸುಳ್ಳು. ಕೆ.ಆರ್. ನಾರಾಯಣನ್ ಅವರು ಮೃತಪಟ್ಟಾಗ ಸಿಡಬ್ಲ್ಯುಸಿ ಸಭೆ ಕರೆಯಲಾಗಿತ್ತು’ ಎಂದು ಶರ್ಮಿಷ್ಠಾ ಅವರು ‘ಎಕ್ಸ್’ ಮೂಲಕ ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

ಸಿ.ಎಂ ನಿವಾಸದ ಅಡಿ ‘ಶಿವಲಿಂಗ’ ಇದೆ: ಅಖಿಲೇಶ್

ಲಖನೌ: ಉತ್ತರ ಪ್ರದೇಶದ ಮುಖ್ಯಮಂತ್ರಿಗಳ ನಿವಾಸದ ಅಡಿಯಲ್ಲಿ ‘ಶಿವಲಿಂಗ’ ಇದೆ. ಇಲ್ಲಿ ಉತ್ಖನನ ನಡೆಯಬೇಕು ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಭಾನುವಾರ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ಪುರಾತನ ಕಾಲದಲ್ಲಿ ದೇಗುಲ ಇತ್ತು ಎಂಬ ಶಂಕೆ ಮೇಲೆ ಸಂಭಲ್ ಮಸೀದಿ ಸೇರಿ ರಾಜ್ಯದ ಹಲವು ಸ್ಥಳಗಳಲ್ಲಿ ಉತ್ಖನನ ನಡೆಸುತ್ತಿರುವ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಸರ್ಕಾರವನ್ನು ಟೀಕಿಸಿದರು.

ಇವಿಎಂ ನಂಬಿಕೆಗೆ ಅರ್ಹವಲ್ಲ: ಮತಪತ್ರ ಬಳಸಿ ಚುನಾವಣೆಗಳನ್ನು ನಡೆಸಬೇಕು ಎಂದು ಅಖಿಲೇಶ್ ಯಾದವ್ ಆಗ್ರಹಿಸಿದರು.

‘ಜರ್ಮನಿಯಂಥ ದೇಶ ಸಹ ಮತಪತ್ರ ಬಳಸುತ್ತಿದೆ. ಆದರೆ ಭಾರತದಲ್ಲಿ ಸ್ವಹಿತಾಸಕ್ತಿಗಾಗಿ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಲಾಗುತ್ತಿದೆ’ ಎಂದು ಹೇಳಿದರು.

ಇವಿಎಂಗಳ ಮೇಲೆ ಯಾರಿಗೂ ನಂಬಿಕೆ ಇಲ್ಲ. ಚುನಾವಣೆಗಳಲ್ಲಿ ಜಯ ಸಾಧಿಸಿರುವವರಿಗೂ ಇವಿಎಂ ಮೇಲೆ ಅಪನಂಬಿಕೆ ಇದ್ದಂತಿದೆ ಎಂದರು.

ಬಾಹ್ಯಾಕಾಶ ನೌಕೆಯ ‘ಡಾಕಿಂಗ್’ ಪ್ರದರ್ಶನ

ನವದೆಹಲಿ (ಪಿಟಿಐ): ಕಕ್ಷೆಯಲ್ಲಿ ಬಾಹ್ಯಾಕಾಶ ನೌಕೆಗಳ ‘ಡಾಕಿಂಗ್’ ಮತ್ತು ‘ಅನ್‌ಡಾಕಿಂಗ್’ ನಡೆಸುವ ಸಾಮರ್ಥ್ಯವನ್ನು ಪ್ರದರ್ಶಿಸುವ ತನ್ನ ಮಹತ್ತರ ಯೋಜನೆಯ ಭಾಗವಾಗಿ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಸೋಮವಾರ ರಾತ್ರಿ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಎರಡು ಉಪಗ್ರಹಗಳನ್ನು ಉಡಾವಣೆ ಮಾಡಲು ಸಜ್ಜಾಗಿದೆ.

ಸ್ಪೇಸ್ ಡಾಕಿಂಗ್ ಎಕ್ಸ್‌ಪರಿಮೆಂಟ್ (ಸ್ಪೇಡ್‌ಎಕ್ಸ್) ಹೆಸರಿನ ಈ ಕಾರ್ಯಯೋಜನೆ ಯಶಸ್ವಿಯಾದರೆ ಭಾರತವು ಇಂತಹ ಸಾಧನೆ ಮಾಡಿದ ವಿಶ್ವದ ನಾಲ್ಕನೇ ರಾಷ್ಟ್ರ ಎನಿಸಿಕೊಳ್ಳಲಿದೆ.

ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್ (ಪಿಎಸ್‌ಎಲ್‌ವಿ) ರಾಕೆಟ್, ‘ಎಸ್‌ಡಿಎಕ್ಸ್01’ ಮತ್ತು ‘ಎಸ್‌ಡಿಎಕ್ಸ್02’ ಹೆಸರಿನ ಎರಡು ಉಪಗ್ರಹಗಳನ್ನು ಭೂಮಿಯಿಂದ 476 ಕಿ.ಮೀ ದೂರದ ಕಕ್ಷೆಗೆ ಸೇರಿಸಲಿದೆ. ಗಗನನೌಕೆಗಳು ಪರಸ್ಪರ ಸಂಧಿಸುವ (ಡಾಕಿಂಗ್) ಪ್ರಯೋಗದ ಪ್ರಾತ್ಯಕ್ಷಿಕೆಯನ್ನು ಜನವರಿ ತಿಂಗಳ ಮೊದಲ ವಾರದಲ್ಲಿ ನಡೆಸಲಾಗುವುದು ಎಂದು ಇಸ್ರೊ ಅಧಿಕಾರಿಗಳು ತಿಳಿಸಿದ್ದಾರೆ.

ಚಂದ್ರನ ಅಂಗಳದಿಂದ ಕಲ್ಲು ಮತ್ತು ಮಣ್ಣಿನ ಮಾದರಿಯನ್ನು ತರುವುದು, ಪ್ರಸ್ತಾವಿತ ‘ಭಾರತೀಯ ಬಾಹ್ಯಾಕಾಶ ನಿಲ್ದಾಣ’ ಸ್ಥಾಪಿಸುವುದು ಮತ್ತು ಚಂದ್ರನಲ್ಲಿಗೆ ಗಗನಯಾತ್ರಿಗಳನ್ನು ಕಳುಹಿಸುವುದು ಸೇರಿದಂತೆ ಭಾರತದ ಭವಿಷ್ಯದ ಪ್ರಯೋಗಗಳಿಗೆ ‘ಸ್ಪೇಡ್‌ಎಕ್ಸ್’ ಮಿಷನ್ ಒಂದು ಮೆಟ್ಟಿಲು ಎಂದು ನಿರೀಕ್ಷಿಸಲಾಗಿದೆ. ಅಮೆರಿಕ, ರಷ್ಯಾ ಮತ್ತು ಚೀನಾ ಮಾತ್ರ ಬಾಹ್ಯಾಕಾಶ ನೌಕೆಗಳ ‘ಡಾಕಿಂಗ್’ ತಂತ್ರಜ್ಞಾನವನ್ನು ಹೊಂದಿರುವ ದೇಶಗಳಾಗಿವೆ.

‘ಮತದಾರರ ಪಟ್ಟಿ ತಿರುಚಲು ಯತ್ನ’

ಅರವಿಂದ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭಾ ಚುನಾವಣೆಗೂ ಮುನ್ನ ಬಿಜೆಪಿ ಮತದಾರರ ಪಟ್ಟಿಯನ್ನು ತಿರುಚಲು ಯತ್ನಿಸುತ್ತಿದೆ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಭಾನುವಾರ ಆರೋಪಿಸಿದ್ದಾರೆ.

ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ ಮತ್ತು ದೆಹಲಿ ಮುಖ್ಯಮಂತ್ರಿ ಅತಿಶಿ ಅವರೊಂದಿಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೇಜ್ರಿವಾಲ್, ‘ಪ್ರಬಲ ಅಭ್ಯರ್ಥಿಗಳ ಕೊರತೆ ಮತ್ತು ಇತರ ಕಾರಣಗಳಿಂದ ಸೋಲಿನ ಭೀತಿಯಲ್ಲಿರುವ ಬಿಜೆಪಿ, ‘ಅನ್ಯಾಯದ ಮಾರ್ಗ’ದಲ್ಲಿ ಚುನಾವಣೆ ಗೆಲ್ಲಲು ಪ್ರಯತ್ನಿಸುತ್ತಿದೆ’ ಎಂದು ಆರೋಪಿಸಿದರು.

‘ಬಿಜೆಪಿ ಈಗಾಗಲೇ ಚುನಾವಣೆಯಲ್ಲಿ ಸೋತಿದೆ. ಆ ಪಕ್ಷದಲ್ಲಿ ಸಮರ್ಥ ಅಭ್ಯರ್ಥಿಗಳೇ ಇಲ್ಲ. ಮತದಾರರ ಪಟ್ಟಿಯನ್ನು ಬದಲಾವಣೆ ಮಾಡುವ ಮೂಲಕ ಗೆಲ್ಲುವ ಪ್ರಯತ್ನಕ್ಕೆ ಕೈಹಾಕಿದೆ’ ಎಂದು ಕೇಜ್ರಿವಾಲ್ ಹೇಳಿದ್ದಾರೆ.

‘ಬಿಜೆಪಿ ಒಂದು ಕ್ಷೇತ್ರದಲ್ಲಿ ಸುಮಾರು 11,000 ಮತದಾರರ ಹೆಸರನ್ನು ತೆಗೆಯಲು ಅರ್ಜಿ ಸಲ್ಲಿಸಿದೆ. ಆದರೆ, ಮುಖ್ಯ ಚುನಾವಣಾ ಆಯುಕ್ತರ ಮಧ್ಯಸ್ಥಿಕೆಯಿಂದಾಗಿ ಅದಕ್ಕೆ ತಡೆಯೊಡ್ಡಲಾಗಿದೆ’ ಎಂದರು.

‘ಪಟ್ಟಿಯಿಂದ ಪತ್ನಿ ಹೆಸರು ಅಳಿಸಲು ಬಿಜೆಪಿ ಪ್ರಯತ್ನ’

ದೆಹಲಿ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಿಂದ ತನ್ನ ಪತ್ನಿಯ ಹೆಸರನ್ನು ಅಳಿಸಿಹಾಕಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯಸಭಾ ಸಂಸದ ಸಂಜಯ್ ಸಿಂಗ್ ಭಾನುವಾರ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಪತ್ನಿ ಅನಿತಾ ಸಿಂಗ್ ಅವರೊಂದಿಗೆ ದಶಕಗಳಿಂದ ದೆಹಲಿಯಲ್ಲಿ ವಾಸಿಸುತ್ತಿರುವ ಪೂರ್ವಾಂಚಲದ ಜನರ ಹೆಸರುಗಳನ್ನೂ ಪಟ್ಟಿಯಿಂದ ತೆಗೆಯಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದಿದ್ದಾರೆ.

ಅಕ್ರಮ ನೋಂದಣಿಗೆ ಎಎಪಿ ಯತ್ನ: ಬಿಜೆಪಿ

ಸೋಲಿನ ಭೀತಿಯಲ್ಲಿರುವ ಎಎಪಿಯು ಮತದಾರರ ಅಕ್ರಮ ನೋಂದಣಿಗೆ ಯತ್ನಿಸುತ್ತಿದೆ ಎಂದು ಬಿಜೆಪಿ ಭಾನುವಾರ ಆರೋಪಿಸಿದೆ.

ಎಎಪಿ ನಾಯಕ ಸಂಜಯ್ ಸಿಂಗ್ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಬಿಜೆಪಿ ದೆಹಲಿ ನಗರ ಘಟಕದ ಮುಖ್ಯಸ್ಥ ವೀರೇಂದ್ರ ಸಚ್‌ದೇವ ಅವರು, ‘ಸಂಜಯ್ ಅವರ ಪತ್ನಿಯ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸಿಹಾಕುವಂತೆ ಅರ್ಜಿ ಸಲ್ಲಿಸಿರುವ ಇಬ್ಬರು ಮಹಿಳೆಯರು ಸಂಜಯ್ ಅವರ ಸಂಬಂಧಿಕರೇ ಆಗಿದ್ದಾರೆ’ ಎಂದು ಹೇಳಿದ್ದಾರೆ.

ಆರೋಪ ನಿರಾಕರಿಸಿದ ಸಾರಿಗೆ ಆಯುಕ್ತ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಆತಿಶಿ ಅವರಿಗೆ ಪತ್ರ ಬರೆದಿರುವ ಸಾರಿಗೆ ಆಯುಕ್ತ ಪ್ರಶಾಂತ್ ಗೋಯಲ್ ಅವರು, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಯೋಜನೆಗೆ ಸಂಬಂಧಿಸಿ ಆತಿಶಿ ವಿರುದ್ಧ ತನಿಖೆಗೆ ತಯಾರಿ ನಡೆಯುತ್ತಿದೆ ಎಂಬ ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಅವರ ಆರೋಪವನ್ನು ತಳ್ಳಿಹಾಕಿದ್ದಾರೆ

‘ಮುಖ್ಯಮಂತ್ರಿ ವಿರುದ್ಧ ಸಾರಿಗೆ ಇಲಾಖೆಯು ಯಾವುದೇ ತನಿಖೆಗೆ ಮುಂದಾಗಿಲ್ಲ ಎನ್ನುವುದಕ್ಕೆ ದಾಖಲೆಗಳನ್ನು ನೀಡುತ್ತೇನೆ. ಕೇಜ್ರಿವಾಲ್ ಅವರ ಆರೋಪದಲ್ಲಿ ಹುರುಳಿಲ್ಲ’ ಎಂದು ಗೋಯಲ್ ಅವರು ಡಿ.26ರಂದು ಕಳುಹಿಸಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಹರಕೆ

ಕೊಪ್ಪಳ ತಾಲ್ಲೂಕಿನ ಮುನಿರಾಬಾದ್ ಸಮೀಪದ ಅಗಳಕೇರಾ ಗ್ರಾಮದ ಮಾರುತೇಶ್ವರ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ಭಾನುವಾರ ಭಕ್ತರು ಮುಳ್ಳಿನಲ್ಲಿ ಹಾರಿ ಹರಕೆ ತೀರಿಸುವ ವಿಶಿಷ್ಟ ಸಂಪ್ರದಾಯ ಆಚರಿಸಿದರು

–ಪ್ರಜಾವಾಣಿ ಚಿತ್ರ/ಗುರುರಾಜ ಅಂಗಡಿ

ಗೆಜೆಟೆಡ್ ಪ್ರೊಬೇಷನರ್: ತೊಡಕಿನ ಮಧ್ಯೆ ಮರುಪರೀಕ್ಷೆ

ಒಂದನೇ ಪುಟದಿಂದ...

ಈ ಹಿಂದಿನಂತೆ ಸಂಬಂಧವಿಲ್ಲದ ಪ್ರಶ್ನೆಗಳನ್ನು ಕೇಳಿರಲಿಲ್ಲ. ಸರಿಯಾಗಿ ಸಿದ್ಧತೆ ಮಾಡಿಕೊಂಡಿದ್ದವರು ಸುಲಭವಾಗಿ ಉತ್ತರಿಸಬಹುದಾಗಿತ್ತು’ ಎಂದು ಅಭ್ಯರ್ಥಿಗಳು ಹೇಳಿದರು.

‘ಎರಡನೇ ಪ್ರಶ್ನೆಪತ್ರಿಕೆಯೂ ಉತ್ತಮವಾಗಿತ್ತು. ಆದರೆ ಸಂಕೀರ್ಣವಾಗಿತ್ತು. ಕೆಎಎಸ್ ಹುದ್ದೆಗಳಿಗೆ ಈವರೆಗೆ ಕೇಳಲಾದ ಪ್ರಶ್ನೆಗಳಿಗಿಂತ ಸ್ವಲ್ಪ ಕ್ಲಿಷ್ಟವಾದ ಪ್ರಶ್ನೆಗಳನ್ನು ಕೇಳಲಾಗಿತ್ತು’ ಎಂದು ವಿವರಿಸಿದರು.

ಭಾನುವಾರದ ಪರೀಕ್ಷೆಯನ್ನು ವಿವಿಧ ಜಿಲ್ಲಾ ಕೇಂದ್ರಗಳ 214 ಸರ್ಕಾರಿ, 189 ಅನುದಾನಿತ ಹಾಗೂ 161 ಖಾಸಗಿ ಶಾಲಾ–ಕಾಲೇಜುಗಳಲ್ಲಿ ನಡೆಸಲಾಯಿತು. ಎಲ್ಲೆಡೆ ಯಾವುದೇ ತೊಂದರೆ ಇಲ್ಲದೆ ಪರೀಕ್ಷೆ ನಡೆದಿದ್ದು, ಒಂದೆರಡು ಕೇಂದ್ರ ಗಳಲ್ಲಷ್ಟೇ ತಾಂತ್ರಿಕ ಸಮಸ್ಯೆ ಎದುರಾಗಿದೆ. ಅದನ್ನು ತಕ್ಷಣವೇ ಸರಿಪಡಿಸಿ ಪರೀಕ್ಷೆ ನಡೆಸಲಾಯಿತು ಎಂದು ಮೂಲಗಳು ಮಾಹಿತಿ ನೀಡಿವೆ.



time and not vice versa.

C. The Constitution provides the mechanism of joint sitting of two houses of the Parliament to resolve a deadlock between them over the passage of a bill.

D. The Constitution does not provide the mechanism of joint sitting of two houses of the Parliament to resolve a deadlock between them over the passage of a bill.

Which of the statements given above are correct?

(1) A and D only

(2) B and C only

(3) A, B and C only

2883450

2883450

ಇಂಗ್ಲಿಷ್ ಪ್ರಶ್ನೆಗಳು

45 ನಿಮಿಷ ತಡ

ಕೋಲಾರ ಮತ್ತು ರಾಮನಗರದ ಒಂದೊಂದು ಕೇಂದ್ರಗಳಲ್ಲಿ ಅಭ್ಯರ್ಥಿಗಳ ಪ್ರವೇಶಪತ್ರದ ಸಂಖ್ಯೆ ಮತ್ತು ಅವರಿಗೆ ನೀಡಲಾದ ಒಎಂಆರ್ ಶೀಟ್‌ನ ಸಂಖ್ಯೆ ಹೊಂದಾಣಿಕೆಯಾಗದೆ ಸಮಸ್ಯೆ ಎದುರಾಗಿತ್ತು.

ಕೋಲಾರದಲ್ಲಿ ಕೆಲ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದ ಸಿಬ್ಬಂದಿ ಜತೆಗೆ ಈ ಸಂಬಂಧ ವಾಗ್ವಾದ ನಡೆಸಿದರು. ಒಂದು ಗಂಟೆಯಷ್ಟು ತಡವಾಗಿ ಪರೀಕ್ಷೆ ನಡೆಸಲಾಯಿತು ಎಂದು ಮೂಲಗಳು ತಿಳಿಸಿವೆ.

ರಾಮನಗರದ ಒಂದು ಪರೀಕ್ಷಾ ಕೇಂದ್ರದಲ್ಲೂ ತಾಂತ್ರಿಕ ಸಮಸ್ಯೆ ಎದುರಾಗಿತ್ತು. 160 ಅಭ್ಯರ್ಥಿಗಳು ಈ ಸಮಸ್ಯೆ ಎದುರಿಸಿದರು. ಪರೀಕ್ಷೆ ಆರಂಭಿಸುವಷ್ಟರಲ್ಲಿ 45 ನಿಮಿಷ ತಡವಾಗಿತ್ತು. ಎರಡೂ ಕಡೆ ಎಷ್ಟು ತಡವಾಯಿತೋ, ಅಷ್ಟು ಸಮಯವನ್ನು ಅಭ್ಯರ್ಥಿಗಳಿಗೆ ಹೆಚ್ಚುವರಿಯಾಗಿ ನೀಡಲಾಯಿತು ಎಂದು ಮೂಲಗಳು ಮಾಹಿತಿ ನೀಡಿವೆ.

ಕಳೆ ಕಾಟ: ರಾಜ್ಯದ ಅರಣ್ಯ ಸ್ವರೂಪ ಬದಲು

ಒಂದನೇ ಪುಟದಿಂದ...

ರಾಜ್ಯದ ದಟ್ಟಾರಣ್ಯಗಳಿಗೂ ಇವು ವ್ಯಾಪಿಸಿವೆ. ಲಂಟಾನಾದ ಕಾರಣದಿಂದ ಕೆಲ ಸಣ್ಣ ಸಸ್ಯ ಮತ್ತು ಮರಗಳ ಪ್ರಭೇದಗಳು ನಾಶವಾಗುತ್ತಿವೆ. ಅಂತಹ ಸಸ್ಯ–ಮರಗಳನ್ನು ಆಹಾರಕ್ಕಾಗಿ ಅವಲಂಬಿಸಿರುವ ಕೀಟ–ಜಂತು ಮತ್ತು ಹಕ್ಕಿ ಪ್ರಭೇದಗಳಿಗೆ ತೊಡಕಾಗಿದೆ. ಅಕೇಷಿಯಾ ಮತ್ತು ತೀವ್ರಗಂಧಿ ಕಳೆಯ ಕೆಳಗೆ ಹುಲ್ಲು ಮತ್ತು ಇತರ ನೆಲ ಸಸ್ಯಗಳು ಬೆಳೆಯುವುದಿಲ್ಲ. ಅಂತಹ ಪ್ರಭೇದಗಳೂ ನಾಶವಾಗುತ್ತಿವೆ.

ಹಸಿರಿನ ಹೊದಿಕೆ ಹಿಗ್ಗುತ್ತಿದೆ ಎಂಬುದಕ್ಕೆ ಮಾತ್ರವೇ ಅರಣ್ಯ ಸ್ಥಿತಿಗತಿ ವರದಿ ಒತ್ತು ನೀಡುತ್ತಿದೆ. ಆದರೆ ಕಳೆ ಸಸ್ಯಗಳ ಅತಿಕ್ರಮಣದಿಂದ ಅರಣ್ಯದ ಸ್ವರೂಪ ಬದಲಾಗುತ್ತಿರುವುದನ್ನು ವರದಿಯು ಗಂಭೀರವಾಗಿ ಪರಿಗಣಿಸಿಲ್ಲ ಎಂದು ಹಲವು ಪರಿಸರವಾದಿ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿವೆ.

ಲೈಂಗಿಕ ಹಲ್ಲೆ ತೀರ್ಮಾನಕ್ಕೆ ಸಾಕ್ಷ್ಯ ಬೇಕು: ಹೈಕೋರ್ಟ್

ನವದೆಹಲಿ (ಪಿಟಿಐ): ಪೋಕ್ಸೊ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ವ್ಯಕ್ತಿಯೊಬ್ಬನನ್ನು ದೆಹಲಿ ಹೈಕೋರ್ಟ್ ದೋಷಮುಕ್ತಗೊಳಿಸಿದೆ. ಬಾಲಕ ಅಥವಾ ಬಾಲಕಿಯು ‘ದೈಹಿಕ ಸಂಬಂಧ’ ಎಂಬ ಪದವನ್ನು ಬಳಸಿದ್ದಾರೆ ಎಂದಮಾತ್ರಕ್ಕೆ, ಅದನ್ನು ಲೈಂಗಿಕ ಹಲ್ಲೆ ಎಂದು ಅರ್ಥ ಮಾಡಿಕೊಳ್ಳಬೇಕಿಲ್ಲ ಎಂದು ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಪ್ರತಿಭಾ ಎಂ. ಸಿಂಗ್ ಮತ್ತು ಅಮಿತ್ ಶರ್ಮ ಅವರು ಇರುವ ವಿಭಾಗೀಯ ಪೀಠವು, ಸಂತ್ರಸ್ತೆಯು ಆರೋಪಿಯ ಜೊತೆ ಸ್ವಇಚ್ಛೆಯಿಂದ ತೆರಳಿದ್ದಾಗ, ಆಕೆಯ ಮೇಲೆ ಲೈಂಗಿಕ ಹಲ್ಲೆ ನಡೆದಿದೆ ಎಂಬ ತೀರ್ಮಾನಕ್ಕೆ ವಿಚಾರಣಾ ನ್ಯಾಯಾಲಯವು ಹೇಗೆ ಬಂದಿತು ಎಂಬುದು ಸ್ಪಷ್ಟವಾಗಿಲ್ಲ ಎಂದು ಹೇಳಿದೆ.

ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ವ್ಯಕ್ತಿಯು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ. ಮೇಲ್ಮನವಿಯನ್ನು ವಿಭಾಗೀಯ ಪೀಠವು ಮಾನ್ಯ ಮಾಡಿದೆ.

ದೈಹಿಕ ಸಂಬಂಧವನ್ನು ಲೈಂಗಿಕ ಹಲ್ಲೆ ಮತ್ತು ಲೈಂಗಿಕ ಸಂಪರ್ಕದ ಮೂಲಕ ನಡೆದ ಹಲ್ಲೆ ಎಂದು ಹೇಳುವಾಗ, ಅದನ್ನು ಸಾಬೀತು ಮಾಡುವ ಸಾಕ್ಷ್ಯಗಳು ಇರಬೇಕು. ಅದನ್ನು ತರ್ಕ, ಅನುಮಾನದ ಆಧಾರದಲ್ಲಿ ಮಾತ್ರವೇ ತೀರ್ಮಾನಿಸಬಾರದು ಎಂದು ಪೀಠ ಹೇಳಿದೆ.

‘ಸಂತ್ರಸ್ತೆಯು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವಳು ಎಂಬ ಒಂದೇ ಸಂಗತಿಯು, ಅಲ್ಲಿ ಲೈಂಗಿಕ ಸಂಪರ್ಕದ ಮೂಲಕ ಹಲ್ಲೆ ನಡೆದಿತ್ತು ಎಂಬ ತೀರ್ಮಾನಕ್ಕೆ ಬರಲು ಸಾಕಾಗುವುದಿಲ್ಲ. ಸಂತ್ರಸ್ತೆಯು ದೈಹಿಕ ಸಂಬಂಧ ಎಂಬ ಪದವನ್ನು ಬಳಸಿದ್ದಾಳೆ. ಆದರೆ ಅದರ ಅರ್ಥ ಏನು ಎಂಬುದು ಸ್ಪಷ್ಟವಾಗಿಲ್ಲ’ ಎಂದು ಪೀಠ ವಿವರಿಸಿದೆ.

ಅನುಮಾನದ ಲಾಭವನ್ನು ಆರೋಪಿಗೇ ನೀಡಬೇಕು ಎಂದು ಹೇಳಿದೆ. ಸಂತ್ರಸ್ತ ಬಾಲಕಿಯ ತಾಯಿ ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಲಾಗಿತ್ತು. 14 ವರ್ಷ ವಯಸ್ಸಿನ ತನ್ನ ಮಗಳನ್ನು ಆಮಿಷವೊಡ್ಡಿ ಅಪಹರಿಸಲಾಗಿದೆ ಎಂದು ದೂರಿನಲ್ಲಿ ಅವರು ಹೇಳಿದ್ದರು.

ನಂತರ ಸಂತ್ರಸ್ತೆಯು ಆರೋಪಿಯ ಜೊತೆಯಲ್ಲಿ ಫರೀದಾಬಾದ್‌ನಲ್ಲಿ ಪತ್ತೆಯಾಗಿದ್ದಳು. ಆರೋಪಿಯನ್ನು ಐಪಿಸಿ ಅಡಿ ಹಾಗೂ ಪೋಕ್ಸೊ ಕಾಯ್ದೆಯ ಅಡಿಯಲ್ಲಿ ಶಿಕ್ಷೆಗೆ ಗುರಿಪಡಿಸಲಾಗಿತ್ತು.

‘ಅಂಬಾನಿ, ಅದಾನಿ ಲೋಟ ನೀರು ಕೇಳಿದರೆ, ಸರ್ಕಾರ ಬಿಂದಿಗೆ ನೀರು ಕೊಡುತ್ತಿದೆ’

ಸಿಪಿಎಂ 24ನೇ ರಾಜ್ಯ ಸಮ್ಮೇಳನ ಆರಂಭ

ಪ್ರಜಾವಾಣಿ ವಾರ್ತೆ

ತುಮಕೂರು: ‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಜೊತೆ ಸೇರಿ ರಾಷ್ಟ್ರವನ್ನು ಕೋಮುವಾದಿ ನೆಲೆಗಟ್ಟಿನಲ್ಲಿ ವಿಭಜಿಸಲು ಹೊರಟಿದೆ. ದೇಶದ ಏಕತೆ ಮುರಿದು ದ್ವೇಷ ಹರಡಲು ಮುಂದಾಗಿದೆ’ ಎಂದು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ(ಸಿಪಿಎಂ) ರಾಷ್ಟ್ರೀಯ ನಾಯಕರು ಕಿಡಿಕಾರಿದರು.

ನಗರದಲ್ಲಿ ಭಾನುವಾರ ಆರಂಭವಾದ ಮೂರು ದಿನಗಳ ‘ಸಿಪಿಎಂ 24ನೇ ರಾಜ್ಯ ಸಮ್ಮೇಳನ’ದಲ್ಲಿ ಕೇಂದ್ರ ಸರ್ಕಾರದ ನೀತಿ ಮತ್ತು ಬಲಪಂಥೀಯ ಸಂಘಟನೆಗಳ ವಿರುದ್ಧ ಎಡ ಪಕ್ಷದ ನಾಯಕರು ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಸಂಸದ, ಸಿಪಿಎಂ ಪಾಲಿಟ್ ಬ್ಯುರೊ ಸದಸ್ಯ ಎ.ವಿಜಯ ರಾಘವನ್, ‘ಕೇಂದ್ರ ಸರ್ಕಾರ ರಾಷ್ಟ್ರದ 144 ಕೋಟಿ ಜನರಿಗಾಗಿ ಕೆಲಸ ಮಾಡುತ್ತಿಲ್ಲ. ಕೇವಲ ನಾಲ್ಕೈದು ಕುಟುಂಬಗಳ ಹಿತಾಸಕ್ತಿ ಕಾಯುತ್ತಿದೆ. ಅಂಬಾನಿ, ಅದಾನಿ, ಟಾಟಾ, ಬಿರ್ಲಾ ಅವರ ಕುಟುಂಬಕ್ಕೆ ರಾಷ್ಟ್ರದ ಸಂಪತ್ತು ಧಾರೆ ಎರೆಯುತ್ತಿದೆ. ಅವರು ಒಂದು ಲೋಟ ನೀರು ಕೇಳಿದರೆ, ಸರ್ಕಾರ ಒಂದು ಬಿಂದಿಗೆ ನೀರು ಕೊಡುತ್ತಿದೆ’ ಎಂದು ಟೀಕಿಸಿದರು.

ಸಿಪಿಎಂ ಪಕ್ಷದ 24ನೇ ರಾಜ್ಯ ಸಮ್ಮೇಳನದ ಪ್ರಯುಕ್ತ ತುಮಕೂರಿನಲ್ಲಿ ಭಾನುವಾರ ರ‍್ಯಾಲಿ ನಡೆಯಿತು

‘ನಾವು ಸ್ವಾತಂತ್ರ್ಯ ಅಮೃತ ಮಹೋತ್ಸವದ ಕಾಲಘಟ್ಟದಲ್ಲಿದ್ದೇವೆ, ಭಾರತ ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗಿದೆ ಎಂದು ಕೇಂದ್ರದ ನಾಯಕರು ಬಿಂಬಿಸುತ್ತಿದ್ದಾರೆ. ಆದರೆ ವಾಸ್ತವದ ಸ್ಥಿತಿ ಇದಕ್ಕಿಂತ ಭಿನ್ನವಾಗಿದೆ. ಜಗತ್ತಿನಲ್ಲೇ ಅತಿ ಹೆಚ್ಚಿನ ಬಡವರು, ಕೂಲಿ ಕಾರ್ಮಿಕರು, ಭೂ ವಂಚಿತರು ನಮ್ಮ ದೇಶದಲ್ಲಿದ್ದಾರೆ. ವಾಸ್ತವ ಮುಚ್ಚಿಟ್ಟು ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ’ ಎಂದರು.

ಬಹಿರಂಗ ಸಭೆ ಉದ್ಘಾಟಿಸಿ ಮಾತನಾಡಿದ ಕೇರಳ ಮಾಜಿ ಸಚಿವ ಹಾಗೂ ಪಾಲಿಟ್ ಬ್ಯುರೊ ಸದಸ್ಯ ಎಂ.ಎ.ಬೇಬಿ, ‘ಬಿಜೆಪಿ–ಆರ್‌ಎಸ್‌ಎಸ್ ಸಮಾಜವನ್ನು ಜಾತಿ, ಧರ್ಮದ ಆಧಾರದ ಮೇಲೆ ವಿಭಜಿಸುತ್ತಿದೆ. ಏಕತೆಯ ಪರ ಧ್ವನಿ ಎತ್ತಿದವರನ್ನು ಕೊಲ್ಲುತ್ತಿದೆ. ರಾಜ್ಯದಲ್ಲಿ ಏಕತೆಯ ಧ್ವನಿಯಾಗಿದ್ದ ಸಂಶೋಧಕ ಎಂ.ಎಂ.ಕಲಬುರ್ಗಿ ಅವರನ್ನು ಕೊಲ್ಲಲಾಯಿತು. ದೇಶದ ಜನ ಏಕತೆಯಿಂದ ಇರಬಾರದು ಎಂಬುವುದು ಅದರ ಉದ್ದೇಶ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿಪಿಎಂ ಪಾಲಿಟ್ ಬ್ಯುರೊ ಸದಸ್ಯ ಬಿ.ವಿ. ರಾಘವಲು, ಸಿಪಿಎಂ ಕೇಂದ್ರ ಸಮಿತಿ ಸದಸ್ಯ ಕೆ.ಎನ್. ಉಮೇಶ್, ರಾಜ್ಯ ಕಾರ್ಯದರ್ಶಿ ಯು.ಬಸವರಾಜು, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ನೀಲಾ, ಮೀನಾಕ್ಷಿ ಸುಂದರಂ, ಸೈಯದ್ ಮುಜೀಬ್, ಚಿಂತಕ ಕೆ.ದೊರೈರಾಜ್ ಇತರರು ಉಪಸ್ಥಿತರಿದ್ದರು.

‘21ರೊಳಗೆ ಮದುವೆಯಾಗಿ, 3ಕ್ಕೂ ಹೆಚ್ಚು ಮಕ್ಕಳ ಹೊಂದಿ’

ಒಂದನೇ ಪುಟದಿಂದ...

‘ವಿವಾಹದ ಬಳಿಕವೂ ಶಿಕ್ಷಣ ಮುಂದುವರಿಸಿ, ಉದ್ಯೋಗ ಮಾಡಬಹುದಾಗಿದೆ. ತಮಿಳು ಬ್ರಾಹ್ಮಣರಲ್ಲಿ ಕನಿಷ್ಠ ವಯೋಮಿತಿಗೆ ವಿವಾಹ ಮಾಡಲಾಗುತ್ತಿದೆ. ಸೂಕ್ತ ವಯಸ್ಸಿಗೆ ಶಾಸ್ತ್ರೀಯ ವಿವಾಹವಾದರೆ ಅನೇಕ ಸಮಸ್ಯೆಗಳು ನಿವಾರಣೆಯಾಗಲಿವೆ. ಹವ್ಯಕ ಸಂತತಿ ವೃದ್ಧಿಗೆ ಹೆಚ್ಚಿನ ಮಕ್ಕಳನ್ನು ಸಮುದಾಯದವರು ಪಡೆಯಬೇಕಿದೆ. ಮೂರಕ್ಕಿಂತ ಅಧಿಕ ಮಕ್ಕಳನ್ನು ಹೊಂದಿದವರು ಆ ಮಕ್ಕಳನ್ನು ಮಠಕ್ಕೆ ಒಪ್ಪಿಸಿದಲ್ಲಿ ಅವರನ್ನು ನಾವು ನೋಡಿಕೊಳ್ಳುತ್ತೇವೆ. ಪಾರಮಾರ್ಥಿಕ ಸಾಧನೆಗೆ ನಿತ್ಯ ಗೀತಾ ಪಾರಾಯಣ ಮಾಡಬೇಕು. ಹವ್ಯಕರು ಯಾವಾಗಲೂ ಬ್ರಾಹ್ಮಣರಾಗಿಯೇ ಉಳಿಯಬೇಕು’ ಎಂದು ಹೇಳಿದರು.

ಆಡಂಬರಕ್ಕೆ ಆದ್ಯತೆ ಬೇಡ: ಸ್ವರ್ಣವಲ್ಲಿ ಮಠದ ಕಿರಿಯ ಸ್ವಾಮೀಜಿ ಆನಂದಬೋಧೇಂದ್ರ ಸರಸ್ವತೀ ಸ್ವಾಮೀಜಿ, ‘ಹವ್ಯಕರು ಇತ್ತೀಚೆಗೆ ಅನಿವಾರ್ಯ ಹಾಗೂ ಆಕರ್ಷಣೆಯಿಂದ ನಗರಕ್ಕೆ ಹೋಗುತ್ತಿದ್ದಾರೆ. ಎಲ್ಲೇ ಇದ್ದರೂ ತಮ್ಮ ಮೂಲವನ್ನು ಮರೆಯಬಾರದು. ಕೃಷಿಯನ್ನು ಮುನ್ನಡೆಸಿಕೊಂಡು ಸಾಗುವ ಜತೆಗೆ ಮಕ್ಕಳಲ್ಲಿ ಕೃಷಿ ಬಗ್ಗೆ ಆಸಕ್ತಿ ಮೂಡಿಸಬೇಕು. ವಿವಾಹ ಮೊದಲಾದ ಶುಭಕಾರ್ಯದಲ್ಲಿ ಆಡಂಬರಕ್ಕೆ ಆದ್ಯತೆ ನೀಡದೆ, ವಿಧಿವಿಧಾನಕ್ಕೆ ಆದ್ಯತೆ ನೀಡಬೇಕು. ಹವ್ಯಕ ಸಮುದಾಯ ವೃದ್ಧಿಗೆ ಮೂರು ಮಕ್ಕಳನ್ನಾದರು ಹೊಂದಬೇಕು. ಒಬ್ಬರು ವೇದ–ಸಂಸ್ಕೃತಿ ರಕ್ಷಣೆಗಾದರೆ, ಇನ್ನೊಬ್ಬರು ದೇಶ ರಕ್ಷಣೆಗೆ, ಮತ್ತೊಬ್ಬರನ್ನು ಕೃಷಿ ಮತ್ತು ಕುಟುಂಬ ರಕ್ಷಣೆಗೆ ಬಿಡಬೇಕು’ ಎಂದರು.

ರಾಮಕೃಷ್ಣ ಆಶ್ರಮದ ಚಂದ್ರೇಶಾನಂದಜೀ ಮಹಾರಾಜ್, ಶಾಸಕ ಅಶೋಕ್ ಕುಮಾರ್ ರೈ, ಸಮ್ಮೇಳನದ ಗೌರವಾಧ್ಯಕ್ಷರೂ ಆಗಿರುವ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ ಉಪಸ್ಥಿತರಿದ್ದರು.

ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಸಮ್ಮೇಳನದಲ್ಲಿ ಮಾತನಾಡಿದರು. (ಎಡದಿಂದ) ಡಾ. ಗಿರಿಧರ ಕಜೆ, ವಿಶ್ವೇಶ್ವರ ಹೆಗಡೆ ಕಾಗೇರಿ, ಆನಂದಬೋಧೇಂದ್ರ ಸರಸ್ವತೀ ಸ್ವಾಮೀಜಿ ಹಾಗೂ ಚಂದ್ರೇಶಾನಂದಜೀ ಮಹಾರಾಜ್ ಉಪಸ್ಥಿತರಿದ್ದರು

ಪ್ರಜಾವಾಣಿ ಚಿತ್ರ

ಪೂರ್ವಾಶ್ರಮದ ತಂದೆ–ತಾಯಿಗೆ ಗೌರವ

ಹವ್ಯಕ ಗುರುಪೀಠಗಳಿಗೆ ಯತಿಗಳನ್ನು ನೀಡಿದ ಪೂರ್ವಾಶ್ರಮದ ತಂದೆ–ತಾಯಿಗಳಿಗೆ ಹವ್ಯಕ ಮಹಾಸಭೆ ವತಿಯಿಂದ ಸನ್ಮಾನ ಮಾಡಲಾಯಿತು. ರಾಮಚಂದ್ರಾಪುರಮಠದ ರಾಘವೇಶ್ವರ ಭಾರತೀ ಸ್ವಾಮೀಜಿ ಅವರ ತಂದೆ ಶ್ರೀನಿವಾಸ ಭಟ್ ಚದರವಳ್ಳಿ ಮತ್ತು ತಾಯಿ ವಿಜಯಲಕ್ಷ್ಮಿ, ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಅವರ ತಾಯಿ ಶರಾವತಿ ಶಿವರಾಮ ಭಟ್ ನಡಗೋಡು, ಆನಂದಬೋಧೇಂದ್ರ ಸರಸ್ವತೀ ಸ್ವಾಮೀಜಿ ಅವರ ಸಹೋದರ ಲಕ್ಷ್ಮೀಕಾಂತ್ ಗಣಪತಿ ಭಟ್ ಈರಾಪುರ, ನೆಲೆಮಾವು ಮಠದ ಮಾಧವಾನಂದ ಭಾರತೀ ಸ್ವಾಮೀಜಿ ಅವರ ತಂದೆ ಗಣಪತಿ ಸೀತಾರಾಮ ಭಟ್ ಮಾಳಗಿಮನೆ ಮತ್ತು ತಾಯಿ ಸುನಂದಾ ಗಣಪತಿ ಭಟ್ ಅವರನ್ನು ಸನ್ಮಾನಿಸಲಾಯಿತು. ಇದೇ ವೇದಿಕೆಯಲ್ಲಿ 81 ಯೋಧರಿಗೆ ‘ಹವ್ಯಕ ದೇಶರತ್ನ ಪುರಸ್ಕಾರ’ ಹಾಗೂ 81 ಸಾಧಕರಿಗೆ ‘ಹವ್ಯಕ ಸ್ಫೂರ್ತಿರತ್ನ’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಭಾರತದ ಪಾಲಿಗೆ ವರ್ಷದ ಸಂಭ್ರಮ ಹೆಚ್ಚಿಸಿದ ಸಾಧನೆ

ವಿಶ್ವ ರ್‍ಯಾಪಿಡ್ ಚೆಸ್ ಪ್ರಶಸ್ತಿ ಗೆದ್ದ ಹಂಪಿ

ನ್ಯೂಯಾರ್ಕ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರು ಭಾನುವಾರ ಫಿಡೆ ಮಹಿಳಾ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್ ಗೆದ್ದುಕೊಂಡರು. ಆ ಮೂಲಕ ಈ ವರ್ಷ ಭಾರತದ ಯಶಸ್ಸಿನ ಸಂಭ್ರಮಕ್ಕೆ ಕೊನೆಯಲ್ಲಿ ಮತ್ತಷ್ಟು ಮೆರುಗು ತುಂಬಿದರು.

ಭಾರತದ ಅಗ್ರಮಾನ್ಯ ಆಟಗಾರ್ತಿ, ಭಾನುವಾರ ಕೊನೆಯ ಸುತ್ತಿನಲ್ಲಿ ಇಂಡೊನೇಷ್ಯಾದ ಐರಿನ್ ಸುಕಂದರ್ ಅವರನ್ನು ಸೋಲಿಸುವ ಮೂಲಕ ಎರಡನೇ ಬಾರಿ ಈ ಚಾಂಪಿಯನ್‌ಷಿಪ್‌ನ ಕಿರೀಟ ಮುಡಿಗೇರಿಸಿಕೊಂಡರು. ಜಾರ್ಜಿಯಾದಲ್ಲಿ 2019ರಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಹಂಪಿ ಮೊದಲ ಬಾರಿ ಈ ಪ್ರಶಸ್ತಿ ಗೆದ್ದುಕೊಂಡಿದ್ದರು. ಚೀನಾದ ಜು ವೆನ್‌ಜುನ್ ಬಿಟ್ಟರೆ ಈ ಪ್ರಶಸ್ತಿಯನ್ನು ಎರಡು ಸಲ ಗೆದ್ದ ಏಕಮಾತ್ರ ಆಟಗಾರ್ತಿ ಎಂಬ ಗೌರವ ಹಂಪಿ ಅವರದಾಯಿತು.

ಹಂಪಿ ಅವರ ಸಾಧನೆ ಭಾರತದ ಪಾಲಿನ ಈ ವರ್ಷದ ಸಂಭ್ರಮಕ್ಕೆ ಮತ್ತಷ್ಟು ಹೊಳಪು ನೀಡಿತು. ಡಿ.ಗುಕೇಶ್ ಅವರು ಸಿಂಗಪುರದಲ್ಲಿ ಈ ತಿಂಗಳ ಮಧ್ಯದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಡಿಂಗ್ ಲಿರೆನ್ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿದ್ದರು. ಅದಕ್ಕಿಂತ ಮೊದಲು ಸೆಪ್ಟೆಂಬರ್‌ನಲ್ಲಿ ಹಂಗೆರಿಯ ಬುಡಾಪೆಸ್ಟ್‌ನಲ್ಲಿ ನಡೆದ ಒಲಿಂಪಿಯಾಡ್‌ನಲ್ಲಿ ಭಾರತದ ಓಪನ್ ಮತ್ತು ಮಹಿಳಾ ತಂಡಗಳು ಐತಿಹಾಸಿಕ ಚಿನ್ನ ಗೆದ್ದು ಸಂಭ್ರಮಿಸಿದ್ದವು.

ಈ ಕೂಟದಲ್ಲಿ ಸೋಲಿನೊಡನೆ ಮೊದಲ ಸುತ್ತು ಆರಂಭಿಸಿದ್ದ ಹಂಪಿ 11ನೇ ಸುತ್ತಿನ ನಂತರ 8.5 ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನ ಪಡೆದರು. ಸ್ವದೇಶದ ದ್ರೋಣವಲ್ಲಿ ಹಾರಿಕಾ ಸೇರಿ ದಂತೆ ಇತರ ಆರು ಮಂದಿ ತಲಾ ಎಂಟು ಪಾಯಿಂಟ್ಸ್ ಪಡೆದಿದ್ದರು.

‘ರೋಮಾಂಚನದ ಜೊತೆಗೆ ಸಂತಸವಾಗಿದೆ. ಈ ದಿನ ಟೈಬ್ರೇಕ್ ನಂತಹ ಕಠಿಣ ಸವಾಲು ಎದುರಾಗಬಹುದು ಎಂದು ನಿರೀಕ್ಷಿಸಿದ್ದೆ. ನಾನು ಗೆದ್ದಿರುವ ಮಾಹಿತಿ ಮೊದಲು ಆರ್ಬಿಟರ್ (ರೆಫ್ರಿ) ಅವರಿಂದ ತಿಳಿ ಯಿತು’ ಎಂದು 37 ವರ್ಷ ವಯಸ್ಸಿನ ಹಂಪಿ ಹೇಳಿದರು.

‘ಇದು ನನಗೆ ಅನಿರೀಕ್ಷಿತ. ಈ ವರ್ಷ ನಾನು ಪರದಾಡಿದ್ದೇ ಜಾಸ್ತಿ. ಹಲವು ಟೂರ್ನಿಗಳಲ್ಲಿ ನನ್ನ ಸಾಧನೆ ಕಳಪೆಯಾಗಿತ್ತು. ಕೊನೆಯ ಸ್ಥಾನಗಳನ್ನೂ ಪಡೆದಿದ್ದೆ. ಹೀಗಾಗಿ ಇದು ನನ್ನ ಪಾಲಿಗೆ ಅಚ್ಚರಿಯದ್ದು’ ಎಂದು ಅವರು ಪ್ರತಿಕ್ರಿಯಿಸಿದರು.

ಟೈಬ್ರೇಕ್ ಆಧಾರದಲ್ಲಿ ಜು ವೆನ್ ಜುನ್ ಎರಡನೇ ಸ್ಥಾನ ಪಡೆದರೆ, ಕ್ಯಾಥರಿನಾ ಲಾಗ್ನೊ (ರಷ್ಯಾ) ಮೂರನೇ ಸ್ಥಾನ ಗಳಿಸಿದರು. ಹಾರಿಕಾ ಐದನೇ ಸ್ಥಾನಕ್ಕೆ ಸರಿದರು.

ಯಶಸ್ಸಿನ ಶ್ರೇಯವನ್ನು ಹಂಪಿ ತಮ್ಮ ಕುಟುಂಬಕ್ಕೆ ಅರ್ಪಿಸಿದರು. ‘ನನ್ನ ಕುಟುಂಬದ ಬೆಂಬಲದಿಂದ ಇದು ಸಾಧ್ಯವಾಯಿತು. ನನ್ನ ಪತಿ, ನನ್ನ ಪೋ ಷಕರು... ಅವರು ನನ್ನ ಬೆನ್ನಿಗಿದ್ದರು. ನನ್ನ ಪ್ರಯಾಣದ ಸಂದರ್ಭದಲ್ಲಿ ಪೋಷಕರು ನನ್ನ ಮಗಳನ್ನು ನೋಡಿಕೊಂಡರು’ ಎಂದರು. ಮೊದಲ ನಾಲ್ಕು ಸುತ್ತುಗಳ ಬಳಿಕ ಹಂಪಿ ಕೇವಲ 2.5 ಪಾಯಿಂಟ್ಸ್ ಕಲೆಹಾಕಿದ್ದರು. ಎರಡನೇ ದಿನ ನಾಲ್ಕೂ ಗೆದ್ದು ಪ್ರಶಸ್ತಿಯ ಪೈಪೋಟಿಯಲ್ಲಿ ನಿಂತರು.

ಚಾಂಪಿಯನ್ನರು.... ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್ ಓಪನ್ ವಿಭಾಗದಲ್ಲಿ ಚಾಂಪಿಯನ್ ಪಟ್ಟಕ್ಕೇರಿದ ರಷ್ಯಾದ ವೊಲೊಡರ್ ಮುರ್ಝಿನ್ ಮತ್ತು ಮಹಿಳಾ ವಿಭಾಗದಲ್ಲಿ ಚಾಂಪಿಯನ್ ಕಿರೀಟ ಧರಿಸಿದ ಕೋನೇರು ಹಂಪಿ —ಪಿಟಿಐ ಚಿತ್ರ

ವೊಲೊಡರ್ ಮುರ್ಝಿನ್ ಓಪನ್ ಚಾಂಪಿಯನ್

ರಷ್ಯಾದ 18 ವರ್ಷ ವಯಸ್ಸಿನ ಆಟಗಾರ, ಗ್ರ್ಯಾಂಡ್‌ಮಾಸ್ಟರ್ ವೊಲೊಡರ್ ಮುರ್ಝಿನ್ ಅವರು ತಾರಾಖಚಿತ ಆಟಗಾರರನ್ನು ಹೊಂದಿದ್ದ ಓಪನ್ ವಿಭಾಗದಲ್ಲಿ ಚಾಂಪಿಯನ್ ಕಿರೀಟ ಧರಿಸಿದರು.

ಅವರ ಪಾಲಿಗೆ 12ನೇ (ಒಟ್ಟು 13ರಲ್ಲಿ) ಸುತ್ತು ನಿರ್ಣಾಯಕ ಎನಿಸಿತು. ಭಾರತದ ಆರ್.ಪ್ರಜ್ಞಾನಂದ ವಿರುದ್ಧ ಅವರ ಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ. ಆದರೆ ಭಾರತದ ಆಟಗಾರ ಮಾಡಿದ ಒಂದು ತಪ್ಪು ನಡೆ, ಗೆಲುವು ರಷ್ಯಾದ ಆಟಗಾರನ ಕಡೆ ವಾಲುವಂತೆ ಮಾಡಿತು.

ಈ ಗೆಲುವಿನಿಂದ ಏಕಾಂಗಿಯಾಗಿ ಲೀಡ್ ಪಡೆದ ಅವರು ಕೊನೆಯ ಸುತ್ತಿನಲ್ಲಿ ಗೆದ್ದು ಒಟ್ಟು 10 ಪಾಯಿಂಟ್‌ಗಳೊಡನೆ ವಿಜೇತರಾದರು.

ಅಲೆಕ್ಸಾಂಡರ್ ಗ್ರಿಸ್ಚುಕ್ ಎರಡನೆ ಮತ್ತು ವಿಶ್ವ ಚಾಂಪಿಯನ್‌ಷಿಪ್ ಮಾಜಿ ಚಾಲೆಂಜರ್ ಇಯಾನ್ ನಿಪೊಮ್‌ನಿಷಿ ಮೂರನೇ ಸ್ಥಾನ ಪಡೆದರು. ಇಬ್ಬರೂ ತಲಾ 9.5 ಪಾಯಿಂಟ್ಸ್ ಸಂಗ್ರಹಿಸಿದ್ದರು. ಅರ್ಜುನ್ ಇರಿಗೇಶಿ 9 ಅಂಕ ಸಂಗ್ರಹಿಸಿ ಇತರ ಐವರೊಂದಿಗೆ ನಾಲ್ಕನೇ ಸ್ಥಾನ ಹಂಚಿಕೊಂಡರು. ಭಾರತದ ಆರ್. ಪ್ರಜ್ಞಾನಂದ 8.5 ಮತ್ತು ಅರವಿಂದ ಚಿದಂಬರಮ್ 8 ಪಾಯಿಂಟ್ಸ್ ಗಳಿಸಿದರು.

ಪ್ರಧಾನಿ, ಸಿಎಂ ಅಭಿನಂದನೆ

ನವದೆಹಲಿ (ಪಿಟಿಐ): ಚೆಸ್ ಬದುಕಿನಲ್ಲಿ ಎರಡನೇ ಬಾರಿ ವಿಶ್ವ ರ್‍ಯಾಪಿಡ್ ಪ್ರಶಸ್ತಿ ಗೆದ್ದುಕೊಂಡ ಕೋನೇರು ಹಂಪಿ ಅವರನ್ನು ಪ್ರಧಾನಿ ಅಭಿನಂದಿಸಿದ್ದಾರೆ.

‘ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್ ಗೆದ್ದುಕೊಂಡ ಹಂಪಿ ಅವರಿಗೆ ಅಭಿನಂದನೆಗಳು. ಅವರ ದಿಟ್ಟತನ ಮತ್ತು ಅಮೋಘ ಆಟ ಕೋಟ್ಯಂತರ ಜನರನ್ನು ಪ್ರೇರೇಪಿಸಲಿದೆ’ ಎಂದು ಮೋದಿ ಎಕ್ಸ್‌ನಲ್ಲಿ ಬರೆದಿದ್ದಾರೆ.

ಅಮರಾವತಿ ವರದಿ: ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರೂ ಹಂಪಿ ಅವರನ್ನು ಭಾನುವಾರ ಅಭಿನಂದಿಸಿದ್ದಾರೆ. ಅವರ ವಿಜಯ ಅಮೋಘವಾದುದು ಎಂದಿದ್ದಾರೆ.

ಚೆಸ್: ನವಶ್ರೀ, ನಂದನ್ ಚಾಂಪಿಯನ್ಸ್

ಪ್ರಜಾವಾಣಿ ವಾರ್ತೆ

ಹಾಸನ: ಶಿವಮೊಗ್ಗ ಜಿಲ್ಲೆಯ ವಿಕಾಸ ಪ್ರೌಢಶಾಲೆಯ ಆರ್. ನವ್ಯಶ್ರೀ ಹಾಗೂ ಮೈಸೂರಿನ ಯಾದವಗಿರಿಯ ಎಸ್‌ಆರ್‌ಕೆವಿಎಸ್ ಶಾಲೆಯ ಎಂ.ಬಿ. ನಂದನ್ ಅವರು ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಭಾನುವಾರ ಇಲ್ಲಿ ನಡೆದ 14 ವರ್ಷದ ಒಳಗಿನವರ ರಾಜ್ಯ ಮಟ್ಟದ ಚೆಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕಿಯರು ಹಾಗೂ ಬಾಲಕರ ವಿಭಾಗದಲ್ಲಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಎಲೈಟ್ ಶಾಲೆ ಸಹಯೋಗದಲ್ಲಿ ನಡೆದ ಟೂರ್ನಿಯ ಬಾಲಕಿಯರ ವಿಭಾಗದಲ್ಲಿ ಒಟ್ಟು 9 ಸುತ್ತುಗಳ ಸ್ಪರ್ಧೆಯಲ್ಲಿ ನವ್ಯಶ್ರೀ 8 ಅಂಕಗಳೊಂದಿಗೆ ಅಗ್ರಸ್ಥಾನ ಗಳಿಸಿದರು. ಬೆಂಗಳೂರಿನ ಸದಾಶಿವ ನಗರದ ಪಿಪಿಇಎಸ್ ಶಾಲೆಯ ಮಹಾತಿ ವಿ.ರಾವ್, ಶಿವಮೊಗ್ಗ ತೀರ್ಥಹಳ್ಳಿಯ ವಾಗ್ದೇವಿ ಶಾಲೆಯ ಎ.ಎಚ್. ಆದ್ಯಾ, ಮೈಸೂರಿನ ಆಚಾರ್ಯ ಗುರುಕುಲ ವಿದ್ಯಾಪೀಠದ ಶೈಲಜಾ (ತಲಾ 7.5 ಅಂಕ) ಹಾಗೂ ಧಾರವಾಡ ನ್ಯೂ ಸಿಟಿ ಮಾರ್ಕೆಟ್ ರೋಟರಿ ಶಾಲೆಯ ಲಾಸ್ಯಾ ಶೆಟ್ಟಿ (7 ಅಂಕ) ಕ್ರಮವಾಗಿ ನಂತರದ ಸ್ಥಾನ ಪಡೆದರು.

ಬಾಲಕರ ವಿಭಾಗದಲ್ಲಿ ಎಂ.ಬಿ.ನಂದನ್ 8.5 ಅಂಕಗಳೊಂದಿಗೆ ಪ್ರಾಬಲ್ಯ ಮೆರೆದರು. ಬೆಂಗಳೂರಿನ ಉತ್ತರಹಳ್ಳಿಯ ಎಸ್‌ಎಸ್‌ವಿಎಂ ಶಾಲೆಯ ಆದಿತ್ಯ ತ್ರೆಹನ್, ಗದಗ ಜಿಲ್ಲೆಯ ರೋಣ ತಾಲ್ಲೂಕಿನ ನ್ಯೂ ಲಿಟಲ್ ಫ್ಲವರ್ ಸ್ಕೂಲ್‌ನ ವೈಭವ್ ಬಸವರಾಜ್, ಉಡುಪಿ ಜಿಲ್ಲೆಯ ಕಿರಿಮಂಜೇಶ್ವರ ಸಂದೀಪನ್ ಇಂಗ್ಲಿಷ್ ಮಾಧ್ಯಮ ಶಾಲೆಯ ಕೆ. ರಿತೇಶ್, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ವಾಗ್ದೇವಿ ಇಎಂಎಚ್‌ಪಿಎಸ್ ಶಾಲೆಯ ಟಿ.ಎನ್. ಪ್ರಥಮ್ ರಾವ್ ತಲಾ 7.5 ಅಂಕಗಳೊಂದಿಗೆ ನಂತರದ ಸ್ಥಾನ ಪಡೆದರು. ರಾಜ್ಯದ ವಿವಿಧ ಜಿಲ್ಲೆಗಳಿಂದ 367 ಸ್ಪರ್ಧಿಗಳು ಭಾಗವಹಿಸಿದ್ದರು.

ಪ್ರೊ ಕಬಡ್ಡಿ ಲೀಗ್‌ನ 11ನೇ ಆವೃತ್ತಿಯ ಪ್ರಶಸ್ತಿ ಗೆದ್ದ ಹರಿಯಾಣ ಸ್ಟೀಲರ್ಸ್ ತಂಡ

ಮೂರು ಬಾರಿಯ ಚಾಂಪಿಯನ್ ಪೈರೇಟ್ಸ್‌ಗೆ ನಿರಾಸೆ

ಸ್ಟೀಲರ್ಸ್‌ಗೆ ಚೊಚ್ಚಲ ಕಿರೀಟ

PRO KABADDI

ಪುಣೆ (ಪಿಟಿಐ): ಶಿವಂ ಪತಾರೆ ಅವರ ಅಮೋಘ ರೇಡಿಂಗ್ ಬಲದಿಂದ ಹರಿಯಾಣ ಸ್ಟೀಲರ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ 11ನೇ ಆವೃತ್ತಿಯ ಫೈನಲ್‌ನಲ್ಲಿ ಮೂರು ಬಾರಿಯ ಚಾಂಪಿಯನ್ ಪಟ್ನಾ ಪೈರೇಟ್ಸ್ ತಂಡವನ್ನು 32–23ರಿಂದ ಮಣಿಸಿ ಮೊದಲ ಬಾರಿ ಚಾಂಪಿಯನ್ ಪಟ್ಟಕ್ಕೇರಿತು.

ಸತತ ಎರಡನೇ ಬಾರಿ ಫೈನಲ್ ಪ್ರವೇಶಿಸಿದ್ದ ಸ್ಟೀಲರ್ಸ್ ತಂಡವು ಇಲ್ಲಿನ ಬಾಲೇವಾಡಿ ಶ್ರೀಶಿವ ಛತ್ರಪತಿ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಆರಂಭದಿಂದಲೇ ಹಿಡಿತ ಸಾಧಿಸಿತು. ಎದುರಾಳಿ ತಂಡವನ್ನು ಒಂದು ಬಾರಿ ಆಲೌಟ್ ಮಾಡಿದ ಹರಿಯಾಣ ಆಟಗಾರರು ಪಂದ್ಯದುದ್ದಕ್ಕೂ ಮುನ್ನಡೆಯನ್ನು ಬಿಟ್ಟುಕೊಡಲಿಲ್ಲ.

ವಿರಾಮದ ವೇಳೆಗೆ 3 (15–12) ಅಂಕ ಮುನ್ನಡೆ ಗಳಿಸಿದ್ದ ಸ್ಟೀಲರ್ಸ್ ತಂಡ, ಉತ್ತರಾರ್ಧದಲ್ಲಿ ಡಿಫೆಂಡಿಂಗ್‌ನಲ್ಲಿ ಚುರುಕಿನ ಆಟವಾಡಿ ಅಂತರವನ್ನು ಮತ್ತಷ್ಟು ಹಿಗ್ಗಿಸಿಕೊಂಡಿತು.

ಇರಾನ್‌ನ ಮಹಮ್ಮದ್ ರೇಜಾ ಶಾಡ್ಲೊಯಿ (7) ಡಿಫೆಂಡಿಂಗ್‌ನಲ್ಲಿ ಮಿಂಚಿದರು. 9 ಅಂಕ ಗಳಿಸಿದ ಶಿವ ಅವರಿಗೆ ವಿನಯ್ (6) ರೇಡಿಂಗ್‌ನಲ್ಲಿ ಸಾಥ್ ನೀಡಿದರು. ಪಟ್ನಾ ಪರ ಡಿಫೆಂಡರ್ ಗುರುದೀಪ್ (6) ಮತ್ತು ರೇಡರ್ ದೇವಾಂಕ್ (5) ಹೋರಾಟ ತೋರಿದರೂ ಗೆಲುವಿಗೆ ಸಾಕಾಗಲಿಲ್ಲ. ಈ ಋತುವಿನ ಯಶಸ್ವಿ ರೇಡರ್ ಎನಿಸಿರುವ ದೇವಾಂಕ್ 25 ಪಂದ್ಯಗಳಲ್ಲಿ 301 ಪಾಯಿಂಟ್ಸ್ ಗಳಿಸಿದರು.

ಕಳೆದ ಬಾರಿಯ ಫೈನಲ್‌ನಲ್ಲಿ 25–28ರಿಂದ ಪುಣೇರಿ ಪಲ್ಟನ್ ತಂಡಕ್ಕೆ ಮಣಿದು ರನ್ನರ್ಸ್ ಅಪ್ ಆಗಿದ್ದ ಸ್ಟೀಲರ್ಸ್ ತಂಡವು ಈ ಬಾರಿ ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡಿತು.

ಗುಂಪು ಹಂತದಲ್ಲಿ 22 ಪಂದ್ಯಗಳ ಪೈಕಿ 16 ರಲ್ಲಿ ಗೆದ್ದು (84 ಅಂಕ) ಅಗ್ರಸ್ಥಾನದೊಂದಿಗೆ ಸ್ಟೀಲರ್ಸ್ ನೇರವಾಗಿ ಸೆಮಿಫೈನಲ್ ಪ್ರವೇಶಿಸಿತ್ತು. ನಾಲ್ಕರ ಘಟ್ಟದಲ್ಲಿ 28–25ರಿಂದ ಯು.ಪಿ ಯೋಧಾಸ್ ತಂಡವನ್ನು ಹಿಮ್ಮೆಟ್ಟಿಸಿ ಫೈನಲ್ ತಲುಪಿತ್ತು.

ಮೂರರಿಂದ ಐದು ಆವೃತ್ತಿವರೆಗೆ ಹ್ಯಾಟ್ರಿಕ್ ಪ್ರಶಸ್ತಿ ಗೆದ್ದು ದಾಖಲೆ ನಿರ್ಮಿಸಿದ್ದ ಪೈರೇಟ್ಸ್ ತಂಡಕ್ಕೆ ಇದು ಐದನೇ ಫೈನಲ್ ಪಂದ್ಯವಾಗಿತ್ತು. ಗುಂಪು ಹಂತದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ತಂಡವು ಎಲಿಮಿನೇಟರ್ ಸುತ್ತಿನಲ್ಲಿ ಯು ಮುಂಬಾ ತಂಡವನ್ನು ಸೋಲಿಸಿತ್ತು. ಸೆಮಿಫೈನಲ್‌ನಲ್ಲಿ ಡೆಲ್ಲಿ ದಬಾಂಗ್ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತಿಗೆ ಮುನ್ನಡೆದಿತ್ತು.

ಸ್ಟೀಲರ್ಸ್‌ನ ಮಹಮ್ಮದ್ ರೇಜಾ ಶಾಡ್ಲೊಯಿ (ಟೂರ್ನಿಯ ಮೌಲ್ಯಯುತ ಆಟಗಾರ), ಪೈರೇಟ್ಸ್‌ನ ದೇವಾಂಕ್ (ಬೆಸ್ಟ್ ರೇಡರ್), ತಮಿಳ್ ತಲೈವಾಸ್‌ನ ನಿತೇಶ್ ಕುಮಾರ್ (ಬೆಸ್ಟ್ ಡಿಫೆಂಡರ್), ತೆಲುಗು ಟೈಟನ್ಸ್‌ನ ಮಂಜೀತ್ (ಸೂಪರ್ ರೇಡರ್), ಪೈರೇಟ್ಸ್‌ನ ಅಂಕಿತ್ (ಬೆಸ್ಟ್ ಟ್ಯಾಕಲ್) ಗೌರವಕ್ಕೆ ಪಾತ್ರವಾದರು.

ಮುಖ್ಯಾಂಶಗಳು

- ಚಾಂಪಿಯನ್ ಸ್ಟೀಲರ್ಸ್‌ಗೆ ₹3 ಕೋಟಿ ಬಹುಮಾನ
- ರನ್ನರ್ಸ್ ಅಪ್ ಪೈರೇಟ್ಸ್‌ಗೆ ₹1.8 ಕೋಟಿ ಬಹುಮಾನ
- ಋತುವಿನಲ್ಲಿ 301 ಪಾಯಿಂಟ್ಸ್ ಗಳಿಸಿದ ಪಟ್ನಾ ತಂಡದ ದೇವಾಂಕ್

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್‌ಪಟ್ಟಿ

ಸ್ಥಾನ	ತಂಡ	ಪಂದ್ಯ	ಗೆಲುವು	ಸೋಲು	ಡ್ರಾ	ಅಂಕ	%
1	ದಕ್ಷಿಣ ಆಫ್ರಿಕಾ	11	7	3	1	88	66.67
2	ಆಸ್ಟ್ರೇಲಿಯಾ	15	9	4	2	106	58.89
3	ಭಾರತ	17	9	6	2	114	55.89
4	ನ್ಯೂಜಿಲೆಂಡ್	14	7	7	0	81	48.21
5	ಶ್ರೀಲಂಕಾ	11	5	6	0	60	45.45

ಡಬ್ಲ್ಯುಟಿಸಿ ಫೈನಲ್‌ಗೆ ದಕ್ಷಿಣ ಆಫ್ರಿಕಾ ಪ್ರವೇಶ

ಸೆಂಚುರಿಯನ್ (ಎಪಿ): ಕಗಿಸೊ ರಬಾಡ ಮತ್ತು ಮಾರ್ಕೊ ಯಾನ್ಸನ್ ಅವರ ಮುರಿಯದ ಒಂಬತ್ತನೇ ವಿಕೆಟ್ ಜೊತೆಯಾಟದ ನೆರವಿನಿಂದ ಆತಿಥೆಯ ದಕ್ಷಿಣ ಆಫ್ರಿಕಾ ತಂಡವು ಭಾನುವಾರ ಪಾಕಿಸ್ತಾನ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಎರಡು ವಿಕೆಟ್‌ಗಳ ರೋಚಕ ಜಯ ಸಾಧಿಸಿ, ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ (ಡಬ್ಲ್ಯುಟಿಸಿ) ಫೈನಲ್‌ಗೆ ಅರ್ಹತೆ ಪಡೆಯಿತು.

ಗೆಲುವಿಗೆ 148 ರನ್‌ಗಳ ಸುಲಭ ಗುರಿ ಪಡೆದಿದ್ದ ದಕ್ಷಿಣ ಆಫ್ರಿಕಾ ತಂಡವು ಪಾಕಿಸ್ತಾನದ ಮೊಹಮ್ಮದ್ ಅಬ್ಬಾಸ್ (54ಕ್ಕೆ 6) ಅವರ ಮಾರಕ ದಾಳಿಯಿಂದಾಗಿ 99 ರನ್‌ಗೆ 8 ವಿಕೆಟ್ ಕಳೆದುಕೊಂಡು ಸೋಲಿನ ದವಡೆಯಲ್ಲಿತ್ತು. ಈ ಹಂತದಲ್ಲಿ ರಬಾಡ (ಔಟಾಗದೇ 31;26ಎ) ಮತ್ತು ಯಾನ್ಸನ್ (16;24ಎ) ತಮ್ಮ ಜೊತೆಯಾಟದಲ್ಲಿ 50 ಎಸೆತಗಳಲ್ಲಿ 51 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಡಬ್ಲ್ಯುಟಿಸಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಮತ್ತಷ್ಟು ಬಲಪಡಿಸಿಕೊಂಡ ತೆಂಬಾ ಬವುಮಾ ಪಡೆ, ಮುಂದಿನ ವರ್ಷದ ಜೂನ್‌ನಲ್ಲಿ ಲಾರ್ಡ್ಸ್‌ನಲ್ಲಿ ನಡೆಯುವ ಫೈನಲ್‌ಗೆ ಮುನ್ನಡೆದಿದೆ. ಫೈನಲ್‌ನ ಮತ್ತೊಂದು ಸ್ಥಾನಕ್ಕಾಗಿ ಆಸ್ಟ್ರೇಲಿಯಾ ಮತ್ತು ಭಾರತದ ಮಧ್ಯೆ ಪೈಪೋಟಿ ಏರ್ಪಟ್ಟಿದೆ. ರೋಹಿತ್ ಪಡೆ ಫೈನಲ್‌ಗೆ ನೇರ ಅರ್ಹತೆ ಪಡೆಯಬೇಕಾದರೆ ಆಸ್ಟ್ರೇಲಿಯಾ ವಿರುದ್ಧದ ನಾಲ್ಕನೇ ಮತ್ತು ಐದನೇ ಪಂದ್ಯವನ್ನು ಗೆಲ್ಲಲೇಬೇಕಾದ ಒತ್ತಡಕ್ಕೆ ಸಿಲುಕಿದೆ.

ರಬಾಡ

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಪಾಕಿಸ್ತಾನ: 57.3 ಓವರ್‌ಗಳಲ್ಲಿ 211. ದಕ್ಷಿಣ ಆಫ್ರಿಕಾ: 73.4 ಓವರ್‌ಗಳಲ್ಲಿ 301. ಎರಡನೇ ಇನಿಂಗ್ಸ್: ಪಾಕಿಸ್ತಾನ: 59.4 ಓವರ್‌ಗಳಲ್ಲಿ 237 (ಬಾಬರ್ ಆಜಂ 50, ಸಾವುದ್ ಶಕೀಲ್ 84; ಮಾರ್ಕೊ ಯಾನ್ಸನ್ 52ಕ್ಕೆ 6, ಕಗಿಸೊ ರಬಾಡ 68ಕ್ಕೆ 2). ದಕ್ಷಿಣ ಆಫ್ರಿಕಾ: 39.3 ಓವರ್‌ಗಳಲ್ಲಿ 8 ವಿಕೆಟ್‌ಗೆ 150 (ಏಡನ್ ಮರ್ಕರಂ 37, ಟ್ರಿಸ್ಟನ್ ಸ್ಟಬ್ಸ್ 40, ಕಗಿಸೊ ರಬಾಡ ಔಟಾಗದೇ 31; ಮೊಹಮ್ಮದ್ ಅಬ್ಬಾಸ್ 54ಕ್ಕೆ 6). ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 2 ವಿಕೆಟ್ ಜಯ.

ಲಕ್ಷ್ಯ ಸೇನ್‌ಗೆ ಮೂರನೇ ಸ್ಥಾನ

ಶೆನ್‌ಝೆನ್ (ಚೀನಾ), (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಪ್ರಥಮ ಕಿಂಗ್ ಕಪ್ ಇಂಟರ್‌ನ್ಯಾಷನಲ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಮೂರನೇ ಸ್ಥಾನ ಪಡೆದರು.

23 ವರ್ಷ ವಯಸ್ಸಿನ ಸೇನ್ ಅವರು ಮೂರನೇ ಸ್ಥಾನಕ್ಕಾಗಿ ನಡೆದ ಪ್ಲೇ ಆಫ್ ಸ್ಪರ್ಧೆಯಲ್ಲಿ 21-17 21-11ರಿಂದ ಫ್ರಾನ್ಸ್‌ನ ಉದಯೋನ್ಮುಖ ಆಟಗಾರ ಅಲೆಕ್ಸ್ ಲೇನಿಯರ್ ಅವರನ್ನು ಸೋ ಲಿಸಿ, ಸುಮಾರು ₹36 ಲಕ್ಷ ನಗದು ಬಹುಮಾನ ಗೆದ್ದರು.

ಕುತೂಹಲ ಘಟ್ಟದತ್ತ ಮೆಲ್ಬರ್ನ್ ಟೆಸ್ಟ್

ಮತ್ತೆ ಆರ್ಭಟಿಸಿದ ಜಸ್‌ಪ್ರೀತ್ ಬೂಮ್ರಾ • ಆಸ್ಟ್ರೇಲಿಯಾ ಬಾಲಂಗೋಚಿ ಬ್ಯಾಟರ್‌ಗಳ ಮಿಂಚು

• ಮಧು ಜವಳಿ

ಮೆಲ್ಬರ್ನ್: ಕ್ರಿಕೆಟ್ ಅನಿರೀಕ್ಷಿತಗಳ ಆಗರ ಎಂಬುದಕ್ಕೆ ತಮಗೆ ಮತ್ತೊಂದು ನಿದರ್ಶನ ಬೇಕಿದ್ದರೆ ಇಲ್ಲಿ ನಡೆಯುತ್ತಿರುವ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯದ ಕಳೆದೆರಡು ದಿನಗಳ ಆಟವನ್ನು ನೋಡಬೇಕು. ಶನಿವಾರ ದಿನದಾಟದಲ್ಲಿ ಭಾರತ ತಂಡವು ಅಮೋಘ ಹೋರಾಟ ಮಾಡಿ ಭರವಸೆಯ ಹಾದಿಗೆ ಮರಳಿತ್ತು. ಭಾನುವಾರ ಆತಿಥೇಯ ಆಸ್ಟ್ರೇಲಿಯಾವು ಮರುಹೋರಾಟ ಮಾಡಿ ಪಂದ್ಯದ ಮೇಲೆ ತನ್ನ ಹಿಡಿತ ಸಾಧಿಸಿತು.

ಪಂದ್ಯದ ನಾಲ್ಕನೇ ದಿನದಾಟದಲ್ಲಿ ಭಾರತದ ವೇಗಿ ಜಸ್‌ಪ್ರೀತ್ ಬೂಮ್ರಾ (56ಕ್ಕೆ4) ಮತ್ತೊಮ್ಮೆ ತಮ್ಮ ಅದ್ಭುತ ಬೌಲಿಂಗ್ ಮೂಲಕ ಮಿಂಚಿನ ಸಂಚಲನ ಮೂಡಿಸಿದರು. ಈ ಹಾದಿಯಲ್ಲಿ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 200 ವಿಕೆಟ್ ಗಳಿಸಿದವರ ಕ್ಲಬ್ ಸೇರಿದರು. ಬೂಮ್ರಾ ಅವರು ಆಸ್ಟ್ರೇಲಿಯಾದ ಮಧ್ಯಮ ಕ್ರಮಾಂಕವನ್ನು ದೂಳೀಪಟ ಮಾಡಿದರು. ಅದರಿಂದಾಗಿ ಆತಿಥೇಯರು 91 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡರು. ಭಾರತದ ವಿಜಯದ ಭರವಸೆ ಗರಿಗೆದರಿತು.

ಇನ್ನೇನು ಭಾರತವು ತನ್ನ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸುವಷ್ಟರಲ್ಲಿ ಆಸ್ಟ್ರೇಲಿಯಾದ ಕೆಳಕ್ರಮಾಂಕದ ಬ್ಯಾಟರ್‌ಗಳು ಮತ್ತೆ ಮರಳಿ ತಮ್ಮತ್ತ ಗೆಲುವಿನ ಅವಕಾಶವನ್ನು ವಾಲಿಸಿಕೊಂಡರು. ಕೆಳ ಕ್ರಮಾಂಕದ ನಾಲ್ವರು ಬ್ಯಾಟರ್‌ಗಳು ಸೇರಿ 137 ರನ್‌ಗಳ ಕಾಣಿಕೆ ನೀಡಿದರು. ಅದರಲ್ಲೂ ನೇಥನ್ ಲಯನ್ (ಔಟಾಗದೆ 41; 54ಎ) ಮತ್ತು ಸ್ಕಾಟ್ ಬೋಲ್ಯಾಂಡ್ (ಔಟಾಗದೆ 10; 65ಎ) ಮುರಿಯದ ಕೊನೆಯ ವಿಕೆಟ್ ಜೊತೆಯಾಟದಲ್ಲಿ 55 ರನ್ ಸೇರಿಸಿದರು. ಇದು ಮಹತ್ವದ್ದಾಯಿತು. ಅದರಿಂದಾಗಿ ಆತಿಥೇಯ ತಂಡವು ದಿನದಾಟದ ಮುಕ್ತಾಯಕ್ಕೆ 9 ವಿಕೆಟ್‌ಗಳಿಗೆ 228 ರನ್ ಗಳಿಸಿತು. ಒಟ್ಟು 333 ರನ್‌ಗಳ ಮುನ್ನಡೆ ಸಾಧಿಸಿದೆ.

ಇದರಿಂದಾಗಿ ಪಂದ್ಯದ ಕೊನೆಯ ದಿನವಾದ ಸೋಮವಾರ ರೋಚಕ ಹಣಾಹಣಿ ನಡೆಯುವ ನಿರೀಕ್ಷೆ ಗರಿಗೆದರಿದೆ.

ಶನಿವಾರ ದಿನದಾಟದ ಕೊನೆಗೆ 9ಕ್ಕೆ 358 ರನ್ ಗಳಿಸಿದ್ದ ಭಾರತ ತಂಡವು ಭಾನುವಾರ ಹೆಚ್ಚು ಹೊತ್ತು ಆಡಲಿಲ್ಲ. ಈ ಮೊತ್ತಕ್ಕೆ 11 ರನ್‌ಗಳು ಸೇರಿದ ನಂತರ ಸ್ಪಿನ್ನರ್ ನೇಥನ್ ಲಯನ್ ಬೌಲಿಂಗ್‌ನಲ್ಲಿ ನಿತೀಶ್ ಕುಮಾರ್ ರೆಡ್ಡಿ (114; 189ಎ) ಔಟಾದರು. ಇನಿಂಗ್ಸ್‌ಗೆ ತೆರೆಬಿತ್ತು.

105 ರನ್‌ಗಳ ಮುನ್ನಡೆಯೊಂದಿಗೆ ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್ ಆರಂಭಿಸಿತು. ಮೊದಲ ಇನಿಂಗ್ಸ್‌ನಲ್ಲಿ ತಮ್ಮನ್ನು ಕಾಡಿದ್ದ 19 ವರ್ಷ ವಯಸ್ಸಿನ ಸ್ಯಾಮ್ ಕಾನ್‌ಸ್ಟೆಸ್ ಅವರ ವಿಕೆಟ್ ಹಾರಿಸುವಲ್ಲಿ ವೇಗಿ ಜಸ್‌ಪ್ರೀತ್ ಬೂಮ್ರಾ ಯಶಸ್ವಿಯಾದರು.

ಮೊದಲ ಇನಿಂಗ್ಸ್‌ನಲ್ಲಿ ವಿರಾಟ್ ಕೊಹ್ಲಿ ಔಟಾದಾಗ ಸ್ಯಾಮ್ ಅವರು ಪ್ರೇಕ್ಷಕರತ್ತ ಕೈಬೀಸಿ ಸಂಭ್ರಮಿಸುವಂತೆ ಹುರಿದುಂಬಿಸಿದ್ದರು. ಸ್ಯಾಮ್ (8; 18ಎ)ವಿಕೆಟ್ ಗಳಿಸಿದ ಬೂಮ್ರಾ ಕೂಡ ಅದೇ ರೀತಿಯ ಸಂಭ್ರಮಾಚರಣೆ ಮಾಡಿದರು.

ಉಸ್ಮಾನ್ ಖ್ವಾಜಾ ಲಯ ಕಂಡುಕೊಳ್ಳಲು ಬಹಳ ಹೊತ್ತು ತೆಗೆದುಕೊಂಡರು. ಆದರೆ ಕ್ರೀಸ್‌ಗೆ ಬಂದ ಮಾರ್ನಸ್ ಲಾಬುಷೇನ್ ತಾಳ್ಮೆಯಿಂದ ಆಡಿ 139 ಎಸೆತಗಳಲ್ಲಿ 70 ರನ್ ಗಳಿಸಿದರು. ಇನ್ನೊಂದೆಡೆಯಿಂದ ಬೌಲಿಂಗ್ ಮಾಡುತ್ತಿದ್ದ ಮೊಹಮ್ಮದ್ ಸಿರಾಜ್, ಖ್ವಾಜಾ (21 ರನ್) ಅವರ ವಿಕೆಟ್ ಗಳಿಸಿದರು. ಸ್ವಲ್ಪ ಹೊತ್ತಿನ ನಂತರ ಸ್ಟೀವನ್ ಸ್ಮಿತ್ (13 ರನ್) ಅವರಿಗೂ ಸಿರಾಜ್ ಪೆವಿಲಿಯನ್ ದಾರಿ ತೋರಿಸಿದರು.

ಅದರ ನಂತರದ ಓವರ್‌ನಲ್ಲಿಯೇ ಟ್ರಾವಿಸ್ ಹೆಡ್ (1 ರನ್) ಅವರು ತಲೆಯೆತ್ತದಂತೆ ಬೂಮ್ರಾ ನೋಡಿಕೊಂಡರು. ನಿತೀಶ್ ಕುಮಾರ್ ಪಡೆದ ಕ್ಯಾಚ್‌ಗೆ ಹೆಡ್ ಔಟಾದರು. ಬೂಮ್ರಾಗೆ 200ನೇ ವಿಕೆಟ್ ಆದರು. ಅದೇ ಓವರ್‌ನಲ್ಲಿ ಮಿಚೆಲ್ ಮಾರ್ಷ್‌ಗೆ ಖಾತೆ ತೆರೆಯಲು ಕೂಡ ಬೂಮ್ರಾ ಬಿಡಲಿಲ್ಲ. ತಮ್ಮ ನಂತರದ ಓವರ್‌ನಲ್ಲಿ ಅಲೆಕ್ಸ್ ಕ್ಯಾರಿಯನ್ನೂ ಕ್ಲೀನ್ ಬೌಲ್ಡ್ ಮಾಡಿದ ಬೂಮ್ರಾ ಸಂಭ್ರಮಿಸಿದರು.

ಬೌಂಡರಿ ಬಳಿ ಫೀಲ್ಡಿಂಗ್ ಮಾಡುವಾಗ ಪ್ರೇಕ್ಷಕರಿಂದ ಸತತವಾಗಿ ನಿಂದನೆಗೊಳಗಾಗುತ್ತಿದ್ದ ಸಿರಾಜ್ ಅವರು ಮಾರ್ನಸ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿ ಸೇಡು ತೀರಿಸಿಕೊಂಡರು. ಆದರೆ ಪ್ಯಾಟ್ ಕಮಿನ್ಸ್ (41ರನ್), ಲಯನ್ ಹಾಗೂ ಸ್ಕಾಟ್ ಅವರು ಈ ವಿಕೆಟ್ ಪತನಕ್ಕೆ ತಡೆಯೊಡ್ಡಿದರು. ತಮ್ಮ ತಂಡಕ್ಕೆ ಉತ್ತಮ ಮುನ್ನಡೆ ಒದಗಿಸಿಕೊಟ್ಟರು.

ಆಸ್ಟ್ರೇಲಿಯಾದ ಬ್ಯಾಟರ್ ಮಾರ್ನಸ್ ಲಾಬುಷೇನ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಮೊಹಮ್ಮದ್ ಸಿರಾಜ್ ಅಂಪೈರ್‌ಗೆ ಮನವಿ ಮಾಡಿದರು —ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 474 (122.4 ಓವರ್‌ಗಳಲ್ಲಿ)
ಭಾರತ 369 (119.3 ಓವರ್‌ಗಳಲ್ಲಿ). (ಶನಿವಾರ 116 ಓವರ್‌ಗಳಲ್ಲಿ 9ಕ್ಕೆ 358)
ನಿತೀಶ್ ಸಿ ಸ್ಟಾರ್ಕ್ ಬಿ ಲಯನ್ 114 (189ಎ, 4x11,6x1)
ಸಿರಾಜ್ ಔಟಾಗದೇ 4 (15 ಎ)
ಇತರೆ: 11 (ಲೆಗ್‌ಬೈ 2, ನೋಬಾಲ್ 4, ವೈಡ್ 5)
ವಿಕೆಟ್ ಪತನ: 10–369 (ನಿತೀಶ್ ಕುಮಾರ್ ರೆಡ್ಡಿ, 119.3)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 25–2–86–0, ಪ್ಯಾಟ್ ಕಮಿನ್ಸ್ 29–6–89–3, ಸ್ಕಾಟ್ ಬೋಲ್ಯಾಂಡ್ 27–7–57–3, ನೇಥನ್ ಲಯನ್ 28.3–4–96–3, ಮಿಚೆಲ್ ಮಾರ್ಷ್ 7–1–28–0, ಟ್ರಾವಿಸ್ ಹೆಡ್ 3–0–11–0

ಎರಡನೇ ಇನಿಂಗ್ಸ್
ಆಸ್ಟ್ರೇಲಿಯಾ 9ಕ್ಕೆ 228 (82 ಓವರ್‌ಗಳಲ್ಲಿ)
ಸ್ಯಾಮ್ ಬಿ ಬೂಮ್ರಾ 8 (18ಎ, 4X1)
ಖ್ವಾಜಾ ಬಿ ಸಿರಾಜ್ 21 (65ಎ, 4X2)
ಲಾಬುಷೇನ್ ಎಲ್‌ಬಿಡಬ್ಲ್ಯು ಸಿರಾಜ್ 70 (139ಎ, 4X3)
ಸ್ಮಿತ್ ಸಿ ಪಂತ್ ಬಿ ಸಿರಾಜ್ 13 (41ಎ, 4x1)
ಹೆಡ್ ಸಿ ನಿತೀಶ್ ಬಿ ಬೂಮ್ರಾ 1 (2ಎ)
ಮಾರ್ಷ್ ಸಿ ಪಂತ್ ಬಿ ಬೂಮ್ರಾ 0 (4ಎ)
ಕ್ಯಾರಿ ಬಿ ಬೂಮ್ರಾ 2 (7 ಎ)
ಕಮಿನ್ಸ್ ಸಿ ಶರ್ಮಾ ಬಿ ಜಡೇಜ 41 (90ಎ, 4x4)
ಸ್ಟಾರ್ಕ್ ರನೌಟ್ ನಿತೀಶ್/ಪಂತ್ 5 (13ಎ)
ಲಯನ್ ಔಟಾಗದೇ 41 (54ಎ, 4x5)
ಬೋಲ್ಯಾಂಡ್ ಔಟಾಗದೇ 10 (65ಎ, 4x1)
ಇತರೆ: 16 (ಲೆಗ್‌ಬೈ 9, ನೋಬಾಲ್ 6 ವೈಡ್ 1)
ವಿಕೆಟ್ ಪತನ: 1–20 (ಸ್ಯಾಮ್ ಕಾನ್ಸ್‌ಟೆಸ್, 6.3), 2–43 (ಉಸ್ಮಾನ್ ಖ್ವಾಜಾ, 18.5 ಓವರ್) 3–80 (ಸ್ಟೀವ್ ಸ್ಮಿತ್, 32.3) 4–85 (ಟ್ರಾವಿಸ್ ಹೆಡ್, 33.2) 5– 85 (ಮಿಚೆಲ್ ಮಾರ್ಷ್, 33.6) 6–91 (ಅಲೆಕ್ಸ್ ಕ್ಯಾರಿ 35.6), 7–148 (ಮಾರ್ನಸ್ ಲಾಬುಷೇನ್, 55.1), 8–156 (ಮಿಚೆಲ್ ಸ್ಟಾರ್ಕ್, 58.1), 9–173 (ಪ್ಯಾಟ್ ಕಮಿನ್ಸ್, 64.1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 24–7–56–4, ಆಕಾಶ್‌ದೀಪ್ 17–4–53–0, ಮೊಹಮ್ಮದ್ ಸಿರಾಜ್ 22–4–66–3, ರವೀಂದ್ರ ಜಡೇಜ 14–2–33–1, ನಿತೀಶ್ ಕುಮಾರ್ 1–0–4–0, ವಾಷಿಂಗ್ಟನ್ ಸುಂದರ್ 4–0–7–0

ಗಾವಸ್ಕರ್ ಭೇಟಿ: ಪುಳಕಿತರಾದ ರೆಡ್ಡಿ ಕುಟುಂಬ

ಮೆಲ್ಬರ್ನ್ (ಪಿಟಿಐ): ಭಾರತ ಕ್ರಿಕೆಟ್‌ನ ನವತಾರೆ ನಿತೀಶ್ ಕುಮಾರ್ ರೆಡ್ಡಿ ಅವರ ತಂದೆ ಮುತ್ಯಾಲು ರೆಡ್ಡಿ ಭಾನುವಾರ ತಮ್ಮ ಬಾಲ್ಯದ ಹೀರೊ ಸುನಿಲ್ ಗಾವಸ್ಕರ್ ಅವರನ್ನು ಭೇಟಿಯಾದಾಗ ಭಾವುಕರಾದರು. ಅಧಿಕೃತ ಪ್ರಸಾರಕರ ಬಾಕ್ಸ್‌ಗೆ ರೆಡ್ಡಿ ಅವರ ಕುಟುಂಬವನ್ನು ಆಹ್ವಾನಿಸಲಾಗಿತ್ತು.

ಅಲ್ಲಿ ವೀಕ್ಷಕ ವಿವರಣೆಗಾರ ಗಾವಸ್ಕರ್ ಅವರ ಕಾಲು ಮುಟ್ಟಿ ನಮಸ್ಕರಿಸಿದ ಮುತ್ಯಾಲು ರೆಡ್ಡಿ ಮತ್ತು ಅವರ ಪತ್ನಿ ಗದ್ಗದಿತರಾದರು. ಈ ಸಂದರ್ಭದಲ್ಲಿ ಮಾತನಾಡಿದ ಮುತ್ಯಾಲು ಅವರು, ‘ನಾವೆಲ್ಲ ತಮ್ಮ ಆಟವನ್ನು ನೋಡುತ್ತ ಕ್ರಿಕೆಟ್ ಪ್ರೀತಿ ಬೆಳೆಸಿಕೊಂಡವರು. ಇವತ್ತು ತಮ್ಮೆಲ್ಲರನ್ನೂ ಭೇಟಿಯಾಗುವ ಅವಕಾಶ ಲಭಿಸಿದೆ. ಅದಕ್ಕೆ ಕಾರಣ ಮಗನ ಸಾಧನೆ’ ಎಂದರು.

‘ನಿತೀಶ್ 99 ರನ್ ಗಳಿಸಿದ್ದ ಸಂದರ್ಭದಲ್ಲಿ ಕೊನೆಯ ವಿಕೆಟ್ ಮಾತ್ರ ಉಳಿದಿತ್ತು. ನಾನು ಸ್ವಲ್ಪ ಒತ್ತಡದಲ್ಲಿದ್ದೆ. ಆದರೆ ಸಿರಾಜ್ ಅವರು ಅಮೋಘವಾಗಿ ಆಡಿದರು. ಮೂರು ಡಾಟ್ ಬಾಲ್‌ಗಳನ್ನು ಆಡಿ ನಿತೀಶ್ ಚೊಚ್ಚಲ ಶತಕ ಮಾಡಲು ಸಹಕರಿಸಿದರು. ಧನ್ಯವಾದಗಳು ಡಿಎಸ್‌ಪಿ (ಸಿರಾಜ್) ಸರ್’ ಎಂದರು.

ಮುತ್ಯಾಲು ಅವರು ತೆಲುಗಿನಲ್ಲಿಯೇ ಸಂದರ್ಶನ ನೀಡಿದರು. ನಿತೀಶ್ ಅವರ ತಂಗಿ ತೇಜಸ್ವಿ ಅವರು ಇಂಗ್ಲಿಷ್‌ಗೆ ಭಾಷಾಂತರಿಸಿದರು. ತೇಜಸ್ವಿ ಅವರು ಉಜ್ಬೇಕಿಸ್ತಾನದಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾರೆ.

ಈ ಸಂದರ್ಭದಲ್ಲಿ ಗಾವಸ್ಕರ್ ಅವರು, ‘ದೇಶಕ್ಕೆ ಉತ್ತಮ ಆಟಗಾರನನ್ನು ಕೊಟ್ಟಿದ್ದೀರಿ’ ಎಂದು ಅಭಿನಂದಿಸಿದರು. ಈ ಸಂದರ್ಭದಲ್ಲಿ ಗಾವಸ್ಕರ್ ಕೂಡ ಭಾವುಕರಾಗಿದ್ದರು.

ಸೈಯದ್ ಕಿರ್ಮಾನಿಯವರ ‘ಸ್ಟಂಪ್ಡ್’ ಕೃತಿ ಬಿಡುಗಡೆ

ಕ್ರಿಕೆಟ್ ತಾರೆಯರ ಸಮಾಗಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಸಭಾಭವನದಲ್ಲಿ ಭಾನುವಾರ ಬೆಳಿಗ್ಗೆಯೇ ಕ್ರಿಕೆಟ್ ತಾರೆಗಳ ಹೊಳಪು ಚೆಲ್ಲಿತ್ತು. ಸುಮಾರು ಐದು ದಶಕಗಳಲ್ಲಿ ಭಾರತ ಕ್ರಿಕೆಟ್ ರಂಗವನ್ನು ಶ್ರೀಮಂತಗೊಳಿಸಿದ ದಿಗ್ಗಜರು ಅಲ್ಲಿದ್ದರು.

ಅವರೆಲ್ಲರನ್ನೂ ಒಂದೇ ಸೂರಿನಡಿ ಸೇರುವಂತೆ ಮಾಡಿದ್ದು ವಿಕೆಟ್‌ಕೀಪಿಂಗ್ ದಂತಕಥೆ ಸೈಯದ್ ಮುಜ್ತಾಬಾ ಹುಸೇನ್ ಕಿರ್ಮಾನಿ. ಅವರ ಆತ್ಮಚರಿತ್ರೆ ‘ಸ್ಟಂಪ್ಡ್ –ಲೈಫ್ ಬಿಹ್ಯಾಂಡ್ ಅ್ಯಂಡ್ ಬಿಯಾಂಡ್ ದ 22 ಯಾರ್ಡ್ಸ್’ ಬಿಡುಗಡೆ ಸಮಾರಂಭದಲ್ಲಿ ಅವರೆಲ್ಲರೂ ಸೇರಿದ್ದರು. ಭಾನುವಾರ ಕಿರ್ಮಾನಿ ಅವರು 75ನೇ ವಸಂತಕ್ಕೂ ಕಾಲಿರಿಸಿದರು.

1983ರ ವಿಶ್ವಕಪ್ ವಿಜೇತ ಭಾರತ ತಂಡದ ನಾಯಕ ಕಪಿಲ್ ದೇವ್ ಅವರು ಕೃತಿಯನ್ನು ಬಿಡುಗಡೆ ಮಾಡಿದರು. ಅವರೊಂದಿಗೆ ಸ್ಪಿನ್ ದಿಗ್ಗಜರಾದ ಎರ್ರಪಳ್ಳಿ ಪ್ರಸನ್ನ, ಬಿ.ಎಸ್. ಚಂದ್ರಶೇಖರ್, ಅನಿಲ್ ಕುಂಬ್ಳೆ, ಬ್ರಿಜೇಶ್ ಪಟೇಲ್, ಬ್ಯಾಟಿಂಗ್ ಚಾಂಪಿಯನ್ ರಾಹುಲ್ ದ್ರಾವಿಡ್, ವಿ.ವಿ.ಎಸ್. ಲಕ್ಷ್ಮಣ್ ಅವರಿದ್ದರು. ಐಟಿ ಉದ್ಯಮದ ದಿಗ್ಗಜ, ಇನ್ಫೋಸಿಸ್‌ನ ಎನ್.ಆರ್. ನಾರಾಯಣ ಮೂರ್ತಿ ಅವರೂ ಹಾಜರಿದ್ದರು. ಡಿಸಿಎಂ ಡಿ.ಕೆ. ಶಿವಕುಮಾರ್ ಕೂಡ ಆಗಮಿಸಿದ್ದರು.

ಬೆಂಗಳೂರಿನ ಕೆಎಸ್‌ಸಿಎ ಸಭಾಂಗಣದಲ್ಲಿ ಭಾನುವಾರ ನಡೆದ ಸೈಯದ್ ಕಿರ್ಮಾನಿ ಅವರ ಆತ್ಮಚರಿತ್ರೆಯ ಬಿಡುಗಡೆಯ ಸಮಾರಂಭದಲ್ಲಿ ಎರ್ರಪಳ್ಳಿ ಪ್ರಸನ್ನ, ಸೈಯದ್ ಕಿರ್ಮಾನಿ, ಡಿ.ಕೆ. ಶಿವಕುಮಾರ್, ಕಪಿಲ್‌ದೇವ್, ಎನ್. ಆರ್. ನಾರಾಯಣ ಮೂರ್ತಿ, ಬಿ.ಎಸ್. ಚಂದ್ರಶೇಖರ್, ವಿ ವಿ ಎಸ್ ಲಕ್ಷ್ಮಣ್, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ ಹಾಜರಿದ್ದರು —ಪ್ರಜಾವಾಣಿ ಚಿತ್ರ/ಕೃಷ್ಣ ಕುಮಾರ್ ಪಿ.ಎಸ್.

ಪುಸ್ತಕ ಬಿಡುಗಡೆ ಮಾಡಿದ ಕಪಿಲ್ ದೇವ್, ‘ಕಿರಿ ಭಾಯ್ (ಕಿರ್ಮಾನಿ) ನಮ್ಮೊಂದಿಗೆ ತಂಡದಲ್ಲಿದ್ದಾಗ ಮಿತಭಾಷಿಯಾಗಿದ್ದರು. ಶಾಂತಚಿತ್ತದಿಂದ ಇರುತ್ತಿದ್ದರು. ಆದರೆ ಅವರ ಶಿಸ್ತು, ಸಂಯಮವನ್ನು ನೋಡಿ ನಾವೂ ಬಹಳಷ್ಟು ಕಲಿತಿದ್ದೇವೆ’ ಎಂದರು.

ಎನ್.ಆರ್. ನಾರಾಯಣಮೂರ್ತಿ ಮಾತನಾಡಿ, ‘ಕರ್ನಾಟಕದ ಕ್ರಿಕೆಟಿಗರು ಸಭ್ಯ ಸಂಸ್ಕೃತಿಯವರು. ಆದ್ದರಿಂದ ಅವರು ಎಲ್ಲಿಯೇ ಹೋಗಲಿ ತಮ್ಮ ಉತ್ತಮ ಆಟದ ಜೊತೆಗೆ, ಸ್ವಭಾವದಿಂದಲೂ ಜನಮನ ಗೆಲ್ಲುತ್ತಾರೆ. ದೇಶಕ್ಕೆ, ರಾಜ್ಯಕ್ಕೆ ಕೀರ್ತಿ ತರುತ್ತಾರೆ. ಅಂತಹ ಗಣ್ಯರಲ್ಲಿ ಕಿರ್ಮಾನಿ ಕೂಡ ಅಗ್ರಮಾನ್ಯರು’ ಎಂದರು.

‘ನಾನು ಇಲ್ಲಿ ಉಪಮುಖ್ಯಮಂತ್ರಿಯಾಗಿ ಬಂದಿಲ್ಲ. ಕಿರ್ಮಾನಿಯವರ ಅಭಿಮಾನಿಯಾಗಿ ಬಂದಿರುವೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು

ಈಜು: ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಈಜುಪಟುಗಳು ವಿಜಯವಾಡದಲ್ಲಿ ಭಾನುವಾರ ಮುಕ್ತಾಯವಾದ 35ನೇ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಮುಡಿಗೇರಿಸಿಕೊಂಡರು.

ರಾಜ್ಯದ ಬಾಲಕ ಮತ್ತು ಬಾಲಕಿಯರು ಒಟ್ಟು 1029 ಅಂಕಗಳನ್ನು ಸಂಪಾದಿಸಿದರು. ತಮಿಳುನಾಡು ತಂಡವು 648 ಅಂಕದೊಂದಿಗೆ ರನ್ನರ್ಸ್ ಅಪ್ ಆಯಿತು.

ಕರ್ನಾಟಕದ ಸಿದ್ಧಿ ಜಿ. ಶಾ (ಗುಂಪು 1), ಹಿತಾಶ್ರೀ ಎನ್ (ಗುಂಪು 2) ಮತ್ತು ಆರಾಧ್ಯಾ ಆಚಾರ್ (ಗುಂಪು 3) ಬಾಲಕಿಯರ ವೈಯಕ್ತಿಕ ವಿಭಾಗದ ಪ್ರಶಸ್ತಿ ಗೆದ್ದರು.

ಬಾಲಕರ ವಿಭಾಗದಲ್ಲಿ ಆಂಧ್ರ ಪ್ರದೇಶದ ಸಮದೇವ್ ಮೊಂಗಮ್ (ಗುಂಪು 1) ಮತ್ತು ಯಜ್ಞ ಸಾಯಿ ಮೊಂಗಮ್ (ಗುಂಪು 2) ಮತ್ತು ತಮಿಳುನಾಡಿನ ಆರ್ಯ ಸತಾರ್ (ಗುಂಪು 3) ವೈಯಕ್ತಿಕ ಚಾಂಪಿಯನ್ ಆದರು. ಕರ್ನಾಟಕದ ಪವನ್ ಕೃಷ್ಣಾ ಎನ್. ಅವರು ಬಾಲಕರ (ಗುಂಪು 3) ವಿಭಾಗದ 400 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕೂಟ ದಾಖಲೆ ಬರೆದರು.

ಫಲಿತಾಂಶ: (ಕರ್ನಾಟಕದ ವಿಜೇತರು ಮಾತ್ರ): ಬಾಲಕರು (ಗುಂಪು 1): 50 ಮೀ. ಫ್ರೀಸ್ಟೈಲ್: ಅನೀಶ್ ಅನಿರುದ್ಧ ಕೋರೆ–2; 1500 ಮೀ. ಫ್ರೀಸ್ಟೈಲ್: ಜೀವಾಂಶ್ ಮಂಜುನಾಥ್ ಸುಬ್ರಹ್ಮಣ್ಯ– 2; ದಕ್ಷ್ ಪ್ರಸಾದ್–3; 400 ಮೀ. ಫ್ರೀಸ್ಟೈಲ್: ರೇಣುಕಾಚಾರ್ಯ ಹೊದ್ಮನಿ– 3; 100 ಮೀ. ಬ್ರೆಸ್ಟ್ ಸ್ಟ್ರೋಕ್: ಆಯುಷ್ ಶಿವರಾಜು ಮಾಗನಹಳ್ಳಿ–1; ಸಾಯೇಶ್ ಕಿಣಿ–3; 200 ಮೀ. ಬ್ಯಾಕ್‌ಸ್ಟ್ರೋಕ್: ಆಕಾಶ್ ಮಣಿ–2; ಆರ್ಯನ್ ಪಾಟೀಲ್– 3. 4x100 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ (ಸ್ವರೂಪ್ ಧನುಚೆ, ಸೂರ್ಯ ಜೆ.ಟಿ, ಅನ್ವಿತ್ ರೈ, ಅನೀಶ್ ಅನಿರುದ್ಧ ಕೋರೆ)–1.

ಬಾಲಕಿಯರು (ಗುಂಪು 1): 400 ಮೀ. ಫ್ರೀಸ್ಟೈಲ್: ಜನ್ಯಾ ಬಿ.ಎಸ್–1; ಆಸ್ರಾ ಸುಧೀರ್–3; 200 ಮೀ. ಬ್ಯಾಕ್ ಸ್ಟ್ರೋಕ್: ಸಿದ್ಧಿ ಜಿ. ಶಾ– 1; ತನ್ಮಯಿ ಧರ್ಮೇಶ್– 2; 100 ಮೀ. ಬ್ರೆಸ್ಟ್ ಸ್ಟ್ರೋಕ್: ಪ್ರತೀಕ್ಷಾ ಎನ್. ಶೆಣೈ–1; ಭಾಷಿಕಾ ಬಿ.ಕೆ–3; 4x100 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ (ರಿಷಿಕಾ ಎಂ.ವಿ, ಜಗಶ್ರೀ ಪೂಜಾ, ಲಿಪಿಕಾ ದೇವ್ ಜಿ.ಜೆ, ರಿಷಿಕಾ ಯು.ಎಂ)–1; 50 ಮೀ ಫ್ರೀಸ್ಟೈಲ್: ಇಂಚರಾ ಫಣೀಂದ್ರನಾಥ್– 1, ರಿಷಿಕಾ ಯು.ಎಂ–2

ವಾಟರ್ ಪೋಲೊ: ಬಾಲಕರು: ಕೇರಳ–1, ಕರ್ನಾಟಕ–2, ತಮಿಳುನಾಡು–3: ಬಾಲಕಿಯರು: ಕೇರಳ–1, ಕರ್ನಾಟಕ 2, ತಮಿಳುನಾಡು–3

ವಿಜಯವಾಡದಲ್ಲಿ ಮುಕ್ತಾಯಗೊಂಡ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಕರ್ನಾಟಕ ತಂಡ